ಅಮೇರಿಕೆಯೊಳಗಿನ ಬಡ ವಿದ್ಯಾರ್ಥಿಗಳು.

ಕನ್ನಡ ಸಾಹಿತ್ಯ ಪರಿಷತ್ತು, ಸರಸ್ವತಿ ಭಂಡಾರ,
ಬೆಂಗಳೂರು-೧೮.

7 N
1759

Digitized by ROJA MUTHIAH RESEARCH LIBRARY

1759

Digitized by ROJA MUTHIAH RESEARCH LIBRARY

ವಾಗ್ಭೂಷಣ-ಗ್ರಂಥಮಾಲೆ—೬೯.

# ಅಮೇರಿಕೆಯೊಳಗಿನ ಬಡ ವಿದ್ಯಾರ್ಥಿಗಳು.

ಲೇಖಕ,

**ಶ್ರೀನಿವಾಸ ಪಾಂಡುರಂಗ ಕೋಟಿ,**

ರೆಂಜಫಾರೆಸ್ಟ ಆಫಿಸರ

**ಹಾವಗಲ್ಲ.**

ಧಾರವಾಡದೊಳಗೆ ಶ್ರೀ. ನಾರಾಯಣರಾವ ದೇಶಪಾಂಡೆ ಬಿ. ಎ.
ಎಲ್ ಎಲ್. ಬಿ. ಇವರು ಕರ್ನಾಟಕ ವಿದ್ಯಾವರ್ಧಕ
ಸಂಘದ ಆಫಿಸಿನಲ್ಲಿ ಪ್ರಕಟಿಸಿದರು.

ಬೆಳಗಾವಿಯೊಳಗೆ ದೇವೇಂದ್ರ ಫಡೆಪ್ಪಾ ಚೌಗುಲೆ ಇವರು
ತಮ್ಮ ಶ್ರೀಮಹಾವೀರ ಮುದ್ರಣಾಲಯದಲ್ಲಿ
ಮುದ್ರಿಸಿದರು.

(೧ನೆಯ ಆವೃತ್ತಿ.)

ಸನ್ ೧೯೨೦.

**ಬೆಲೆ ೦-೫-೦.**

ಕರ್ನಾಟಕ ಸಾಹಿತ್ಯ ಪರಿಷತ್ತು
ಪುಸ್ತಕ ಭಂಡಾರ
ಕ್ರಮ ಸಂಖ್ಯೆ 1759 ವರ್ಗ ಸಂಖ್ಯೆ 615
ತಾರೀಖು........
ಬೆಲೆ........

Digitized by ROJA MUTHIAH RESEARCH LIBRARY

ಬಡ ಕನ್ನಡ ವಿದ್ಯಾರ್ಥಿಗಳಿಗೆ

ಪ್ರೇಮಪುರಃಸರವಾಗಿ

ಅರ್ಪಿಸಿಯದೆ.

A-1759.
T,7.7 N

“ಉದ್ಯೋಗವು ಕೀಳುತನದ್ದೆಂದು ಎಣಿಸಲ್ಪಟ್ಟಲ್ಲೆಲ್ಲ ಅವನತಿಯೂ ನಾಶವೂ ಕಟ್ಟಿಟ್ಟದ್ದೇ! ಇಂಥಲ್ಲಿ, ಕಲಾಕೌಶಲ್ಯಗಳ ಅಭಿರುಚಿಯ ಪ್ರವೃತ್ತಿಯು ಕೂಡ ಒಂದು ತರದ ದುಃಸಹ ಶ್ರಮವೆನಿಸುವದು. ಇದಕ್ಕೆ ವಿಪರೀತವಾಗಿ, ಉದ್ಯೋಗಕ್ಕೆ ಮಾನ ಮಾನ್ಯತೆಯಿದ್ದಲ್ಲಿ ಚೈತನ್ಯವೂ, ಜ್ಞಾನವೂ ಮೂರ್ತಿಮತ್ತಾಗಿ ನೆಲೆಗೊಂಡಿರುವವು; ಕಲಾ ಕೌಶಲ್ಯಗಳೂ ಅಭಿವೃದ್ಧಿಯಾಗುವವು.”

“ಅಸಹಾಯರಾದ ಬಡ ಧನಿಕರೇ! ಉತ್ತುಂಗ ಸ್ಫಟಿಕಶಿಲಾಮಯವಾದ ದೇವಾಲಯಗಳನ್ನೂ ದೇವಪ್ರತಿಮೆಗಳನ್ನೂ ಸ್ಥಾಪಿಸುವದರಿಂದ ನಿಮ್ಮ ಅಂತಃಕರಣದೊಳಗಿನ ವ್ಯಗ್ರತೆಯು ಶಾಂತವಾಗಲಾರದು. ನಿಮಗೆ ದುಃಖವಾಗುತ್ತದೆಂಬದನ್ನು ಪೂರ್ಣವಾಗಿ ನಾನು ಬಲ್ಲೆನು. ಮಾನಧನರಾದ ನೀವು ಈ ಸಂಗತಿಯನ್ನು ಒಂದುವೇಳೆ ಒಪ್ಪಿಕೊಳ್ಳಲಿಕ್ಕಿಲ್ಲ. **ಹೊಟ್ಟೆಬಟ್ಟೆಗಿಲ್ಲದೆ ಬಳಲುತ್ತಿರುವ ಪ್ರತಿನಾರಾಯಣರನ್ನೂ ದುಡಿದುಡಿದು ಹೆಣಗುತ್ತಿರುವ ವಿಷ್ಣುರೂಪಿಗಳನ್ನೂ ಅರ್ಚಿಸಿರಿ!** ಬಡ ಹಿಂದೀ ವಿದ್ಯಾರ್ಥಿಗಳನ್ನು, ಉಪಯುಕ್ತ ಹೋರೆಗಳನ್ನು ಕಲಿತುಕೊಂಡು ಬರುವದಕ್ಕಾಗಿ ಅಮೇರಿಕೆಗೆ ಕಳುಹಿಸಿರಿ; ಕಲಿತು ಬಂದಬಳಿಕ ಅವರು ಇಲ್ಲಿಯ ತಮ್ಮ ಬಾಂಧವರಿಗೆ ಸ್ವಾವಲಂಬನದ ಮಾರ್ಗವನ್ನು ನಿಸ್ಸಂದೇಹವಾಗಿ ತೋರಿಸುವದರಿಂದ ಸಹಸ್ರಾವಧಿ ಹೊಟ್ಟೆಗಿಲ್ಲದ ಬಡಬಗ್ಗರ ಪ್ರಾಣರಕ್ಷಣೆಯಾಗುವದು.”

— ರಾಮತೀರ್ಥ ಸ್ವಾಮಿಗಳು.

# ಪೀಠಿಕೆ.

ಈ ಚಿಕ್ಕ ಪುಸ್ತಕವು ‘ಸತ್ಯದೇವ’ ಸ್ವಾಮಿಯವರು ಪ್ರಾರಂಭಿಸಿರುವ ಸತ್ಯಗ್ರಂಥಮಾಲೆಯೊಳಗಿನ ‘ಅಮೇರಿಕಾಕೇ ನಿರ್ಧನ ವಿದ್ಯಾರ್ಥಿಯೋಂಕೆ ಪರಿಶ್ರಮ’ವೆಂಬ ಮಹತ್ವದ ಪುಸ್ತಕಾಧಾರದಿಂದ ಶ್ರೀಯುತ ನಾಗೇಶ ವಾಸುದೇವ ಗುಣಾಜೀ, ಬೀ. ಏ. ಎಲ್. ಎಲ್. ಬೀ. ಬೆಳಗಾಂವ ಇವರು ೧-೪-೧೯೧೪ನೇ ಇಸ್ವಿಯಲ್ಲಿ ಮಹಾರಾಷ್ಟ್ರಭಾಷೆಯಲ್ಲಿ ಬರೆದ “ಅಮೇರಿಕೇತೀಲ ಗರೀಬ ವಿದ್ಯಾರ್ಥಿ” ಎಂಬ ಪುಸ್ತಕದ ಪರಿವರ್ತನೆಯಾಗಿರುವದು. ಮೂಲ ಗ್ರಂಥದ ಪರಿಚಯವು ಕನ್ನಡಿಗರಿಗಾಗಿ, ಅವರಲ್ಲಿ ಆ ಗ್ರಂಥಗಳನ್ನು ಹಿಂದೀ ಹಾಗೂ ಮಹಾರಾಷ್ಟ್ರ ಭಾಷೆಯೊಳಗಿಂದ ಓದುವ ಕುತೂಹಲವುಂಟಾಗಬೇಕೆಂದೂ, ಜನರಿಗೆ—ವಿಶೇಷವಾಗಿ ತರುಣರಿಗೆ ಉದ್ಯೋಗದ ಶ್ರೇಷ್ಠತೆಯು ಮನವರಿಕೆಯಾಗಿ ಅದರ ಅಭಿರುಚಿಯು ಅವರಿಗೆ ಹತ್ತಬೇಕೆಂದೂ, ಕನ್ನಡ ವಿದ್ಯಾರ್ಥಿಗಳು ಸ್ವಾವಲಂಬನವನ್ನು ಕಲಿತುಕೊಳ್ಳಬೇಕೆಂದೂ, ಅಪೇಕ್ಷಿಸಿ ಈ ಭಾಷಾಂತರವನ್ನು ಕೈಕೊಂಡಿರುವೆವು. ಮೂಲಗ್ರಂಥಕಾರರಾದ ‘ಸತ್ಯದೇವ’ ಸ್ವಾಮಿಯವರ ಚರಿತ್ರವು ಬೋಧಪ್ರದವಾಗಿರುವದರಿಂದ ಸಾರಾಂಶರೂಪವಾಗಿ ಅದನ್ನು ಇದರಡಿಯಲ್ಲಿ ಕೊಡುವೆವು.

ಮಹಾಶಯರಾದ ‘ಸತ್ಯದೇವ’ ಸ್ವಾಮಿಗಳು ಪಂಜಾಬ ಪ್ರಾಂತದಲ್ಲಿ ಲುಧಿಯನಾ ಎಂಬಲ್ಲಿ ವಿಕ್ರಮಸಂವತ್ಸರದ ೧೯೩೭ನೇ ವರ್ಷದಲ್ಲಿ (೧೮೪೧ ಇಸ್ವಿ) ಜನ್ಮಹೊಂದಿದರು. ಇವರ ತಂದೆಯವರು ಸರಕಾರೀ ನೌಕರಿಯಲ್ಲಿದ್ದರು. ಅವರ ಸಂಬಳವು ತೀರ ಕಡಿಮೆಯಾಗಿದ್ದು, ದೊಡ್ಡ ಕುಟುಂಬಕ್ಕೆ ಸಾಲುತ್ತಿರಲಿಲ್ಲ. ‘ಸತ್ಯದೇವ’ ಇವರು ಲಾಹೋರದ ‘ದಯಾನಂದ ಅಂಗ್ಲೋ-ವೈದಿಕ ಹಾಯಸ್ಕೂಲಿ’ನಲ್ಲಿ ಶಿಕ್ಷಣಹೊಂದಿ ೧೮೯೭ನೇ ಇಸ್ವಿಯಲ್ಲಿ ಮ್ಯಾಟ್ರಿಕ್ಯುಲೇಶನ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರು. ಅದೇ ವರ್ಷ ಅವರ ಮದುವೆಮಾಡಬೇಕೆಂದು ಅವರ ತಂದೆಯವರು ಬಹಳವಾಗಿ ಯತಿಸಿದರು; ಆದರೆ ‘ಸತ್ಯದೇವ’ ಇವರು ಅದಕ್ಕೆ ಖಂಡಿತವಾಗಿ ಒಪ್ಪಿಕೊಳ್ಳಲಿಲ್ಲ. ಸೇವಾಧರ್ಮದ ವಿಷಯದಲ್ಲೂ ಇವರಿಗೆ ಮೊದಲಿನಿಂದ ತಿರಸ್ಕಾರವಿದ್ದಾಗ್ಯೂ ಹಿರಿಯರ ಅತ್ಯಾಗ್ರಹದಿಂದ ಅವರು ಆವೃತ್ತಿಯನ್ನು ಬಲಾತ್ಕಾರದಿಂದ ಸ್ವೀಕರಿಸಬೇಕಾಯಿತು; ಆದರೆ ಆರೇ ತಿಂಗಳಲ್ಲಿ ಅದಕ್ಕೆ ಶರಣು ಹೊಡೆದು ಸಂಸ್ಕೃತದ ಅಧ್ಯಯನಕ್ಕಾಗಿ ಅವರು ಕಾಶೀಪಟ್ಟಣಕ್ಕೆ ತೆರಳಿದರು. ೧೮೯೯ರಲ್ಲಿ ಇವರ ತಾಯಿಯವರಿಗೆ ದೇಹದಲ್ಲಿ ಆಲಸ್ಯವುಂಟಾಗಲು ಇವರು ಲಾಹೋರಕ್ಕೆ ತಿರಗಿ ಬಂದು ‘ದಯಾನಂದ ಅಂಗ್ಲೋ-ವೈದಿಕ ಕಾಲೇಜಿ’ನಲ್ಲಿ ಪ್ರವೇಶಿಸಿದರು. ಇಸ್ವಿ ಸನ್ ೧೯೦೦ರಲ್ಲಿ ಮಾತೃಶ್ರೀಯವರ ನಿಧನದ ಮೂಲಕ ಇವರು ಕಾಲೇಜವನ್ನು ಬಿಟ್ಟು ಕಾಶಿಗೆ ಬಂದು ಆ ಪುಣ್ಯಕ್ಷೇತ್ರದಲ್ಲಿ ನಾಲ್ಕು ವರ್ಷಗಳ

Digitized by ROJA MUTHIAH RESEARCH LIBRARY

ವರೆಗೆ ಸಂಸ್ಕೃತಾಧ್ಯಯನವನ್ನು ಮಾಡಿದರು. ಕಾಶಿಯ 'ಸೆಂಟ್ರಲ್ ಹಿಂದು ಕಾಲೇಜಿ' ನಲ್ಲಿಯೂ ಇವರ ಕೆಲವಭ್ಯಾಸವಾಯಿತು. ಇಷ್ಟೆಲ್ಲ ಆದದ್ದು ಸ್ವಂತಪ್ರಯತ್ನದಿಂದಲೇ. ೧೯೦೪ರಲ್ಲಿ ಇವರು ಹಿಂದು ಕಾಲೇಜದಿಂದ ಹೊರಬಿದ್ದು ಅನೇಕ ಕಷ್ಟಗಳನ್ನು ತಾಳಿ ಅಮೇರಿಕೆಗೆ ಹೋದರು. ಪ್ರವಾಸದ ಹಾಗೂ ಅಮೇರಿಕಾನಿವಾಸದ ವೃತ್ತಾಂತವು 'ಅಮೇರಿಕಾ ಪಥಪ್ರದರ್ಶಕ' 'ಅಮೇರಿಕಾ ದಿಗ್ದರ್ಶನ' 'ಅಮೇರಿಕಾ ಭ್ರಮಣ' ಮುಂತಾದ ಸತ್ಯಗ್ರಂಥಮಾಲೆಯ ಪುಸ್ತಕಗಳಲ್ಲಿ ಸರಸವಾಗಿ ಬರೆಯಲ್ಪಟ್ಟದೆ. ಜಿಜ್ಞಾಸುಗಳು ಅವಶ್ಯವಾಗಿ ಅವನ್ನೋದಬೇಕಾಗಿ ಸೂಚನೆ. ಅಮೇರಿಕೆಯಲ್ಲಿ ಶಿಕ್ಯಾಗೋ, ಒರೇಗಾನ ಹಾಗೂ ವಾಶಿಂಗ್ಟನ್, ಇಲ್ಲಿಯ ವಿಶ್ವವಿದ್ಯಾಲಯಗಳಲ್ಲಿ ಇವರು ಅರ್ಥಶಾಸ್ತ್ರದ—ರಾಜಕೀಯ ಶಾಸ್ತ್ರದ ( Political Science ) ಅಧ್ಯಯನವನ್ನು ನಾಲ್ಕು ವರ್ಷ ಮಾಡಿ ಆ ನಂತರ ಅಮೇರಿಕೆಯೊಳಗೆ ಕಾಲುನಡಿಗೆಯಿಂದ ಬಹಳ ಪ್ರವಾಸ ಮಾಡಿದರು. ಒಟ್ಟಿಗೆ ಐದುವರೆ ವರ್ಷ ಅಮೇರಿಕೆಯಲ್ಲಿ ಕಾಲಕಳೆದು ಇವರು ಸ್ವದೇಶಕ್ಕೆ ಮರಳಿಬಂದರು.

ಈರೀತಿ ನಾನಾಕಷ್ಟಗಳನ್ನು ತಾಳಿ ಸಂಪಾದಿಸಿದ ಜ್ಞಾನಾನುಭವಗಳು ತಮ್ಮ ದೇಶಬಾಂಧವರಿಗೆ ದೊರೆಯಬೇಕೆಂಬ ಸದುದ್ದೇಶದಿಂದ ಇವರು ೧೯೧೧ನೇ ಇಸ್ವಿಯಲ್ಲಿ ಸುಲಭ ಹಾಗೂ ಬಲವುಳ್ಳ ಹಿಂದೀಭಾಷೆಯಲ್ಲಿ ಸತ್ಯಗ್ರಂಥಮಾಲೆಯನ್ನು ಬರೆಯಲುಪಕ್ರಮಿಸಿದರು. ಈ ವರೆಗೆ ಈ ಮಾಲೆಯ ಎಂಟುಹತ್ತು ಪುಷ್ಪಗಳು ಗ್ರಥಿತವಾಗಿರುವವು. ಸೇವಾಧರ್ಮವನ್ನಂಗೀಕರಿಸಿ ಇತರರಂತೆಯೇ ಸುಖಸಮಾಧಾನದಲ್ಲಿ ಕಾಲಕಳಿಯದೆ ಇವರು ಸ್ವತಂತ್ರತೆಯನ್ನು ಕಾಯ್ದುಕೊಂಡು ಕಷ್ಟನಷ್ಟಗಳನ್ನನುಭೋಗಿಸಿ ಜನಸೇವೆಯನ್ನೂ ಮಾತೃಭಾಷಾಸೇವೆಯನ್ನೂ ಮಾಡುತ್ತಿರುವರು. ಪ್ರಸ್ತುತಕಾಲದಲ್ಲಿ ಹಿಂದೀಭಾಷೆಯು ರಾಷ್ಟ್ರೀಯ ಭಾಷೆಯಾಗುವ ಸಂಭವವಿರುವದರಿಂದ ಕನ್ನಡ ವಾಚಕರು ಶ್ರೀ. 'ಸತ್ಯದೇವ' ಇವರ ಹಿಂದೀ ಸತ್ಯಗ್ರಂಥಮಾಲೆಯನ್ನೋದಿ ತಮ್ಮ ಹಿಂದೀಭಾಷೆಯ ಜ್ಞಾನವನ್ನು ಬೆಳಿಸಬೇಕೆಂತಲೂ, ಮನೆಯಲ್ಲಿ ಕೂತಲ್ಲಿಯೇ 'ಸತ್ಯದೇವ' ಇವರ ಕೂಡ ಅಮೇರಿಕೆಯಲ್ಲಿ ಸಂಚರಿಸಿ ಅವರಿಗುಂಟಾದ ಜ್ಞಾನಾನುಭವಗಳ ಸಹಕಾರಿಗಳಾಗಬೇಕೆಂತಲೂ ಆಗ್ರಹಪೂರ್ವಕವಾಗಿ ಪ್ರಾರ್ಥಿಸುವೆವು.

ಕನ್ನಡದಲ್ಲಿ ಸ್ವತಂತ್ರ ಗ್ರಂಥಗಳನ್ನು ಬರೆಯುವದರಿಂದಲೇ ಆ ಭಾಷೆಯ ಏಳ್ಗೆಯಾಗುವದೆಂದೂ, ಭಾಷಾಂತರದಿಂದ ಭೂಷಣ ಉಳಿಯುವದಿಲ್ಲೆಂದೂ, ಪ್ರಸ್ತುತ ತರದ ಗ್ರಂಥಗಳ ಮೇಲೆ ಕೆಲವರ ಆಕ್ಷೇಪಣೆಯದೆ. ಅದರ ಅಯಥಾರ್ಥತ್ವವು ಮೇಲೆಯೇ ಕಾಣುವದರಿಂದ ಅದನ್ನು ಖಂಡಿಸುವದರಲ್ಲಿ ವೇಳೆಯ ದುರುಪಯೋಗ ಮಾಡುವ ಅವಶ್ಯವಿಲ್ಲ.



ಕೊನೆಯಲ್ಲಿ ತಮ್ಮ ಗ್ರಂಥವನ್ನು ಭಾಷಾಂತರಿಸಲಿಕ್ಕೆ ಕೂಡಲೇ ಒಪ್ಪಿಗೆಯನ್ನಿತ್ತ ಬಗ್ಗೆ ಮಹಾಶಯ ನಾಗೇಶರಾವ ಗುಣಾಜೀ ಇವರ ಉಪಕಾರವನ್ನು ಕೃತಜ್ಞತೆಯಿಂದ ಸ್ಮರಿಸಿ, ಉದ್ಯೋಗವ್ಯವಸಾಯಗಳ ಮಹತ್ವವನ್ನು ನಮ್ಮ ಜನರು ಚೆನ್ನಾಗಿ ಅರಿತುಕೊಂಡು ಅದರಲ್ಲಿ ಅಭಿರುಚಿಯನ್ನು ತಾಳಲೆಂದು ಜಗದೀಶನನ್ನು ಪ್ರಾರ್ಥಿಸಿ ಈ ಅಲ್ಪ ಪೀಠಿಕೆಯನ್ನು ಮುಗಿಸುವೆವು.

ಹಾವಗಲ್ಲ,<br>ತಾ॥ ೨೭-೭-೧೯೧೮ } ಶ್ರೀ. ಪಾ. ಕೋಟೇ.

---

## ಸತ್ಯದೇವಸ್ವಾಮಿಗಳ ಉಪೋದ್ಘಾತ.

ಅನೇಕ ಶತಮಾನಗಳಿಂದ ಪರರಾಷ್ಟ್ರಗಳ ಕೂಡ ಇರಬೇಕಾಗಿದ್ದ ಭಾರತೀಯರ ಸ್ವತಂತ್ರಸಂಬಂಧವು ಕಡಿದುಹೋದದ್ದರಿಂದ ನಮ್ಮಲ್ಲಿ ಇಲ್ಲದ ಅಹಂಭಾವನೆಗಳು ನೆಲೆಗೊಂಡಿರುವವು. ಇಡೀ ಜಗತ್ತಿನಲ್ಲಿ ನಮ್ಮದೊಂದೇ ಉತ್ತಮದೇಶವೆಂಬ ಕಲ್ಪನೆಯು ಅಜ್ಞಾನವಶದಿಂದ ನಮ್ಮ ತಲೆಯಲ್ಲಿ ತುಂಬಿರುವದು. ಪರದೇಶಗಮನದ ಇಷ್ಟಪದ್ಧತಿಯು ನಿಂತುಹೋದದ್ದರಿಂದ ನಮ್ಮಲ್ಲಿ ಏಕದೇಶೀಯ ವಿಚಾರಗಳ ಪ್ರಾಬಲ್ಯವಾಯಿತು; ವಿದ್ಯಾಪ್ರಚಾರದ ಅಭಾವವಾದದ್ದರಿಂದ 'ಜಾತಿಗೆ ಭೇದವಿದ್ದರೂ ನೀತಿಗೆ ಭೇದವಿಲ್ಲ' ವೆಂಬ ಅತ್ಯುಚ್ಚ ತತ್ವವನ್ನು ನಾವು ಮೂಲೆಗೊತ್ತಿ ಮತಮತಾಂತರಗಳಲ್ಲಿ ಮತ್ಸರವನ್ನು ಬೆಳಿಸಿದೆವು. ಪ್ರವಾಸದ ಸೌಕರ್ಯಗಳ ಅಭಾವದ ಮೂಲಕ ಒಂದು ಪ್ರಾಂತದವರು ಇನ್ನೊಂದು ಪ್ರಾಂತದವರನ್ನು ವಿದೇಶೀಯರೆಂದೆಣಿಸತೊಡಗಿದರು. ಪಂಜಾಬ, ಸಂಯುಕ್ತ ಪ್ರಾಂತ, ಬಿಹಾರ, ಬಂಗಾಲ, ಮಧ್ಯಪ್ರಾಂತ, ಮಹಾರಾಷ್ಟ್ರ, ಗುಜರಾಥ, ರಜಪೂತಸ್ಥಾನ, ಮದ್ರಾಸ ಮೊದಲಾದ ಪ್ರಾಂತಗಳು ಬೇರೆ ಬೇರೆ ದೇಶಗಳೆಂದೆಣಿಸಲ್ಪಡಹತ್ತಿದ್ದಲ್ಲದೆ ಅಲ್ಲಲ್ಲಿಯ ಜನರು ಬೇರೆ ಪ್ರಾಂತದವರಿಗೆ ಭಿನ್ನ ಜಾತಿಯವರೆಂದು ಭಾವಿಸತೊಡಗಿದರು. ಇದರಿಂದ, ಜಗತ್ತಿನಲ್ಲಿಯ ಬೇರೆ ಜನಾಂಗದವರ ಇತಿಹಾಸವು ನಮಗೆ ಸ್ವಲ್ಪಾದರೂ ತಿಳಿಯದಂತಾಯಿತು; ನಮ್ಮ ದೇಶದ ಹೊರಗೆ ಜಗತ್ತಿನಲ್ಲಿ ಆದ ಹೊಸ ಹೊಸ ಕ್ರಾಂತಿಗಳ ಗಂಧವು ಕೂಡ ನಮಗೆ ಇಲ್ಲದಂತಾಯಿತು ಯುರೋಪದಲ್ಲಿ ಆದ ಕ್ರಾಂತಿಗಳೂ ಚಲನವಲನಗಳೂ, ಅಲ್ಲಿಯ ಜನರು ತಮ್ಮತಮ್ಮೊಳಗೆ ಮಾಡಿದ ಯುದ್ಧಗಳೂ, ಅವುಗಳಲ್ಲಿ ಯಾರು ಯಾವ ಕಾರಣದಿಂದ ಸೋತರೆಂಬುವದೂ ನಮಗೆ ಗೊತ್ತಾಗಲಿಲ್ಲ. ಜಗತ್ತಿನಲ್ಲಿ ನಾವೊಬ್ಬರೇ ಶ್ರೇಷ್ಠರೆಂದೂ, ನಮ್ಮ ದೇಶವೇ ಸುಧಾರಣೆಯ ಶಿಖರಕ್ಕೆ ಮುಟ್ಟಿದ್ದೆಂದೂ ನಮಗೆ ನಮ್ಮ ಗುರುಗಳು ಹೇಳುತ್ತಬಂದರು. ಈ ಆತ್ಮಶ್ಲಾಘೆಯ ಉಪದೇಶದಿಂದ ನಾವು ಬಹಳ ಹಾನಿ ಹೊಂದಿದೆವು; ಅಹಂಮನ್ಯತೆಯ ಪಿಶಾಚಿಯು ನಮ್ಮಲ್ಲಿ ಸೇರಿತು. ಎರಡನೆಯವರಿಂದ ನಮಗೆ ಕಲಿಯತಕ್ಕದ್ದೇನೂ ಇಲ್ಲ, ನಾವು ಸರ್ವಜ್ಞರು

Digitized by ROJA MUTHIAH RESEARCH LIBRARY

ಎಂಬ ರೋಗವು ನಮ್ಮ ದೇಶದಲ್ಲಿ ಹಬ್ಬಿತು. ಈ ರೋಗದಿಂದ ನಮ್ಮ ಶಕ್ತಿಯು ಕ್ಷೀಣವಾಗತೊಡಗಿತು. ಅಭಿಮಾನಾಸ್ಪದವಾದ ನಮ್ಮ ಧರ್ಮವು ಗ್ಲಾನಿಹೊಂದಹತ್ತಿತು. ಬಾಹ್ಯ ಆ ಡಂಭಾಚಾರವೇ ಧರ್ಮವೆಂದು ನಾವು ತಿಳಿಯತೊಡಗಿದೆವು; ಅಸತ್ಯ ಹಾಗೂ ಅನುಪಯುಕ್ತ ಸಂಗತಿಗಳನ್ನು ಕುರಿತು ನಾವು ನಮ್ಮೊಳಗೆ ವಿತಂಡವಾದ ಮಾಡುವದೇ ಪಾಂಡಿತ್ಯವೆಂದು ಭಾವಿಸಹತ್ತಿದೆವು. ನಾಲ್ಕು ಜನ ಪಂಡಿತರು ಒತ್ತಟ್ಟಿಗೆ ಕೂಡುವದೊಂದೇ ತಡ; ನಿರರ್ಥಕ ಚರ್ವಿತಚರ್ವಣಕ್ಕೆ ಪ್ರಾರಂಭ! ಪ್ರಕೃತಿಗೆ ಆಗಮನ ನಿಷ್ಕ್ರಮಣದ ( ಉತ್ಪತ್ತಿ ಮತ್ತು ಲಯದ ) ಸಿದ್ಧಾಂತವು ಮಾನ್ಯವದೆ. ಅನೇಕ ಕಾಲಪರ್ಯಂತರವಾಗಿ ಮುಚ್ಚಲ್ಪಟ್ಟ ಮನೆಯೊಳಗಿನ ಹವೆಯು ದೂಷಿತವಾಗಿ ರೋಗೋತ್ಪಾದಕವಾಗುತ್ತದೆ. ಬಳಿಕೆ. ಇಲ್ಲದ ಜಲಾಶಯದಲ್ಲಿಯ ನೀರು ಕೆಟ್ಟು ಅದರಲ್ಲಿ ಹುಳಬೀಳುತ್ತದೆ. ಇದೇ ತತ್ವಕ್ಕನುಸರಿಸಿ ಹಿಂದುಸ್ಥಾನದೊಳಗಿನ ಜನರ ಪರದೇಶಗಮನದ ಪ್ರವಾಹವು ನಿಂತುಹೋದ್ದರಿಂದ, ಸಹಜವಾಗಿಯೇ ಅವರ ವಿಚಾರದಲ್ಲಿ ಏಕದೇಶೀಯತ್ವವು ಉಂಟಾಗಿ ಅವರಲ್ಲಿ ಅವನತಿಯ ರೋಗಬೀಜಗಳು ಪ್ರಾದುರ್ಭೂತವಾದವು. ಈ ರೋಗಪ್ರಾಬಲ್ಯವು ಕೊನೆಗೆ ಪರಮಾವಧಿಗೆ ಮುಟ್ಟಿದ್ದರಿಂದ ಜನರು ಪಾಪಕ್ಕೇ ಪುಣ್ಯವೆಂದೂ, ಅಧರ್ಮಕ್ಕೇ ಧರ್ಮವೆಂದೂ ತಿಳಿಯಲಾರಂಭಿಸಿದರು. ಇದನ್ನು ಅಲ್ಲಗಳಿಯಬೇಕೆಂದರೆ, ಭೀಷ್ಮಾಚಾರ್ಯರ ವಂಶಜರಾದ ನಾವು ಬಾಲವಿವಾಹವು ಧರ್ಮಸಮ್ಮತವಾದದ್ದೆಂದು ಹೇಳುವದನ್ನು ಸಮರ್ಥನೆಮಾಡುವದು ಹೇಗೆ? '**ಏಕಮೇವಾದ್ವಿತೀಯಂ**' ಎಂದು ಗರ್ಜಿಸುವ ನಾವು, ನಮ್ಮ ಇತರ ಜ್ಞಾತಿಬಂಧುಗಳನ್ನು ತಿರಸ್ಕರಿಸುವ ಕಾರಣವೇನು? ಸಾವಿರಾರು ವರ್ಷಗಳ ಏಕದೇಶೀಯತ್ವದಿಂದಲೂ, ಸಂಕುಚಿತವೃತ್ತಿಯಿಂದಲೂ ನಮ್ಮ ದೇಶದಲ್ಲಿ ಭಯಂಕರ ರೋಗಗಳು ಹಬ್ಬಿದವು.

ಹಿಂದುಸ್ಥಾನದ ಹೊರಗಿನ ಜನರ ಕೂಡ, ನಮ್ಮ ಸಂಬಂಧವು ಅಪ್ರತಿಹತವಾಗಿ ಇದ್ದದ್ದಾಗಿದ್ದರೆ, ನಮ್ಮ ದೇಶಕ್ಕೆ ಇಂಥ ದುರವಸ್ಥೆಯು ಬರುತ್ತಿದ್ದೇ ಇಲ್ಲ! ಪರರಾಷ್ಟ್ರಗಳ ಉನ್ನತಿ ಹಾಗೂ ಅವನತಿಯ ಇತಿಹಾಸವು ನಮಗೆ ಗೊತ್ತಾಗಿದ್ದರೆ ಕಾಲಮಾನಕ್ಕೆ ಅನುಸರಿಸಿ ನಾವು ನಮ್ಮ ಉನ್ನತಿಯನ್ನು ಮಾಡಿಕೊಳ್ಳದೆ ಇರುತ್ತಿದ್ದಿಲ್ಲ; ಈಗಿನ ಹೀನಸ್ಥಿತಿಯನ್ನು ನೋಡುವ ಪ್ರಸಂಗ ಬರುತ್ತಿದ್ದಿಲ್ಲ. ನಮ್ಮ ಈ ಶೋಚನೀಯ ಸ್ಥಿತಿಯನ್ನು ಸುಧಾರಿಸುವ ಪ್ರಯತ್ನಗಳು ಈಗಲೂ ನಮ್ಮ ಸಮಾಜದಲ್ಲಿ ಹಲಕೆಲವು ಆಗುತ್ತಲಿರುವವು; ಆದರೆ 'ಪರೋಪದೇಶೇಪಾಂಡಿತ್ಯಂ' ಎಂಬ ನಾಣ್ಣುಡಿಗನುಸರಿಸಿ ಅವು ಮಾಡಲ್ಪಡುವದರಿಂದ ಇಷ್ಟ ಪರಿಣಾಮವಾಗುವದಿಲ್ಲ. 'ಹುಟ್ಟುಗುಣ ಹುಗಿದರೂ ಹೋಗಲಿಲ್ಲ'ವೆಂಬಂತೆ ನಮ್ಮ ಸದ್ಯಃಸ್ಥಿತಿಯಾಗಿದೆ. ಈ ನಮ್ಮ ವರ್ತಮಾನ ಸ್ಥಿತಿಯು ಸುಧಾರಿಬೇಕಾದರೆ ಅಹಂಮನ್ಯತೆಯನ್ನು ಬೇರು ಸಹಿತ ಕಿತ್ತು ಹಾಕಲಿಕ್ಕೆ ನಾವು ಸಿದ್ಧರಾಗಬೇಕು. ನಮ್ಮ ಪೂರ್ವಜರು ದೊಡ್ಡವರಿದ್ದರು ಶ್ರೇಷ್ಠರಿದ್ದರು, ಋಷಿಗಳಾಗಿದ್ದರು, ಧನವಂತರಿದ್ದರು. ಇವೇ ಮೊದಲಾದ ಅನುವಾದಗಳನ್ನು ಸಮಯವನ್ನರಿಯದೆ ಮಾಡು

Digitized by ROJA MUTHIAH RESEARCH LIBRARY



ವದು ನಮ್ಮ ಅವನತಿಯನ್ನು ಹೆಚ್ಚಿಸದೇ ಬಿಡದು. 'ನಮ್ಮ ದೇಶವು ಎಲ್ಲ ತರದ ವಿದ್ಯಾವೈಭವಗಳಿಗೆ ತವರು ಮನೆಯಾಗಿತ್ತು' ನಮ್ಮ ಪೂರ್ವಜರು ಭೂತ ಭವಿಷ್ಯಗಳನ್ನು ಬಲ್ಲವರಾಗಿದ್ದರು. ಈಗಿನ ಎಲ್ಲ ಶೋಧಗಳೂ ಅವರಿಗೆ ಗೊತ್ತಿದ್ದವು' ಎಂಬ ಹಳೇ ಹಾಡು ಹಾಡಿ, ಆತ್ಮವಂಚನೆ ಮಾಡಿಕೊಳ್ಳುವದು ಮೂರ್ಖತನವಲ್ಲದೆ ಮತ್ತೇನು? ನಮ್ಮ ಸಂಬಂಧವು ವರ್ತಮಾನಕಾಲದ ವಿಷಯವಾಗಿರುವದು. ಅಂದಬಳಿಕ ನಮ್ಮ ಸಾಂಪ್ರತದ ಸ್ಥಿತಿಯನ್ನು ಸುಧಾರಿಸುವ ವಿಚಾರವನ್ನೇ ನಾವು ಮಾಡತಕ್ಕದ್ದು. ಮೇಲಿನಿಂದ ಕೆಳಗೆ ಬರುವದರಲ್ಲಿ ಪುರುಷಾರ್ಥವಾವುದು? ದುರಭಿಮಾನ ತಾಳುವದೆಂದರೆ ನಮ್ಮ ಮುಖಕ್ಕೆ ನಾವೇ ಕಪ್ಪು ಬಡಕೊಂಡಂತೆ. ಯುರೋಪಿಯರು ತಮ್ಮ ಮೂಲ ಕಾಡುಸ್ಥಿತಿಯೊಳಗಿಂದ ತಮ್ಮ ಉನ್ನತಿಯನ್ನು ಮಾಡಿಕೊಂಡಿದ್ದು ಅವರಿಗೆ ಪರಮಭೂಷಣವಾಗಿದೆ. ಯಾಕಂದರೆ ಕೆಳಗಿನಿಂದ ಮೇಲಕ್ಕೇರಲಿಕ್ಕೆ ಉದ್ಯೋಗ, ತಾಳ್ಮೆ, ಧೈರ್ಯ ಮೊದಲಾದ ಶ್ರೇಷ್ಠ ಗುಣಗಳು ಬೇಕು. ಯುರೋಪಿಯರು ಉನ್ನತಿಗೋಸ್ಕರ ಹೇಗೆ ಯತ್ನಿಸಿದರು, ಅಮೇರಿಕನ್ನರು ಹೇಗೆ ಉನ್ನತಿ ಹೊಂದಿದರು, ಇವೇ ಮೊದಲಾದ ಎಲ್ಲ ಸಂಗತಿಗಳ ರಹಸ್ಯವನ್ನು ತಿಳಿದುಕೊಳ್ಳುವದು ನಮಗೆ ಅತ್ಯಂತ ಅವಶ್ಯಕವಾಗಿದೆ. ಪೂರ್ವಜರ ದೊಡ್ಡಸ್ತನದ ಮೇಲೆ ಅವಲಂಬಿಸದೆ ಸ್ವತಃ ನಾವು ಅದನ್ನು ದೊರಕಿಸಲಿಕ್ಕೆ ಕಲಿಯಬೇಕು. ಯುರೋಪ, ಅಮೇರಿಕಾ ಮುಂತಾದ ರಾಷ್ಟ್ರಗಳು, ವಿದ್ಯೆ, ಕಲಾಕೌಶಲ್ಯ ಮೊದಲಾದವುಗಳಲ್ಲಿ ಘನತೆಯನ್ನು ಪಡೆದದ್ದರ ರಹಸ್ಯವನ್ನು ಅರಿತುಕೊಳ್ಳಲಿಕ್ಕೆ ನಾವು ಯತ್ನಿಸಬೇಕು. ನಮಗೂ ಪಾಶ್ಚಾತ್ಯ ಸಂಸ್ಕೃತಿಗೂ ನಿಕಟ ಸಂಬಂಧವಿರುವದರಿಂದ ಅದರ ಕಾರಣ ಮೀಮಾಂಸೆಯನ್ನು ನಾವು ಅಭ್ಯಸಿಸಬೇಕು. ಹೀಗೆ ಮಾಡದೆ, ಇಲ್ಲದ ದೊಡ್ಡಸ್ತನದಲ್ಲಿಯೇ ನಾವು ನಿಮಗ್ನರಾದರೆ ನಮ್ಮ ಸರ್ವನಾಶವು ಕ್ಷಿಪ್ರದಲ್ಲಿಯೇ ಆಗುವದು ನಿಃಸಂದೇಹ!

ಬುದ್ಧಿಯಲ್ಲಾಗಲಿ, ಬಲದಲ್ಲಾಗಲಿ ನಾವು ಯಾರಿಗೂ ಹಿಂದೆ ಬೀಳುವಂತಿಲ್ಲ. ಆದರೆ ಆ ಬುದ್ಧಿ-ಬಲಗಳ ಯೋಗ್ಯ ಉಪಯೋಗವನ್ನು, ಹೇಗೆ ಮಾಡಿಕೊಳ್ಳಬೇಕೆಂಬುದನ್ನು ನಾವು ಅರಿತುಕೊಳ್ಳದಿರುವದೇ ನಮ್ಮಲ್ಲಿಯ ಕೊಂಕು. ಎಲ್ಲರಿಗೂ ನಾವು ಗುರುಗಳು, ಎಂಬ ಒಣಹೆಮ್ಮೆಯಲ್ಲಿಯೇ ನಾವು ಮುಳುಗಿರುವದರಿಂದಲೇ ನಮ್ಮ ಹಾನಿಯಾಗಿರುವದು. ಆದುದರಿಂದಲೇ ನಮ್ಮ ಜನರ ಹಿತಕ್ಕಾಗಿ ಅಮೇರಿಕೆಯಂಥ ಸುಧಾರಿಸಿದ ದೇಶದೊಳಗಿನ ಬಡವಿದ್ಯಾರ್ಥಿಗಳ ವಿಷಯಕ್ಕೆ ಅಲ್ಪಸ್ವಲ್ಪ ಜ್ಞಾನವನ್ನು ಮಾಡಿಕೊಡುವದು ಇಷ್ಟವೆಂದು ನಮಗೆ ತೋರಿತು. ಈ ಸಂಗತಿಯನ್ನು ಪರಿಶೀಲಿಸಿ, ಭಿಕ್ಷಾವೃತ್ತಿಯಿಂದಿರುವ ನಮ್ಮಲ್ಲಿಯ ವಿದ್ಯಾರ್ಥಿಗಳು, ಹಿಂದುಸ್ಥಾನದ ಸಾಂಪ್ರತದ ದುರವಸ್ಥೆಯನ್ನು ದೂರ ಮಾಡಲಿಕ್ಕೆ ಹೇಗೆ ಅಸಮರ್ಥರಾಗಿರುವರೆಂಬದಿಷ್ಟೇ ಅಲ್ಲ ಇದಕ್ಕೆ ವಿಪರೀತವಾಗಿ ಅವರಿಂದ ದೇಶಕ್ಕೆ ಹೇಗೆ ಬಹಳ ಹಾನಿಯುಂಟಾಗಹತ್ತಿದೆಂಬುವದು ಅವರಿಗೆ ತಿಳಿದು ಬರುವದು. ದುಡಿಮೆಯಿಂದ ಉದ್ಯೋಗ, ಪರಿಶ್ರಮ, ವ್ಯವಸಾಯ ಮುಂತಾದ

ಸುಗುಣಗಳ ಅಭಿವೃದ್ಧಿಯಾಗುವದರಿಂದ ನಮ್ಮಲ್ಲಿಯ ತರುಣರು ಅದರ ಮಹತ್ವವನ್ನರಿತುಕೊಳ್ಳುವದು 'ಸದ್ಯಕ್ಕೆ ಬಹಳ ಅಗತ್ಯವದೆ.'

ಎರಡನೇ ಜನರ ಸದ್ಗುಣಗಳನ್ನನುಕರಿಸಿ ನಾವು ನಮ್ಮ ಹಿತಸಾಧಿಸಿಕೊಳ್ಳಲಿಕ್ಕೆ ಕಲಿಯಬೇಕೆಂದೂ, ಆ ದ್ವಾರದಿಂದ ನಮ್ಮ ದೌರ್ಬಲ್ಯವನ್ನು ದೂರೀಕರಿಸಿ ದೇಶದೊಳಗಿನ ಉದ್ಯೋಗ ವ್ಯವಸಾಯಗಳನ್ನು ಹೆಚ್ಚಿಸಬೇಕೆಂದೂ ಸದ್ಬುದ್ಧಿಯನ್ನು ಕೊಡಲೆಂದು ನಾವು ಜಗದೀಶನನ್ನು ಪ್ರಾರ್ಥಿಸುತ್ತೇವೆ.

ಕಾಶಿ. }
೨೬-೧-೧೯೧೨ }

ನಮ್ರ,
**ಸತ್ಯದೇವ.**

---

## ಅನುಕ್ರಮಣಿಕೆ.


ಪೀಠಿಕೆ

ಸತ್ಯದೇವಸ್ವಾಮಿಗಳ ಉಪೋದ್ಘಾತ.

೧ ನೇ ಪ್ರವೇಶ:—ವೃತ್ತಪತ್ರಗಳನ್ನು ಮಾರುವ ಆರು ವರ್ಷದ ಬಾಲಕನು.

೨ ನೇ „ ಡೋರಾನ.

೩ ನೇ „ ವ್ಯಾವಹಾರಿಕಧರ್ಮದ ದೀಕ್ಷೆ.

೪ ನೇ „ ಅಮೇರಿಕೆಯೊಳಗಿನ ಶಿಕ್ಷಣದ ಅನುಕೂಲತೆಗಳು.

೫ ನೇ „ ವಿದ್ಯಾರ್ಥಿಗಳ ಪರಿಶ್ರಮ.

೬ ನೇ „ „ ಪರ್ಯಟನ.

೭ ನೇ „ ಸ್ವಾವಲಂಬಿಗಳಾದ ವಿದ್ಯಾರ್ಥಿಗಳು.

೮ ನೇ „ ಚೀನ, ಜಪಾನ ದೇಶದ ವಿದ್ಯಾರ್ಥಿಗಳು.

೯ ನೇ „ ಸ್ವಾವಲಂಬನದ ಲಾಭಗಳು.


---

# ಅಮೇರಿಕೆಯೊಳಗಿನ ಬಡವಿದ್ಯಾರ್ಥಿಗಳು.

## ೧ನೇ ಪ್ರವೇಶ.

### ವೃತ್ತಪತ್ರಗಳನ್ನು ಮಾರುವ ಆರುವರ್ಷದ ಬಾಲಕನು.

ಸದ್ಯಕ್ಕೆ ಹಿಂದುಸ್ಥಾನದಲ್ಲಿ ಶಿಕ್ಷಣಪ್ರಸಾರದ ವಿಷಯವಾಗಿ ನೋಡಿದಲ್ಲೆಲ್ಲ ಕೂಗು ಕೇಳಬರುವದು. ಶಿಕ್ಷಣಪ್ರಸಾರವು ರಭಸದಿಂದಾದ ಹೊರ್ತು ನಮ್ಮ ದೇಶದ ಏಳ್ಗೆಯಾಗಲಾರದೆಂದು ನಾಲ್ಕೂ ಕಡೆಗೆ ಸ್ಪಷ್ಟಧ್ವನಿ ಕೇಳಬರಹತ್ತಿದೆ. ಇಂಥಕಾಲಕ್ಕೆ ಇತರ ದೇಶಗಳೊಳಗಿನ ಶಿಕ್ಷಣಪದ್ಧತಿಯ ಸ್ಥಿತಿ ಯಾವ ರೀತಿಯಾಗಿರುವದೆಂಬದನ್ನು ಅರಿತುಕೊಳ್ಳುವದು ಅದರೊಳಗೂ, ವಿಶೇಷವಾಗಿ, ಅಮೇರಿಕೆಯೊಳಗಿನ ಬಡವಿದ್ಯಾರ್ಥಿಗಳು ಯಾವ ರೀತಿ ವಿದ್ಯಾರ್ಜನೆ ಮಾಡುತ್ತಾರೆಂಬದನ್ನು ತಿಳುಕೊಳ್ಳುವದು ಬಡ ಹಿಂದುಸ್ಥಾನಕ್ಕೆ ಬಹಳ ಅಗತ್ಯವೂ ಉಪಯುಕ್ತವೂ ಆಗುವಂತಿದೆ.

ನಮ್ಮ ದೇಶದಲ್ಲಿ ಬಡವಿದ್ಯಾರ್ಥಿಗಳು, ಪೂರ್ವಾಚಾರ ನಡೆದುಬಂದ ರೂಢಿಗನುಸರಿಸಿ, ಮಧುಕರಿವೃತ್ತಿಯನ್ನವಲಂಬಿಸಿ ವಿದ್ಯಾರ್ಜನೆ ಮಾಡುವರು ಕಾಶಿಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಒಂದು ಹೊತ್ತು ಅನ್ನಛತ್ರದಲ್ಲಿ ಊಟಮಾಡಿ ಅರಹೊಟ್ಟೆಲಿದ್ದು ಸಂಸ್ಕೃತಾಧ್ಯಯನ ಮಾಡುತ್ತಿರುವರು; ಆದರೆ ವಿದ್ಯಾರ್ಜನೆಯಾದ ಬಳಿಕ ದೇಶಸೇವೆಯನ್ನು ಮಾಡುವಷ್ಟು ಕಾಯಕಾಠಿಣ್ಯವೂ ಮನೋಬಲವೂ ಅವರಲ್ಲಿರುವದು ಅಪರೂಪವೆಂಬುವದರಲ್ಲಿ ಆಶ್ಚರ್ಯವೇನು? ಪರಾವಲಂಬಿಗಳಾಗಿ ಭಿಕ್ಷಾವೃತ್ತಿಯಿಂದ ವಿದ್ಯಾರ್ಜನೆ ಮಾಡುವವರಿಂದ ದೇಶಹಿತವು ಸಾಧಿಸುವ ಬಗೆಹೇಗೆ? ಸ್ವಂತದ ಕೆಲಸಗಳನ್ನು ತಮ್ಮ ಕೈಮುಟ್ಟಿ ಮಾಡಿಕೊಳ್ಳುವ ಶಿಕ್ಷಣವು ದೊರೆಯದಿದ್ದ ಅಷ್ಟಾಳಿಗಳ ಕೈಯಿಂದಲೂ, ಹುಟ್ಟಾ ಸ್ವತಂತ್ರವೃತ್ತಿಯ—ತೇಜಸ್ವಿತೆಯ, ಹೆಸರನ್ನು ಸಹ ಕೇಳದಿದ್ದ—ಆಚರಿಸದಿದ್ದ ಹೇಡಿಗಳ ಕೈಯಿಂದಲೂ, ದೇಶೋನ್ನತಿಯಂಥ ಮಹತ್ಕಾರ್ಯವು ಕೊನೆಗಾಣುವದೆಂದು ಆಶಿಸುವದೆಂದರೆ ಉಸುಕಿನ ಮೇಲೆ ಮನೆಕಟ್ಟುವಂತೆಯೇ ಸರಿ. ಮನುಷ್ಯನ ಜೀವಿತವೆಂದರೆ ಒಂದು ಘೋರಯುದ್ಧವೇ. ಈ ಜೀವನಕಲಹದಲ್ಲಿ ಸ್ವತಂತ್ರ ರೀತಿಯಿಂದಲೇ ಸುಯಶಸ್ಸನ್ನು ದೊರಕಿಸುವದಕ್ಕೆ ನಾವು ಕಲಿಯಬೇಕು. ಅದರಿಂದ ನಮ್ಮ ಶಾರೀರಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಬಲಗಳು ಬೆಳೆಯುವವು. ಹೀಗೆ ಮಾಡದೆ ಪರಾವಲಂಬಿಗಳಾಗಿರುವವರು ಹೇಡಿಗಳೂ, ದುರ್ಬಲಮನಸಿನವರೂ ಆಗುವರು. ವಿದ್ಯಾರ್ಥಿದೆಶೆಯಲ್ಲಿ ನಮಗೆ ಸ್ವಾವಲಂಬನದ ಶಿಕ್ಷಣವು ದೊರೆಯುವದಿಲ್ಲಾದ್ದರಿಂದ ನಾವೆಲ್ಲರೂ ಹೀನರೂ, ದೀನರೂ, ದುರ್ಬಲರೂ ಆಗಿರುವೆವು. ದಿನಾಲು ನಮಗೆ ಅತ್ಯವಶ್ಯವಿರುವ ಸಣ್ಣಪುಟ್ಟ ಪದಾರ್ಥಗಳು ಕೂಡ ಬಹುಶಃ ಪರದೇಶಗಳಿಂದಲೇ ಬರುವವು. ಸ್ವತಃ ದುಡಿ

Digitized by ROJA MUTHIAH RESEARCH LIBRARY

ಯುವದು ಗೊತ್ತಿಲ್ಲದ್ದರಿಂದ ಸಣ್ಣ ಕೆಲಸಕ್ಕೆ ಸಹ ಎರಡನೆಯವರ ಮೋರೆಯ ಕಡೆಗೆ ನೋಡಬೇಕಾಗುತ್ತದೆ; ಅವರ ಆರ್ಜವ ಮಾಡಬೇಕಾಗುತ್ತದೆ. ಮನುಷ್ಯತ್ವವೆಂಬುವದು ನಮ್ಮಲ್ಲಿ ಉಳಿದೇ ಇಲ್ಲ. ಯಾವದೊಂದು ಬಿಕ್ಕಟ್ಟಿನ ಪ್ರಸಂಗವು ನಮ್ಮ ಮೇಲೆ ಬಂದರೆ ನಮಗೆ ಏನೂ ತೋರದಂತಾಗಿ ನಾವು ಹತಬುದ್ಧರಾಗುತ್ತೇವೆ. ಇದಕ್ಕೆಲ್ಲ ಮೂಲಕಾರಣವು ಸ್ವಾವಲಂಬನದ ಶಿಕ್ಷಣಾಭಾವವೇ!

ಹೋದ ಬೇಸಿಗೆಯಲ್ಲಿ ಒಂದು ದಿನ, ಬಚನೋರ ಜಿಲ್ಹೆಯೊಳಗಿನ ರಾಮಪುರವೆಂಬ ಊರೊಳಗಿನ ನನ್ನ ಮಿತ್ರನೂ ನಾನೂ ಆನೆಯನ್ನೇರಿಕೊಂಡು ರಾಮಗಂಗೆಯ ದಂಡೆಗುಂಟ ತಿರುಗಾಡಲಿಕ್ಕೆ ಹೋಗಿದ್ದೆವು. ಆ ವರ್ಷ ಮಳೆ ಚನ್ನಾಗಿ ಆಗದ ಮೂಲಕ ನದೀ ತೀರದ ಹೊಲಗಳಲ್ಲಿ ಬೆಳೆ ಬತ್ತಿಹೋಗಿತ್ತು. ನದಿಯಲ್ಲಿ ನೀರು ವಿಪುಲವಾಗಿದ್ದಾಗ್ಯೂ ಬಡರೈತರು, ಸಣ್ಣ ಸಣ್ಣ ಕೊಡಗಳಿಂದ ನದಿಯ ನೀರು ತುಂಬಿ ತಂದು, ಪೈರಿಗೆ ಚಿಮ್ಮರಿಸುತ್ತಿದ್ದದ್ದನ್ನು ನೋಡಿ ನನಗೆ ಒಳ್ಳೇ ಕನಿಕರ ಉಂಟಾಯಿತು. ಅಮೇರಿಕೆಯಲ್ಲಿ ಇಂಥ ಸ್ಥಿತಿಯು ಎಂದಿಗೂ ಎಲ್ಲಿಯೂ ಕಂಡುಬರಲಾರದು. ಮಗ್ಗಲಿನಲ್ಲೇ ಇಂಥ ದೊಡ್ಡ ನದಿಯು ಹರಿಯುತ್ತಿದ್ದು ದಂಡೆಯ ಮೇಲಿನ ಪೈರು ಒಣಗುವದೆಂದರೆ ಎಂಥ ಆಶ್ಚರ್ಯ! ಇದರ ಕಾರಣವು ಮೇಲೆಯೇ ಅದೆ. ನಮ್ಮ ಜನರು ಸ್ವಂತಬುದ್ಧಿಯನ್ನು ಹೇಗೆ ಉಪಯೋಗಿಸಬೇಕೆಂಬುವದನ್ನು ಕಲಿತೇ ಇಲ್ಲ. ಇಂಥದೇನಾದರೊಂದು ಆಪತ್ತಿಯು ಬಂದರೆ ಪ್ರಾರಬ್ಧದ ಮೇಲೆ ಭಾರಹಾಕಿ ಸುಮ್ಮನೇ ಕೂಡ್ರುವರು. ಈ ನಮ್ಮ ದೇಶದಲ್ಲಿ ಅಸಂಖ್ಯ ಗುಡ್ಡಬೆಟ್ಟಗಳೂ, ನದನದಿಗಳೂ, ಹಳ್ಳಕೊಳ್ಳಗಳೂ ಇದ್ದು ಇಲ್ಲಿಯ ಕೃಷಿಯು ಇಷ್ಟು ನಿಕೃಷ್ಟವಾಗಿರುವ ಕಾರಣವು ನಮ್ಮ ಪ್ರಾರಬ್ಧವಾದವೂ ಯಂತ್ರಗಳನ್ನುಪಯೋಗಿಸುವ ಜ್ಞಾನದ ಅಭಾವವೂ ಆಗಿರುವದು. ಅಮೇರಿಕೆಯಲ್ಲಿ ಪಂಪಿನ ಸಹಾಯದಿಂದ ಒಮ್ಮೇಲೆ ಸಾವಿರಾರು ಕೂರಿಗಿ ನೆಲಕ್ಕೆ ನೀರುಣ್ಣಿಸಲ್ಪಡುತ್ತದೆ. ಅಲ್ಲಿಯ ಜನರು ಉದ್ಯೋಗಿಗಳೂ, ಸಾಹಸಿಗಳೂ, ಸ್ವಾವಲಂಬಿಗಳೂ ಆಗಿರುವರು. ನಮ್ಮಂತೆ ತಮ್ಮ ಬುದ್ಧಿಗೆ ಅವರು ಜಂಗು ತಾಗಗೊಟ್ಟಿಲ್ಲ. ನಾವು ಮಾತ್ರ ಅಜ್ಜಮುತ್ತಂದಿರಿಂದ, ಕಿಂಬಹುನಾ, ಸೃಷ್ಟಿನಿರ್ಮಾಣಕಾಲದಿಂದ ನಡೆಯುತ್ತ ಬಂದ ಪದ್ಧತಿಯಲ್ಲಿ ರೇಖಾಮಾತ್ರಕ್ಕಾದರೂ ಎಡಬಲಕ್ಕೆ ಸರಿಯದೆ,—ಅದರಲ್ಲಿ ಕಿಂಚಿತ್ತಾದರೂ ಸುಧಾರಣೆಯನ್ನು ಮಾಡದೆ—ಅಂಧಪರಂಪರೆಯಿಂದ ಕುರಿಗಳಂತೆ ಸಾಗಿರುವೆವು!

ಶಾಲೆಯಲ್ಲಿ ಶಿಕ್ಷಕನು ಹಾಕಿದ ಪ್ರಶ್ನವನ್ನು ಸ್ವಂತ ಬಿಡಿಸಲಿಕ್ಕೆ ಯತ್ನಿಸದೆ, ಸಹಾಧ್ಯಾಯಿಗಳ ಮೇಲೆ ಅವಲಂಬಿಸುವ ವಿದ್ಯಾರ್ಥಿಯು ಕೊನೆಗೆ ನಿರುಪಯೋಗಿಯಾಗುವದು ಎಲ್ಲರಿಗೂ ಗೊತ್ತಿದ್ದ ಮಾತೇ! ಆತನ ಬುದ್ಧಿಯು ಬೆಳೆಯುವದಿಲ್ಲ, ಆತನ ಆಚರಣೆಯು ಪ್ರಗತಿ ಹೊಂದುವದಿಲ್ಲ, ಕಿಂಬಹುನಾ ಆತನಲ್ಲಿ ಮನುಷ್ಯತ್ವವು ಬರುವದಿಲ್ಲೆಂದರೂ ಅಡ್ಡಿ ಇಲ್ಲ. ಭಿಕ್ಷಾವೃತ್ತಿಯ ಮೇಲೆ ಸಂಪೂರ್ಣವಾಗಿ ಅವಲಂಬಿಸುವ



ಇಂಥ ಶಿಕ್ಷಣವನ್ನೇ ನಾವು ನಮ್ಮ ಸಂತತಿಗೆ ಕೊಡಹತ್ತಿದ್ದೇವೆ. ಅಮೇರಿಕೆಯೊಳಗಿನ ಒಬ ಹುಡುಗನ ಉದಾಹರಣೆಯನ್ನು ಕೊಟ್ಟು ಈ ವಿಧಾನವನ್ನು ಸ್ಪಷ್ಟೀಕರಿಸುವೆನು. 'ಶಿಏಟಲ್ಲ' ಎಂಬ ಊರಲ್ಲಿದ್ದಾಗ ಒಂದುದಿನ, ಪತ್ರಗಳನ್ನು ತರುವದಕ್ಕಾಗಿ ನಾನು ಪೋಸ್ಟಾಫೀಸಿಗೆ ಹೋಗಿ ತಿರುಗಿ ಬರುವಾಗ ದಾರಿಯಲ್ಲಿ ಒಬ್ಬ ಆರು ವರ್ಷದ ಬಾಲಕನು ವೃತ್ತಪತ್ರಗಳನ್ನು ಮಾರುತ್ತಿದ್ದದ್ದು ಕಂಡೆನು. ನಾನು ಅವನ ಹತ್ತರ ಹಾಯುಹೋಗುವಾಗ್ಗೆ ಆ ಹುಡುಗನು "ಅಯ್ಯಾ, ಈ ಪತ್ರವನ್ನು ತಾವು ಕೊಂಡುಕೊಳ್ಳುವಿರಾ?" ಎಂದು ಕೇಳಿದನು.

"ಬೇಡ, ವೃತ್ತಪತ್ರದ ಅವಶ್ಯಕತೆ ನನಗಿಲ್ಲ" ವೆಂದು ನಾನು ನುಡಿದೆನು.

"ಇದರ ಬೆಲೆ ಹೆಚ್ಚಿಲ್ಲ, ಒಂದೇ ಬಿಲ್ಲಿ" ಎಂದು ಮಧುರಸ್ವರದಿಂದ ಆ ಹುಡುಗನು ಅಂದನು.

ಅದಕ್ಕೆ ನಾನು "ತಮ್ಮಾ, ವೃತ್ತಪತ್ರದ ಅವಶ್ಯಕತೆ ನನಗಿಲ್ಲ; ಅದು ನನಗೆ ಬೇಡ" ವೆಂದು ಹೇಳಿದೆನು.

"ಅಯ್ಯಾ, ಒಂದು ಬಿಲ್ಲಿಯುಂದರೆ ತಮಗೆ ಹೆಚ್ಚಲ್ಲ; ದಯವಿಟ್ಟು ಕೊಂಡುಕೊಳ್ಳಿರಿ" ಎಂದು ಆ ಬಾಲಕನು ಅತ್ಯಾಗ್ರಹ ಮಾಡಲು ನಾನು ಜೇಬಿನೊಳಗಿಂದ ಒಂದು ಬಿಲ್ಲಿಯನ್ನು ತೆಗೆದುಕೊಟ್ಟು ಆ ಪತ್ರವನ್ನು ತಕ್ಕೊಂಡು "ತಮ್ಮಾ, ನಿನ್ನ ತಂದೆಯು ಬಹಳ ಬಡವನಿರುವನೇನು?" ಎಂದು ವಿಚಾರಿಸಿದೆನು.

ಅದಕ್ಕೆ ಆ ಹುಡುಗನು ಚಕಿತನಾಗಿ ನನ್ನನ್ನು ಕುರಿತು "ತಾವು ಹೀಗೆ ಕೇಳುವ ಕಾರಣವೇನು?" ಎಂದು ಅಂದನು.

"ಯಾಕಂದರೆ ನೀನು ವೃತ್ತಪತ್ರಗಳನ್ನು ಮಾರುತ್ತಿರುವಿ" ಎಂದು ನುಡಿದೆನು.

"ಏನನ್ನುವಿರಿ; ವೃತ್ತಪತ್ರಗಳನ್ನು ಮಾರುವ ಜನರು ಬಡವರಿರುವರೆಂದು ತಾವು ತಿಳಿಯುತ್ತೀರೋ?" ಎಂದು ಆ ಬಾಲಕನು ಪ್ರಶ್ನೆಗೈಯ್ದನು.

ನಾನು ನಕ್ಕು "ತಮ್ಮಾ, ಹಾಗಲ್ಲ. ಇಷ್ಟು ಚಿಕ್ಕ ವಯಸ್ಸಿನಲ್ಲಿ ನೀನು ವೃತ್ತಪತ್ರಗಳನ್ನು ಮಾರಿ ದುಡ್ಡು ಗಳಿಸಹತ್ತಿದ್ದರಿಂದ ನಾನು ಹಾಗೆ ತಿಳುಕೊಂಡೆನು" ಎಂದು ತಿಳಿಯಹೇಳಿದೆನು.

ಆಗ್ಗೆ ಆ ಹುಡುಗನು ಬಹಳ ನೊಂದುಕೊಂಡು ನನ್ನನ್ನು ಕುರಿತು ಒಳ್ಳೇ ಆವೇಶದಿಂದ—"ಸ್ವಾಮೀ, ನನ್ನ ತಂದೆ ಬಡವನಿಲ್ಲ; ಆದರೆ ತಂದೆಯ ಆಶ್ರಯವನ್ನವಲಂಬಿಸಿ ರಂಡೆಗೂಳು ತಿನ್ನುವದು ನನಗೆ ಶೇರುವದಿಲ್ಲ. ಇಗೋ ಈ ನನ್ನ ಮೈಮೇಲಿನ ವಸ್ತ್ರಗಳನು ಸ್ವಂತ ದುಡಿಮೆಯಿಂದ ಸಂಪಾದಿಸಿರುವೆನು; ಇದರಂತೆಯೇ ನನ್ನ ಇತರ ಖರ್ಚಿಗೆ ಬೇಕಾದ ಹಣವನ್ನೆಲ್ಲ ಸ್ವಂತ ಉದ್ಯೋಗದಿಂದ ಗಳಿಸುತ್ತೇನೆ. ಬ್ಯಾಂಕಿನಲ್ಲಿ ಈ ರೀತಿ

Digitized by ROJA MUTHIAH RESEARCH LIBRARY

ಐವತ್ತು ಡಾಲರು ( ಒಂದು ಡಾಲರವೆಂದರೆ ಮೂರು ರುಪಾಯಿ ಎರಡಾಣೆ ) ಕೂಡಿಹಾಕಿರುವೆನು " ಎಂದು ನುಡಿದನು.

ಆ ಬಾಲಕನ ಈ ಶಬ್ದಗಳಿಂದ ನನ್ನ ಮನಸ್ಸಿನ ಮೇಲೆ ವಿಲಕ್ಷಣ ಪರಿಣಾಮವಾಯಿತು! " ಏನು ಸಾಹಸವಿದು! ಅಮೇರಿಕೆಯೊಳಗಿನ ಆರುವರ್ಷದ ಬಾಲಕನು ಕೂಡ ಸ್ವತಂತ್ರರೀತಿಯಿಂದ ಜೀವಿಸುತ್ತಿರುವನು; ಆತನಿಗೆ ಯಾರ ಹಂಗೂ ಇಲ್ಲ! ತಾನು ಮನುಷ್ಯನಿರುವೆನು, ದೇವರು ತನಗೆ ಕೈಕಾಲುಕೊಟ್ಟದ್ದು ಅವುಗಳನ್ನು ಹೇಗೆ ಉಪಯೋಗಿಸಬೇಕೆಂಬದನ್ನು ಆತನು ಬಲ್ಲನು; ಆದರೆ ಅದೇ ನಮ್ಮ ಭರತಭೂಮಿಯೊಳಗಿನ ಅಷ್ಟು ಚಿಕ್ಕವಯಸ್ಸಿನ ಹುಡುಗನಿಗೆ ತನ್ನ ಸುಂಬಳವನ್ನು ಸಹ ತನಗೆ ತೆಗೆಯಲಿಕ್ಕೆ ಬರುವದಿಲ್ಲವಲ್ಲ! ಆರುವರ್ಷದ ಹುಡುಗರ ಮಾತು ಬಿಡಿರಿ; ನಮ್ಮಲ್ಲಿ ಹೈಸ್ಕೂಲು, ಕಾಲೇಜಗಳಿಗೆ ಹೋಗುವ ಪ್ರೌಢವಿದ್ಯಾರ್ಥಿಗಳ ಸ್ಥಿತಿಯಾದರೂ ಹೀಗೇ. ಇವರೆಲ್ಲರೂ ತಮ್ಮ ತಾಯಿತಂದೆ, ಇಲ್ಲವೆ ಆಪ್ತೇಷ್ಟರ ಮೇಲವಲಂಬಿಸಿ ವಿದ್ಯಾರ್ಜನೆ ಮಾಡುವರು. ಯಾವದೊಂದು ತಿಂಗಳಿಗೆ ಮನೆಯಿಂದ ವೆಚ್ಚಕ್ಕೆ ಹಣ ರವಾನೆಯಾಗದಿದ್ದರೆ ಅವರ ಅಭ್ಯಾಸವೇ ನಿಂತುಹೋಗುತ್ತದೆ! ತಂದೆತಾಯಿಗಳಿಗೆ ಹುಡುಗರಿಗೆ ಶಿಕ್ಷಣಕೊಡುವ ಸಾಮರ್ಥ್ಯವಿಲ್ಲದಿದರ್ದೆ ಅವರು ಅಶಿಕ್ಷಿತರಾಗಿಯೇ ಉಳಿಯುವರು. ಒಳ್ಳೇ ಸ್ವಾವಿಲಂಬಿಗಳೆಂದರೆ ನಮ್ಮಲ್ಲಿ ಭಿಕ್ಷೆಬೇಡಿ ವಿದ್ಯಾರ್ಜನೆಮಾಡುವವರು. ಇಂಥವರಿಗೆ ಆಯುಷ್ಯದಲ್ಲಿ ಜೀವನಸಂಗ್ರಾಮದ ಸಿದ್ಧತೆಮಾಡುವದಕ್ಕೆ ಸಂಧಿ ದೊರೆಯದೆ ಅವರು ಆತ್ಮವಿಶ್ವಾಸವಿಲ್ಲದವರೂ, ಅವ್ವಾಳಿಗಳೂ ಆದಲ್ಲಿ ಆಶ್ಚರ್ಯವೇನು!! " ಇವೇ ಮೊದಲಾದ ವಿಚಾರಗಳು ನನ್ನಲ್ಲಿ ಕೋಲಾಹಲವನ್ನೆಬ್ಬಿಸಿದವು.

---

## ೨ನೇ ಪ್ರವೇಶ.

## ಡೋರಾನ.

ನಾನು ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಕಲಿಯುವ ಕಾಲಕ್ಕೆ ಡೋರಾನ ಎಂಬ ಒಬ್ಬ ವಿಧ್ಯಾರ್ಥಿಯು ಶಿಕ್ಷಣಕ್ಕಾಗಿ ಅಲ್ಲಿ ಬಂದನು. ಅವನಲ್ಲಿ ಕೇವಲ ಹನ್ನೆರಡಾಣೆ ಮಾತ್ರ ಇದ್ದವು. ಶಿಕಾಗೋದಲ್ಲಂತೂ ಹೆಜ್ಜೆಜ್ಜೆಗೆ ರೂಪಾಯಿಯ ಹೊರ್ತು ಮಾತಿಲ್ಲ. ಒಂದು ಡಬಲ್ಲ ರೋಟಿಗೆ ಎರಡುವರೆ ಆಣೆ ಬೀಳುತ್ತದೆ; ಎಂಟಾಣೆಯ ಹೊರ್ತು ಕ್ಷೌರವಾಗುವದಿಲ್ಲ; ಕ್ರಾಪು ಕತ್ತರಿಸಿಕೊಳ್ಳಬೇಕಾದರೆ ಒಂದೂವರೆ ರೂಪಾಯಿಗೆ ದಮಡಿ ಕಡಿಮೆ ಇದ್ದರೆ ನಡಿಯುವದಿಲ್ಲ. ಇಂಥ ಭಯಂಕರ ಖರ್ಚಿನ ಪಟ್ಟಣದಲ್ಲಿ ಹನ್ನೆರಡಾಣೆಯ ಮೇಲೆ ಒಂದು ಕಾಸಿಲ್ಲದ ಆ ಬಡಹುಡುಗನು ವಿದ್ಯಾಭ್ಯಾಸಕ್ಕೆ ಬಂದನು. ಅಮೇರಿಕೆಯ ವಿಶ್ವವಿದ್ಯಾಲಯಗಳಲ್ಲಿ ನೌಕರಿ ಹಚ್ಚಿಕೊಡುವದೊಂದು ಖಾತೆ ಇರುವದು. ಇದಕ್ಕೆ ಇಂಗ್ಲಿಷದಲ್ಲಿ Employment Bureau ಎಂದೆನ್ನುವರು. ಡೋರಾನನು ಅಲ್ಲಿ ಹೋಗಿ

Digitized by ROJA MUTHIAH RESEARCH LIBRARY



ವಿಚಾರಸಲಾಗಿ ಆ ಖಾತೆಯ ಅಧ್ಯಕ್ಷನು " ಖಾನಾವಳಿಯಲ್ಲಿ ಪಾತ್ರೆಗಳನ್ನು ತೊಳೆಯುವ ಕೆಲಸವನ್ನು ಮಾಡುವಿಯಾ ? " ಎಂದು ಕೇಳಿದನು. ಅದಕ್ಕೆ ಚಟವಟಿಕೆಯವನೂ ಹುರುಪಿನವನೂ ಆದ ಡೋರಾನನು ಕೂಡಲೇ " ನೀವು ಹೇಳಿದ ಕೆಲಸವನ್ನು ಮಾಡಲಿಕ್ಕೆ ನಾನು ಸಿದ್ಧನಿರುವೆ "ನೆಂದು ಉತ್ತರ ಕೊಡಲು ಅಧ್ಯಕ್ಷನು ಸಂತೋಷಬಟ್ಟು ಡೋರಾನನ ಬೆನ್ನು ಚಪ್ಪರಿಸಿದನು. ಅಂದಿನಿಂದ ಡೋರಾನನು ಊಟವಲ್ಲದೆ ಪ್ರತಿತಿಂಗಳಿಗೆ ಅರವತ್ತು ರೂಪಾಯಿ ವೇತನದ ಮೇಲೆ ಖಾನಾವಳಿಯಲ್ಲಿ ಪಾತ್ರೆಗಳನ್ನು ತೊಳಿಯಲಾರಂಭಿಸಿದನು. ಈ ಪ್ರಕಾರ ಆ ವೀರಯುವಕನು, ನಾಲ್ಕು ವರ್ಷ, ಮನೆಯಿಂದ ಒಂದು ಬಿಲ್ಲಿಯ ದುಡ್ಡನ್ನಾದರೂ ತರಿಸದೆ ಕೈಮುಟ್ಟಿ ದುಡಿದು ನಾನಾಪ್ರಕಾರದ ಕಷ್ಟಗಳನ್ನು ಸಹಿಸಿ ಬೀ. ಏ. ಪದವಿಯನ್ನು ದೊರಕಿಸಿಕೊಂಡು ಮನೆಗೆ ಹೋದನು.

ನಮ್ಮಲ್ಲಿಯ ತರುಣರಿಗೂ ಡೋರಾನನಿಗೂ ಇದ್ದ ಮಹದಂತರವು ವಿಚಾರಿಸತಕ್ಕದ್ದಾಗಿದೆ. ನಾಲ್ಕು ವರ್ಷಗಳ ಪರಿಶ್ರಮದಿಂದ ಡೋರಾನನು ಗಂಡುಗಲಿಯಾದನು. ಸ್ವಂತ ಧೈರ್ಯದ ಮೇಲೆ ತನ್ನ ನಿರ್ವಾಹವನ್ನು ಹೇಗೆ ಸಾಗಿಸಬೇಕೆಂಬದನ್ನು ಆತನು ಒಳಿತಾಗಿ ಕಲಿತುಕೊಂಡನು. ದುಡಿತದಿಂದ ಆತನ ಕೈಕಾಲುಗಳು ಬಲವುಳ್ಳವುಗಳಾದದ್ದಲ್ಲದೆ ಆತನ ಶರೀರವು ಪುಷ್ಟಿಹೊಂದಿ ಸುಮನೋಹರವಾಯಿತು. ಸ್ವಾವಲಂಬನ ವೃತ್ತಿಯಿಂದ ನಡೆಯುವ ಆ ಯುವಕನು ಸಂಸಾರದೊಳಗಿನ ತೊಡರುಗಳನ್ನು ಲೆಕ್ಕಿಸದಾದನು. ಎಂಥ ಸಂಕಟಬಂದರೂ ಆತನು ಅದಕ್ಕೆ ಹೆದರದಂತಾದನು. ಇದಕ್ಕೆ ವಿಪರೀತವಾಗಿ ನಮ್ಮ ತರುಣರು ಶಾಲೆಗಳೊಳಗಿಂದಾಗಲಿ ಕಾಲೇಜಿನೊಳಗಿಂದಾಗಲಿ ಕಲಿತು ಹೊರಬಿದ್ದರೂ ತಮ್ಮ ತಾಯಿತಂದೆಗಳನ್ನವಲಂಬಿಸದೆ ಅವರಿಗೆ ಗತಿಯಿಲ್ಲ. ಸ್ವತಂತ್ರವಾಗಿ ತಮ್ಮ ನಿರ್ವಾಹಸಾಗಿಸಿಕೊಳ್ಳುವದು ಅವರಿಂದಾಗುವದಿಲ್ಲ. ನೌಕರಿಯ ಸಲುವಾಗಿ ಅತ್ತಿತ್ತ ತಿರುಗುವದರಲ್ಲಿ ಜೋಡುಗಳನ್ನು ಸವಿಸುವರು. ಅಧಿಕಾರಸ್ಥರು ಅಂದದ್ದು ಅನಿಸಿಕೊಂಡು, ಮೆಟ್ಟನಿಂದ ಹೊಡೆದರೆ ಹೋಳಿಗೆಯಿಂದ ಹೊಡೆದರೆಂದು ಆನಂದಪಟ್ಟು, ಲಾಂಗೂಲಚಾಲನಮಾಡಿದರೂ ಎಷ್ಟೋ, ತರುಣರಿಗೆ ನೌಕರಿ ದೊರೆಯುವದಿಲ್ಲ. ಮೊದಲು ಕಾಲೇಜಿನಲ್ಲಿ ಕಲಿಯುವಾಗ ತಾಯಿತಂದೆಗಳು ಇವರ ಖರ್ಚಿಗೆ ಕೊಟ್ಟು ಕೊಟ್ಟು ಸಾಲದಲ್ಲಿ ಮುಳಿಗಿ, ನಾಳೆ ಮಗನು ಕಲಿತುಬಂದು ತಮ್ಮನ್ನು ತಾಪಮುಕ್ತನಾಗಿ ಮಾಡುವನೆಂಬ ಆಶೆ ತಾಳುತ್ತಿರುವಲ್ಲಿ ಈ ಪದವೀಧರರು ಕಾಲೇಜಿನಿಂದ ಹೊರಬಿದ್ದ ಬಳಿಕ ಮತ್ತೆ ತಮ್ಮ ಭಾರವನ್ನು ತಾಯಿತಂದೆಗಳ ಮೇಲೆ ಹಾಕುವರು. ಈ ಪದವೀಧರರು ಶರೀರದಿಂದ ದುರ್ಬಲರೂ, ವ್ಯಾಧಿಗ್ರಸ್ತರೂ ಇರುವದರಿಂದ ತಾಯಿತಂದೆಗಳಿಗೆ ಇವರಿಗೆ ಔಷಧೋಪಚಾರಮಾಡುವ ದುಃಖದ ಪ್ರಸಂಗವು ಸಹ ಬರುವದು. ಇದಕ್ಕೆ ನಗಬೇಕೋ ಅಳಬೇಕೋ ತಿಳಿಯದು!

ಶಿಕಾಗೋಕ್ಕೆ ನಾನು ೧೯೦೬ನೇ ಇಸ್ವಿಯ ಜೂನ ತಿಂಗಳಲ್ಲಿ ಮುಟ್ಟಿದಾಗ ನನ್ನ ಹತ್ತರ ನೂರಾ ಐವತ್ತು ರೂಪಾಯಿಗಳಿದ್ದವು. ಅಲ್ಲಿ ಹೋದ ಕೂಡಲೆ ವಿಶ್ವವಿದ್ಯಾಲಯ

ದಲ್ಲಿ ಪ್ರವೇಶಿಸಿ ಅಭ್ಯಾಸಕ್ಕೆ ಪ್ರಾರಂಭಮಾಡಿದೆನು. ಈ ವಿಶ್ವವಿದ್ಯಾಲಯುದಲ್ಲಿ 'ಕ್ವಾರ್ಟರ ಸಿಸ್ಟಿಮ 'ದ ಪದ್ಧತಿ (ಅಂದರೆ ಪ್ರತಿ ಮೂರು ತಿಂಗಳಿಗೆ ವೇಳಾಪತ್ರಿಕೆ ಬದಲಾಗುವ ಪದ್ಧತಿ) ಯದೆ. ಮೂರು ತಿಂಗಳ ಖರ್ಚಿನ ಪೂರ್ತೆ ನನ್ನಲ್ಲಿ ಹಣವಿದ್ದದರಿಂದ ನಿಶ್ಚಿಂತನಾಗಿ ಅಭ್ಯಾಸನಡಿಸಿದೆನು. ವಿಶ್ವವಿದ್ಯಾಲಯುದ ವಾರ್ಷಿಕ ಫೀ (ನಾಲ್ಕು ನೂರಾ ಐವತ್ತು ರೂಪಾಯಿ) ಅಲ್ಲಿಯ ಪ್ರೆಸಿಡೆಂಟರ ಮೆಹರ್ಬಾನಗಿಯಿಂದ ನನಗೆ ಮಾಫು ಆಗಿತ್ತು. ನನ್ನ ಹತ್ತರ ಇದ್ದ ನೂರಾ ಐವತ್ತು ರೂಪಾಯಿ ತೀರಿದ ಬಳಿಕ ನನ್ನ ನಿರ್ವಾಹವು ಹೇಗೆ ಸಾಗುವದೆಂಬ ವಿಚಾರವನ್ನೇ ನಾನು ಮಾಡಲಿಲ್ಲ. ಹಿಂದೀಜನರ ಪ್ರಾರಬ್ಧವಾದದ ಸಂಸ್ಕಾರವು ನನಗೂ ಆದದ್ದರಿಂದ ನನ್ನಲ್ಲಿಯ ಹಣ ತೀರಿದ ಕೂಡಲೆ ದೇವರು ಒಂದಿಲ್ಲೊಂದು ರೀತಿಯಿಂದ ನನಗೆ ನೆರವಾಗುವನೆಂದು ಆಲೋಚಿಸಿ ಮುಂದಿನ ಯಾವ ಪ್ರಯತ್ನವನ್ನೂ ಮಾಡದೆ ಹಾಗೇ ಉಳಿದೆನು. ಮೂರು ತಿಂಗಳು ಆಗುತ್ತ ಬಂದಂತೆ ನನ್ನಲ್ಲಿಯ ಹಣವಾದರೂ ತೀರುತ್ತ ಬಂತ್ತು. ಆಗ್ಗೆ ಮಾತ್ರ ನನಗೆ ಒಳ್ಳೇ ಚಿಂತೆಯುಂಟಾಯಿತು. ಅಲ್ಲಲ್ಲಿ ತಿರುಗಿ ನೋಕರಿಯ ವಿಷಯಕ್ಕೆ ಶೋಧ ನಡಿಸಿದೆನು; ಆದರೆ ಎಲ್ಲಿಯೂ ಸಾಧಿಸಲೊಲ್ಲದು. ನನ್ನ ಒಬ್ಬ ಮಿತ್ರನ ಸೂಚನೆಯ ಪ್ರಕಾರ ನೌಕರಿ ಕೊಡಿಸುವ ಖಾತೆಯ ಅಧ್ಯಕ್ಷರಿಗೆ ಭೆಟ್ಟಿಯಾಗಿ ಹೇಳಿಕೊಳ್ಳಲು ಅವರು "ಏನಯ್ಯಾ, ಖಾನಾವಳಿಯಲ್ಲಿ ಪಾತ್ರೆಗಳನ್ನು ತೊಳೆಯುವ ಕೆಲಸವನ್ನು ಮಾಡುವಿಯಾ?" ಎಂದು ವಿಚಾರಿಸಿದರು.

ನನಗೆ ವಜ್ರಾಘಾತವಾದಂತಾಯಿತು. ತಲೆ ತುರಿಸಿಕೊಳ್ಳುತ್ತ ನಾನು ಮನಸಿನಲ್ಲಿ "ನನ್ನ ಕುಲದಲ್ಲಿ ಇಂಥ ಹೀನ ಕೆಲಸವನ್ನು ಯಾರೂ ಮಾಡಿಲ್ಲ;" ಇಂಥ ಹೀನ ಕೆಲಸವನ್ನು ಯಾರೂ ಮಾಡಿಲ್ಲ;" ಅಂದ ಬಳಿಕ ನಾನು ಹೇಗೆ ಮಾಡಲಿ;" ಎಂದು ಆಲೋಚಿಸುವದನ್ನು ಅಧ್ಯಕ್ಷರು ಕಂಡು ಹಿಡಿದು ನಗುತ್ತ "ನಿಮ್ಮ ದೇಶದಲ್ಲಿ ಪಾತ್ರೆಗಳನ್ನು ತಿಕ್ಕುವವರದೊಂದು ವರ್ಣವು ಬೇರೆಯದೆಯೋ?" ಎಂದು ಕೇಳಿದರು.

ಅದಕ್ಕೆ ನಾನು "ಅಹುದು ಸ್ವಾಮೀ" ಎಂದು ಧೈರ್ಯ ತಾಳಿ ಹೇಳಿದೆನು. "ನೀವು ಈಗ್ಗೆ ಅಮೆರಿಕೆಯೊಳಗಿನ ಎಲ್ಲ ತರದ ಕೆಲಸಗಳನ್ನು ಪ್ರೀತಿಸಲಿಕ್ಕೆ ಕಲಿಯಬೇಕು." ಎಂದು ಅಧ್ಯಕ್ಷರು ನುಡಿದರು.

ನಾನು ಏನೂ ಪ್ರತ್ಯುತ್ತರ ಕೊಡದೆ ತಿರುಗಿ ನನ್ನ ಬಿಡಾರಕ್ಕೆ ಬಂದೆನು. ಎರಡು ದಿವಸಗಳು ಹೋದವು; ನನ್ನನ್ನು ಯಾರೂ ವಿಚಾರಿಸಲೇ ಇಲ್ಲ. ಹೊಟ್ಟೆಯಲ್ಲಿ ಕಾಗೆಗಳು ಒದರಹತ್ತಿದವು. ಆಗ್ಗೆ ನಾನು ಮತ್ತೆ ಆ ಅಧ್ಯಕ್ಷರ ಕಡೆಗೆ ಹೋದೆನು. ನನ್ನನ್ನು ನೋಡಿ ಅವರು ಸ್ಮಿತಮಾಡಿದರು. ನೌಕರಿಯ ವಿಷಯಕ್ಕೆ ಮತ್ತೆ ಕೇಳಲು ಅವರು ಒಳ್ಳೇ ಪ್ರೀತಿಯಿಂದ ದುಡಿತದ ಮಹತ್ವವನ್ನು ನನಗೆ ತಿಳಿಯ ಹೇಳಿ ಖಾನಾವಳಿಯಲ್ಲಿ ಕೆಲಸ ಮಾಡಲಿಕ್ಕೆ ಕಳುಹಿಕೊಟ್ಟರು.

---



## ೩ನೇ ಪ್ರವೇಶ.

## ವ್ಯವಹಾರಿಕ ಧರ್ಮದ ದೀಕ್ಷೆ.

ಸಂಜೆಯಾಗಿದೆ. ಖಾನಾವಳಿಯಲ್ಲಿ ಜನರು ಬರುಹೋಗುವದು ನಡೆದದೆ. ಒಡತಿಯು ಮೇಲ್ವಿಚಾರಣೆಯುಲ್ಲಿ ತೊಡಗಿದ್ದಾಳೆ. ಇಂಥ ಸಮಯುದಲ್ಲಿ ನಾನು ನನ್ನ ಕೆಲಸದ ಮೇಲೆ ರುಜುವಾದೆನು. ಅಡಿಗೆಯ ಮನಿಯು ಸಮೀಪದ ಒಂದು ಕೋಣೆಯಲ್ಲಿ ಸಣ್ಣದೊಂದು ಹೌದು ಇತ್ತು. ಅದರಲ್ಲಿ ತಂಣೀರಿನದೊಂದೂ ಬಿಸಿನೀರಿನದೊಂದೂ ಹೀಗೆ ಎರಡು ನಳಗಳು ಇದ್ದವು. ಸಮೀಪದಲ್ಲಿಯೇ ಪಾತ್ರೆಗಳನ್ನು ತೊಳೆಯುವದಕ್ಕೋಸ್ಕರ ಒಂದು ಕಟ್ಟೆಯ ಹಾಗೆ ಎತ್ತರದ ಸ್ಥಳವಿತ್ತು. ನಿಂತುಕೊಂಡು ನಾನು ಪಾತ್ರೆಗಳನ್ನು ಅಲ್ಲಿ ತೊಳೆಯುತ್ತಿದ್ದೆನು. ಸೇವಕರು. ಪಾತ್ರೆಗಳನ್ನು ತಂದು ಆ ಕಟ್ಟೆಯ ಮೇಲಿಡುತ್ತಿದ್ದರು. ಒಂದು ದೊಡ್ಡ ಪಾತ್ರೆಯಲ್ಲಿ ಸಬಕಾರವು ಬಿಸಿನೀರೂ ಹಾಕಿಡಲ್ಪಟ್ಟಿದವು. ಅದರಲ್ಲಿ ಮುಸುರೆಯ ಎಲ್ಲ ಪಾತ್ರೆಗಳನ್ನು ಹಾಕಿ ತೊಳೆದು ಕಡೆಗೆ ತೆಗೆದಿಟ್ಟೆನು. ಸಮೀಪದಲ್ಲಿ ಬಿಸಿನೀರಿನಿಂದ ತುಂಬಿದ ಇನ್ನೊಂದು ಪಾತ್ರೆ ಇತ್ತು. ಅದರಲ್ಲಿ ಆ ಪಾತ್ರೆಗಳನ್ನೆಲ್ಲ ಮತ್ತೆ ಗಲಬರಿಸಿ ಸ್ವಚ್ಛ ಮಾಡಿ ಅರಿವೆಯಿಂದ ವರಿಸಿ ಒಂದು ಕಪಾಟಿನಲ್ಲಿ ಸಾಲುಗೊಳಿಸಿಡುತ್ತಿದ್ದೆನು.

ಈ ಚಿರಸ್ಮರಣೀಯವಾದ ಸಂಧ್ಯಾಕಾಲವನ್ನು ನಾನೆಂದಿಗೂ ಮರೆಯೆನು! ಆ ದಿನ, ನಾನು ವ್ಯವಹಾರಿಕ ಧರ್ಮದ ದೀಕ್ಷೆ ತೆಗೆದುಕೊಂಡೆನು. ನನ್ನ ಕಂಣು ಮೇಲಿನ ಬ್ರಮಪಟಲವು ದೂರಾಯಿತು. ಸುಮ್ಮನೆ ಧರ್ಮ ಧರ್ಮವೆಂದು ವದರಿದಷ್ಟಕ್ಕೆ ಯಾರೂ ಧರ್ಮಿಷ್ಟರಾಗುವದಿಲ್ಲ. ಮನುಷ್ಯರ ವ್ಯವಹಾರಕ್ಕೂ ಜೀವಿತಕ್ಕೂ ಧರ್ಮದ ಸಂಬಂಧವಿರುವದೆಂದು ನನ್ನ ಮನವರಿಕೆಯಾಯಿತು. ದುಡಿತವು ಯಾವದೇ ಪ್ರಕಾರದ್ದಿದ್ದರೂ ಅದನ್ನು ವಿಶ್ವಾಸಪೂರ್ವಕವಾಗಿ ಮಾಡಿದಲ್ಲಿ ಕೀಳುತನವಿಲ್ಲ. ಶ್ರಮಪಡದೆ ಅನಾಯಾಸವಾಗಿ ಶಿಕ್ಕ ಗಂಟು ಸೂರಿಮಾಡಿ ತಾವು ಶ್ರೇಷ್ಠ ವರ್ಣದವರೆಂದು ತಿಳಿಯುವವರೇ ನಿಜವಾಗಿ ಅಧಮರು. ದುಡಿತದಿಂದ ಮನುಷ್ಯನಿಗೆ ನೀಚತ್ವ ಬರುವದಿಲ್ಲ. ಮಲಿನಾಂತಃಕರಣವುಳ್ಳವರೂ, ಶ್ರೇಷ್ಠರೆಂಬ ಒಣ ಹೆಮ್ಮೆಯುಳ್ಳವರೂ, ದೇವರು ಹುಟ್ಟಿಸಿದ ಸೃಷ್ಟಿಯಲ್ಲ ಉಚ್ಚ ನೀಚವೆಂಬ ಸ್ವಾರ್ಥಪರಭೇದ ಮಾಡಿ ಅಸ್ಪೃಶ್ಯತ್ವವನ್ನು ಕಲ್ಪಿಸುವವರೂ ಇವರೇ ಅಧಮಾಧಮರು.

ಆ ಸಂಧ್ಯಾಕಾಲವನ್ನು ನಾನು ಮರೆಯುವದು ಶಕ್ಯವಿಲ್ಲ! ದುಡಿಮೆಯ ಮಹತ್ವವನ್ನು ಆದಿನ ನಾನು ಮನಗಂಡೆನು. ಉಚ್ಚವರ್ಣದವನೆಂಬ ವೃಥಾಭಿಮಾನವನ್ನು ಆದಿನ ನಾನು ಬಿಟ್ಟುಬಿಟ್ಟೆನು. ನನ್ನ ದೇಶದ ಕೂಲಿಕಾರರನ್ನು ನಾನು ಅಂದಿನಿಂದ ಪ್ರೀತಿಸಹತ್ತಿದ್ದಲ್ಲದೆ ಅವರ ಉನ್ನತ್ಯರ್ಥವಾಗಿ ಯಥಾಶಕ್ತಿ ಪ್ರಯತ್ನಮಾಡುವೆನೆಂದು ದೇವರನ್ನು ಸ್ಮರಿಸಿ ಪ್ರತಿಜ್ಞೆ ಮಾಡಿದೆನು.

Digitized by ROJA MUTHIAH RESEARCH LIBRARY

ನಾಲ್ಕೈದು ದಿವಸಗಳನಂತರ, ನನ್ನ ಅಧ್ಯಾಪಕರಲ್ಲೊಬ್ಬನು ಪುಸ್ತಕಾಲಯದಲ್ಲಿ ನನಗೆ ಕೆಲಸಕೊಟ್ಟನು. ಕಪಾಟಿನೊಳಗಿಂದ ಪುಸ್ತಕಗಳನ್ನು ಹೊರಗೆತೆಗೆದು ಅವುಗಳ ಮೇಲಿನ ಹೊಲಸು ಝಾಡಿಸಿ ವಸ್ತ್ರದಿಂದ ವರಿಸಿ ಮೊದಲಿನಂತೆಯೇ ಕಪಾಟಿನಲ್ಲಿ ಸಾಲುಗೊಳಿಸುವದು ನನ್ನ ಕೆಲಸವಾಗಿತ್ತು. ಇದಕ್ಕಾಗಿ ನನಗೆ ದಿನಾಲು ಏಳುವರೆ ರೂಪಾಯಿ ಕೂಲಿ ಶಿಕ್ಕುತ್ತಿತ್ತು. ಈ ಕೆಲಸವನ್ನು ನಾನು ಹತ್ತು ದಿವಸಗಳವರೆಗೆ ಮಾಡಿದ ಬಳಿಕ ನನ್ನ ನಿರ್ವಾಹವು ಸುಸೂತ್ರ ಸಾಗಹತ್ತಿತು.

ಖಾನಾವಳಿಯೊಳಗಿನ ಪಾತ್ರೆತಿಕ್ಕುವ ನನ್ನ ಮೊದಲನೇ ಕೆಲಸವನ್ನು ನಾನು ಮಾಡದೇ ಹೋಗಿದ್ದರೆ, ಅಧ್ಯಾಪಕರು ಪುಸ್ತಕಾಲಯದೊಳಗಿನ ಕೆಲಸವನ್ನು ನನಗೆ ಕೊಡುತ್ತಲೇ ಇದ್ದಿಲ್ಲವೆಂಬ ಸಂಗತಿಯನ್ನು ಇಲ್ಲಿ ಅವಶ್ಯವಾಗಿ ಜ್ಞಾಪಕದಲ್ಲಿಡತಕ್ಕದ್ದಾಗಿದೆ! ಅಮೇರಿಕನ್ನರು ದುಡಿತದ ಮಹತ್ವವನ್ನು ಚನ್ನಾಗಿ ಬಲ್ಲರು. ದುಡಿತವನ, ಹೀಯಾಳಿಸುವವನು, ಕಡುಪಾಪಿಯೆಂದೂ, ಪತಿತನೆಂದೂ ಅವರು ಭಾವಿಸುವರು. ಅವರ ಈ ತಿಳುವಳಿಕೆಯಲ್ಲಿ ಸತ್ಯವಿದೆ. ಯಾಕೆಂದರೆ ದೇಶದೊಳಗಿನ ಸಂಪತ್ತೆಲ್ಲ ಕೂಲಿಕಾರರಿಂದ ಹುಟ್ಟುತ್ತದಲ್ಲವೇ? ಕೂಲಿಕಾರರನ್ನು ನಿಂದ್ಯವೆಣಿಸುವ ದೇಶದ ಜನರು, ವ್ಯವಸಾಯಿಗಳೂ, ಉದ್ಯೋಗಿಗಳೂ ಇಲ್ಲವೆ ಸಾಹಸಿಗಳೂ ಆಗಿರಲಾರರು. ಅಮೇರಿಕೆಯಲ್ಲಿ ಕೂಲಿಕಾರರಿಗೆ ಮಾನವಿರುವದರಿಂದಲೇ ಆ ದೇಶಕ್ಕೆ ಉನ್ನತಿಯುಂಟಾಗಿದೆ. ಇದಕ್ಕೆ ವಿಪರೀತವಾಗಿ ನಮ್ಮಲ್ಲಿ ಕೂಲಿಕಾರರಿಗೆ ಮರ್ಯಾದೆಯಿಲ್ಲದ್ದರಿಂದ ನಮ್ಮ ದೇಶಕ್ಕೆ ಅವನತಿಯುಂಟಾಗಿದೆ. ದುಡಿಯುವದಕ್ಕಾಗಿಯೇ ದೇವರು ಕೈಗಳನ್ನು ಕೊಟ್ಟಿರುವನು. ದುಡಿಯುವದರಿಂದ ಅವು ಸವಿಯದೆ, ತಿರುಗಿ ಬಲವುಳ್ಳವುಗಳೂ ಪ್ರೇಕ್ಷಣೀಯವೂ ಆಗುವವು.

ಅಮೇರಿಕೆಯ ವಿಶ್ವವಿದ್ಯಾಲಯದೊಳಗಿನ ವಿದ್ಯಾರ್ಥಿಗಳು ನಾನಾತರದ ಕೆಲಸಗಳನ್ನು ಮಾಡಿ ಹಣ ದೊರಕಿಸುವರು. ಚಳಿಗಾಲದಲ್ಲಿ ಮನೆಗಳನ್ನು ಬೆಚ್ಚಗಿಡುವದು ಇಂಥದೊಂದು ಕೆಲಸವಾಗಿದೆ. ಒಂದು ಸಾರೆ ಈ ಕೆಲಸಮಾಡುವ ಪ್ರಸಂಗ ಬಂದಿತ್ತು. ಅಮೇರಿಕೆಯು ಶೀತಪ್ರದೇಶವಾದ್ದರಿಂದ ಚಳಿಗಾಲದಲ್ಲಿ ಅಲ್ಲಿ ಬರ್ಫವು ಹೇರಳವಾಗಿ ಬೀಳುವದು. ಆದುದರಿಂದ ನೆಲಮನೆಯಲ್ಲಿ ದೊಡ್ಡ ದೊಡ್ಡ ಚಟ್ಟಿಗಳನ್ನು ಬೆಳಿಗಿನ ಐದು ಘಂಟೆಗೆ ಇದ್ದಲಿಯಿಂದ ಪ್ರಜ್ವಲಿಸುವರು. ಚಟ್ಟಿಗೆ ದೊಡ್ಡ ದೊಡ್ಡ ನಳಗಳಿದ್ದು ಮನೆಯೊಳಗಿನ ಎಲ್ಲ ಕೋಣೆಗಳಿಗೂ ಅವುಗಳ ಸಂಬಂಧವಿರುವದು. ಹವೆಯಾಡುವದಕ್ಕೆ ಚಟ್ಟಿಗೊಂದು ದೊಡ್ಡ ಛಿದ್ರವಿರುವದು. ಹೊರಗಿನ ತಂಪುಹವೆಯು ಚಟ್ಟಿಯೊಳಗೆ ಸೇರಿ ಬೆಚ್ಚಗಾಗಿ ನಳಗಳ ದ್ವಾರದಿಂದ ಎಲ್ಲ ಕೋಣೆಗಳಿಗೂ ಸರಿಯಾಗಿ ಉಷ್ಣತೆಕೊಡುವದು. ಹೊರಗೆ ಎಷ್ಟೇ ಬರ್ಫಬಿದ್ದರೂ ಕೋಣೆಯಲ್ಲಿ ಬರಿಮೈಯಿಂದ ಕೂಡ್ರಲಿಕ್ಕೆ ಅಡ್ಡಿ ಇಲ್ಲ. ದಿನದಲ್ಲಿ ಈ ಕೆಲಸವನ್ನು ಎರಡು ಮೂರು ತಾಸು ಮಾಡಿ ವಿದ್ಯಾರ್ಥಿಗಳು ತಮ್ಮ ಊಟಉಡಿಗೆಯ ಖರ್ಚು ತೆಗೆಯುವರು. ಮನೆಗಳಲ್ಲಿ ಕಸಹೊಡೆದು ಜಳಜಳಮಾಡುವದೂ ಒಂದು ಕೆಲಸವಾಗಿದೆ.



ಇವಲ್ಲದೆ ಇನ್ನೂ ಅನೇಕ ಕೆಲಸಗಳುಂಟು. ಅನೇಕ ವಿದ್ಯಾರ್ಥಿಗಳು ಶನಿವಾರಕ್ಕೊಮ್ಮೆ ದೊಡ್ಡ ದೊಡ್ಡ ಅಂಗಡಿಗಳಲ್ಲಿ ಗುಮಾಸ್ತರ ಕೆಲಸಮಾಡುವರು. ಆದಿನ ಕೂಲಿಕಾರರಿಗೆ ಸಂಬಳವನ್ನು ಕೊಡಬೇಕಾದ್ದರಿಂದ ಅಂಗಡಿಯಲ್ಲಿ ಕೆಲಸ ಬಹಳವಿರುವದು. ಅಂಗಡಿಕಾರರಿಗೆ ಆದಿನ ಕೆಲಸಮಾಡುವ ಜನರ ಅವಶ್ಯಕತೆ ಬಹಳ. ಅದೊಂದು ದಿವಸಕ್ಕೆ ವಿದ್ಯಾರ್ಥಿಗಳಿಗೆ ಎಂಟ್ಹತ್ತು ರುಪಾಯಿಗಳು ಸಹಜವಾಗಿ ದೊರೆಯುತ್ತವೆ. ಇದರಂತೆ ತಿಂಗಳಿಗೆ ನಾಲ್ಕು ಶನಿವಾರ ವಿದ್ಯಾರ್ಥಿಗಳು ದುಡಿಯುವರು. ಕೆಲವರು ರೇಲ್ವೆಯಲ್ಲಿ ಕೆಲಸಮಾಡುತ್ತಾರೆ. ಎಷ್ಟೋ ವಿದ್ಯಾರ್ಥಿಗಳು ಜಾಹಿರಾತುಗಳನ್ನೂ ನೋಟೀಸುಗಳನ್ನೂ ಹಂಚಿ ರೊಕ್ಕ ಗಳಿಸುವರು. ಯಾವನೊಬ್ಬನು ಹೊಸದೊಂದು ಅಂಗಡಿಯನ್ನು ತೆಗೆದನೆಂದರೆ ಜಾಹೀರಾತಿಯ ದ್ವಾರದಿಂದ ಗಿರಾಕಿಗಳನ್ನು ದೊರಕಿಸಲೆತ್ನಿಸುವನು. ಈ ಜಾಹೀರಾತುಗಳನ್ನು ಹಂಚುವ ಕೆಲಸವನ್ನು ವಿದ್ಯಾರ್ಥಿಗಳು ದಿನಕ್ಕೆ ಆರು ರುಪಾಯಿ ಸಂಬಳ ತಕ್ಕೊಂಡು ಶನಿವಾರ, ರವಿವಾರ ದಿವಸ ಸವಡುಮಾಡಿಕೊಂಡು, ಮಾಡುವರು. ಇವರು ಜಾಹೀರಾತುಗಳನ್ನು ತಕ್ಕೊಂಡು ಮನೆಮನೆ ತಿರುಗಿ, ಮನೆಯ ಟಪಾಲಿನ ಪೆಟ್ಟಿಗೆಯಲ್ಲಿ ಒಂದೊಂದು ಜಾಹೀರಾತು ಚಲ್ಲುವರು. ಇದರಿಂದ ಊರವರಿಗೆಲ್ಲ ಹೊಸ ಅಂಗಡಿಯ ಸುದ್ದಿಯು ಕೂಡಲೇ ಆಗುವದು. ಕೆಲವು ವಿದ್ಯಾರ್ಥಿಗಳು ಕಚೇರಿಗಳಲ್ಲಿ ಕಾರಕೂನರ ಕೆಲಸವನ್ನು ನಾಲ್ಕೈದು ತಾಸು ಮಾಡಿ ತಿಂಗಳೊಂದಕ್ಕೆ ಇಪ್ಪತ್ತೈದು ಮೂವತ್ತು ಡಾಲರುಗಳನ್ನು ಆಯಾಸವಿಲ್ಲದೆ ಗಳಿಸುವರು. ಇನ್ನೂ ಕೆಲವರು ಟಾಯಿಪರಾಯಿಟರಗಳನ್ನು ಕೊಂಡುಕೊಂಡು, ಅದರ ಸಹಾಯದಿಂದ ರೊಕ್ಕ ಗಳಿಸುವರು. ಈ ಪ್ರಕಾರ ಅನೇಕ ಸಂಣದೊಡ್ಡ ಕೆಲಸಗಳನ್ನು ಮಾಡಿ ವಿಶ್ವವಿದ್ಯಾಲಯದೊಳಗಿನ ವಿದ್ಯಾರ್ಥಿಗಳು ತಮ್ಮ ನಿರ್ವಾಹದಪೂರ್ತೆ ದ್ರವ್ಯವನ್ನು ದೊರಕಿಸಿ ವಿದ್ಯಾಭ್ಯಾಸಮಾಡುವರು.

---

## ೪ನೇ ಪ್ರವೇಶ.

## ಅಮೇರಿಕೆಯೊಳಗಿನ ಶಿಕ್ಷಣದ ಅನುಕೂಲತೆಗಳು.

ಪ್ರಸ್ತುತ ಪ್ರಕರಣದಲ್ಲಿ ಅಮೇರಿಕೆಯೊಳಗಿನ ಶಿಕ್ಷಣದ ಅನುಕೂಲತೆಗಳನ್ನು ಕುರಿತು ವಿವರಿಸತಕ್ಕವರಿದ್ದೇವೆ. ಅನೇಕ ಸಂಣ ಸಂಣ ಸ್ವತಂತ್ರ ಸಂಸ್ಥಾನಗಳು ಕೂಡಿ ಅಮೇರಿಕೆಯ ಸಂಯುಕ್ತಸಂಸ್ಥಾನವಾಗಿರುವದನ್ನು ಬಲ್ಲಿರಷ್ಟೇ. ಈ ಪ್ರತಿಯೊಂದು ಸಂಸ್ಥಾನದ ಸರಕಾರದವರ ವತಿಯಿಂದ ಏನಿಲ್ಲೆಂದರೂ ಒಂದು ದೊಡ್ಡ ವಿಶ್ವವಿದ್ಯಾಲಯವೂ ಕೃಷಿವಿದ್ಯಾಲಯವೂ ನಡೆಯುತ್ತಿರುವವು. ಕೆಲವು ಸಂಸ್ಥಾನಗಳಲ್ಲಿ ಒಂದಕ್ಕಿಂತ ಹೆಚ್ಚು ವಿಶ್ವವಿದ್ಯಾಲಯಗಳಿದ್ದು ಅಲ್ಲಿ ವಿದ್ಯಾರ್ಥಿಗಳು ಸಾಹಿತ್ಯ. ಭೌತಿಕಶಾಸ್ತ್ರ, ಶಿಲ್ಪಶಾಸ್ತ್ರ ಮುಂತಾದ ವಿಷಯಗಳ ಅಧ್ಯಯನವನ್ನು ನಡಿಸುವರು. ಇಲ್ಲಿಯ ಫೀ ಅತ್ಯಲ್ಪವಿದ್ದಾಗ್ಯೂ ಅತ್ಯಂತ ಉಚ್ಚಪ್ರತಿಯ ಶಿಕ್ಷಣವು ಇಲ್ಲಿ ದೊರೆಯುತ್ತದೆ. ಲಕ್ಷಾವಧಿ ರೂಪಾ

Digitized by ROJA MUTHIAH RESEARCH LIBRARY

ಯಿಗಳನ್ನು ಖರ್ಚುಮಾಡಿ ಶಿಕ್ಷಣವಿಷಯದ ಎಲ್ಲ ಉಪಕರಣಗಳನ್ನು ಈ ವಿದ್ಯಾಲಯಗಳಲ್ಲಿ ಸಂಗ್ರಹಿಸಿರುವರು. ಸಂಸ್ಥಾನದ ವಿಶ್ವವಿದ್ಯಾಲಯಗಳಲ್ಲಿ ಷಣ್ಮಾಸದ ಕಾಲವಿಭಾಗ (Term) ಪದ್ಧತಿಯುಂಟು.

ವಿಶ್ವವಿದ್ಯಾಲಯದ ವರ್ಷಾರಂಭವು ಸಪ್ಟಂಬರದಲ್ಲಿ ಪ್ರಾರಂಭವಾಗಿ ಜನೇವರಿಯ ಕೊನೆಗೆ ಷಣ್ಮಾಸಿಕ ಶಿಕ್ಷಣ ಕ್ರಮವು ಮುಗಿಯುತ್ತದೆ. ವಿದ್ಯಾರ್ಥಿಗಳು ತಮಗೆ ಬೇಕಾದ ವಿಷಯಗಳನ್ನು ತಮ್ಮ ತಮ್ಮ ಅಭಿರುಚಿಯ ಪ್ರಕಾರ ಕಲಿಯಲಿಕ್ಕೆ ಬರುವಂತಿದೆ. ವತ್ಸರಾರ್ಧದ ಕೊನೆಯಲ್ಲಿ ಪರೀಕ್ಷೆಯಾಗಿ ವಿಶ್ವವಿದ್ಯಾಲಯವನ್ನು ಬಿಡಲಿಕ್ಕೆ ಪ್ರತಿಬಂಧವಿಲ್ಲ. ಈ ಅನುಕೂಲತೆಯಿರುವದರಿಂದ ಹಣದ ಸಂಚಯ ತೀರಿದ ವಿದ್ಯಾರ್ಥಿಗಳು ಈ ಕಾಲಕ್ಕೆ ವಿಶ್ವವಿದ್ಯಾಲಯವನ್ನು ಆಗಿನ ಪೂರ್ತೆ ಬಿಟ್ಟು ಮುಂದಿನ ಷಣ್ಮಾಸಿಕದ ಖರ್ಚಿಗೆ ಬೇಕಾಗುವ ದ್ರವ್ಯವನ್ನು ಸ್ವಂತ ಬಾಹುಬಲದಿಂದ ದುಡಿದು ಕೂಡಿಹಾಕುವರು. ಪ್ರವೇಶ ಪರೀಕ್ಷೆಯ ವರೆಗೆ ಶಿಕ್ಷಣವು ಎಲ್ಲರಿಗೂ ಪುಕ್ಕಟೆಯಾಗಿ ದೊರೆಯುವದು. ಮುಂದೆ ವಿಶ್ವವಿದ್ಯಾಲಯದಲ್ಲಿ ಮಾತ್ರ ಫೀ ಕೊಡಬೇಕಾಗುತ್ತದೆ. ಕೆಲವು ಕಡೆಗೆ ಕಡಿಮೆ ಕೆಲವು ಕಡೆಗೆ ಹೆಚ್ಚು ಫೀ ಬೀಳುವದು; ಆದರೆ ವಿದ್ಯಾರ್ಥಿಗಳ ಶಿಕ್ಷಣಕ್ಕೆ ವಿಘ್ನ ತರುವಷ್ಟು ಅದು ಭಾರಿಯಾಗಿರುವದಿಲ್ಲ. ಸಂಯುಕ್ತ ಸಂಸ್ಥಾನಗಳು ಹದಿಮೂರು ಹದಿನಾಲ್ಕು ಇದ್ದು ಪ್ರತಿಯೊಂದು ಸಂಸ್ಥಾನದ ವಿಶ್ವವಿದ್ಯಾಲಯವು ತಮ್ಮಲ್ಲಿಯ ವಿದ್ಯಾರ್ಥಿಗಳಿಗಾಗಿ ಕೆಲವು ವಿಶಿಷ್ಟ ಸವಲತ್ತುಗಳನ್ನು ಇಟ್ಟಿರುವದು. ಯಾವದೇ ಬಾಲಕನೇ ಆಗಲಿ, ಬಾಲಿಕೆಯೇ ಆಗಲಿ ಶಿಕ್ಷಣವಿಲ್ಲದೆ ನಿರಕ್ಷರ ಕುಕ್ಷಿಯಾಗಿರಬಾರದೆಂಬುವದೇ ಅವರ ತತ್ವವಾಗಿದೆ.

ಮೆಲ್ಕಾಣಿಸಿದ, ಸಂಸ್ಥಾನದ ವಿಶ್ವವಿದ್ಯಾಲಯಗಳಲ್ಲದೆ, ಅಮೇರಿಕೆಯ ಧನಿಕರೂ ಕೆಲವು ದೊಡ್ಡ ದೊಡ್ಡ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿರುವರು. ಅವುಗಳಲ್ಲಿ ಹಾರವರ್ಡ, ಕೊಲಂಬಿಯಾ, ಶಿಕಾಗೋ, ಜಾನಹಾಪಕಿನ್ಸ, ಯೇಲ, ಸ್ಟಾಂಫರ್ಡ ಎಂಬವುಗಳು ಸುಪ್ರಸಿದ್ಧವಿವೆ. ಇಲ್ಲಿ ಫಿ ಹೆಚ್ಚಿದ್ದಾಗ್ಯೂ ಬಡ ಹುಡುಗರಿಗೆ ಮಾಫಿ ಮಾಡಲ್ಪಡುವದು. ಪ್ರತಿಯೊಂದು ದೊಡ್ಡ ಪಟ್ಟಣದಲ್ಲಿ ರಾತ್ರಿಯ ಶಾಲೆಗಳುಂಟು. ಅಲ್ಲಿ ಕೂಲಿಕಾರರು ವಿದ್ಯಾಧ್ಯಯನ ಮಾಡುವರು. ಕೆಲವೆಡೆಗೆ ಟೆಕ್ನಿಕಲ್ಲ ಕಾಲೇಜಗಳೂ, (ಔದ್ಯೋಗಿಕ ಸಂಸ್ಥೆ,) ಯುನಿವ್ಹರ್ಸಿಟಿಗಳೂ ಇವೆ. ಅಲ್ಲಿ ಅಲ್ಪ ಖರ್ಚಿನೊಳಗೆ ವಿದ್ಯಾರ್ಥಿಗಳಿಗೆ ಕಲಾಕೌಶಲ್ಯದ ಶಿಕ್ಷಣ ದೊರೆಯುತ್ತದೆ. ಕಾರ್ನೇಜಿ ವಿಶ್ವವಿದ್ಯಾಲಯವು ಇಂಥದೊಂದು ಸಂಸ್ಥೆಯಾಗಿದೆ. ವಯಸ್ಸುಮೀರಿದ ವಿದ್ಯಾರ್ಥಿಗಳು ಕೂಡ ವಿಶ್ವವಿದ್ಯಾಲಯದಲ್ಲಿ ಶಿಕ್ಷಣಲಾಭವನ್ನು ಹೊಂದುವದುಂಟು. ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಒಬ್ಬ ಐವತ್ತುವರ್ಷದ ವಿದ್ಯಾರ್ಥಿಯು ತನ್ನ ಹೆಂಡತಿಯೊಂದಿಗೆ ಎಮ್. ಏ. ಪರೀಕ್ಷೆಯ ಸಿದ್ಧತೆ ನಡಿಸಿದ್ದು ನಾನು ಕಂಡಿರುವೆನು. ಯಾವದೊಂದು ವಿಷಯವು ಒಬ್ಬರಿಗೆ ಸರಿಯಾಗಿ ಬಾರದಿದ್ದಲ್ಲಿ ಅಷ್ಟರಮಟ್ಟಿಗೇ ಖಾಸ ವಿದ್ಯಾರ್ಥಿಯಾಗಿ ಆ ವಿಷಯದಲ್ಲಿ

Digitized by ROJA MUTHIAH RESEARCH LIBRARY



ಪೂರ್ತತೆ ಹೊಂದಲಿಕ್ಕೆ ಅಡ್ಡಿ ಇಲ್ಲ. ಅಮೇರಿಕೆಯವರಿಗೆ ಶಿಕ್ಷಣದ ಮಹತ್ವವು ಒಳಿತಾಗಿ ತಿಳಿದಿದೆಂಬದೇ ಇದರ ತಾತ್ಪರ್ಯವು. ಆದುದರಿಂದಲೇ ಸರ್ವಸಾಧಾರಣ ಜನರಲ್ಲಿ ಕೂಡ ಆದಷ್ಟರ ಮಟ್ಟಿಗೆ ಶಿಕ್ಷಣಪ್ರಸಾರವಾಗುವಂತೆ ಅವರು ಮನೋಭಾವದಿಂದ ಯತ್ನಿಸುವರು.

ಇನ್ನು, ಇಲ್ಲಿಯ ಪರೀಕ್ಷೆಯ ವಿಷಯಕ್ಕೆ ವಿವರಿಸುವೆವು:— ತ್ರೈಮಾಸಿಕ ಕಾಲಾವಧಿ (ಟರ್ಮ) ನಿಯಮಿಸಲ್ಪಟ್ಟ ವಿಶ್ವವಿದ್ಯಾಲಯಗಳಲ್ಲಿ ಮೂರು ತಿಂಗಳಿಗೊಮ್ಮೆ ಪರೀಕ್ಷೆ ತೆಗೆದುಕೊಳ್ಳುವರು. ಆ ಪರೀಕ್ಷೆಗಳಂತೆ ವಿದ್ಯಾರ್ಥಿಗಳಿಗೆ ನಂಬರು ದೊರೆಯುವದು. ಇಡೀ ವರ್ಷದ ಖರ್ಚಿನ ಹಣವಿಲ್ಲದ ಹುಡುಗರು ಮೂರುತಿಂಗಳ ಅಧ್ಯಯನವನ್ನು ಮುಗಿಸಿ ಪರೀಕ್ಷೆ ಕೊಟ್ಟು ಹೊರಟು ಹೋಗುವರು. ದ್ರವ್ಯಸಂಚಯವಾದ ಕೂಡಲೇ ಮತ್ತೆ ಬಂದು ಮುಂದಿನ ಅಧ್ಯಯನವನ್ನು ಪ್ರಾರಂಭಿಸುವರು. ಅವರು ಒಂದು ವರುಷ ತಡಿದುಬಂದರೂ ಅಡ್ಡಿ ಇಲ್ಲ. ಇದರಿಂದ ತಕ್ಕಷ್ಟು ದ್ರವ್ಯವಿಲ್ಲದವರಿಗೆ ಡಿಗ್ರೀ (ಪದವಿ) ದೊರಕಿಸಲಿಕ್ಕೆ ಆರಾರು ಏಳೇಳು ವರ್ಷ ತಗಲುವದುಂಟು. ಯಾವದೊಂದು ವಿಷಯದಲ್ಲಿ ಒಬ್ಬ ವಿದ್ಯಾರ್ಥಿಯು ತೇರ್ಗಡೆ ಹೊಂದದಿದ್ದರೆ ತಿಂಗಳೆರಡು ತಿಂಗಳಲ್ಲಿ ಅವನನ್ನು ಆ ವಿಷಯದಲ್ಲಿ ಮತ್ತೆ ಪರೀಕ್ಷಿಸುವರು. ಹುಡುಗನು ಒಂದು ವಿಷಯದಲ್ಲಿ ತೀರ ಅರಗಚ್ಚಿ ಇದ್ದರೆ ಮಾತ್ರ ಆತನಿಗೆ ಆ ವಿಷಯವನ್ನು ಮೊದಲಿನಿಂದ ಪ್ರಾರಂಭಿಸಿದ ಹೊರ್ತು ಗತ್ಯಂತರವಿಲ್ಲ. ಸಾರಾಂಶವೇನಂದರೆ, ಶಿಕ್ಷಣರಹಿತನಾದ ಮನುಷ್ಯನು ಪುಚ್ಛವಿಷಾಣಹೀನನಾದ ಪಶುವೇ ಎಂದು ಅಮೇರಿಕೆಯ ಜನರ ದೃಢವಾದ ನಂಬಿಗೆಯಾಗಿರುವದರಿಂದ ಶಿಕ್ಷಣಕ್ಕಾಗಿ ಎಲ್ಲ ತರದ ಅನುಕೂಲತೆಗಳನ್ನು ಒದಗಿಸಿರುವರು.

ಅಮೇರಿಕೆಯಲ್ಲಿ ನಾನು ಸಂಚಾರಕ್ಕೆ ಹೊರಟಾಗ ಅಲ್ಲಿಯ ಹಳ್ಳಿಪಳ್ಳಿಗಳಲ್ಲಿಯ ಶಿಕ್ಷಣವು ಹೇಗೆ ನಡೆಯುತ್ತದೆಂಬದನ್ನು ನೋಡುವದು ನನ್ನ ಪ್ರೀತಿಯ ವ್ಯವಸಾಯವಾಗಿತ್ತು. ಸಣ್ಣಪುಟ್ಟ ಹಳ್ಳಿಗಳಲ್ಲಿ ಸಹ ಆಧುನಿಕಪದ್ಧತಿಗನುಸರಿಸಿ ಶಾಲೆಗಳು ಯೋಗ್ಯ ಉಪಕರಣಗಳ ಸಹಿತ ಸ್ಥಾಪಿಸಲ್ಪಟ್ಟದ್ದು ನೋಡಿ ನನಗೆ ಸಾನಂದಾಶ್ಚರ್ಯವಾಯಿತು. ಕ್ಯಾಲಿಫೋರ್ನಿಯಾದ ದಕ್ಷಿಣಭಾಗದಲ್ಲಿ ರೆಡ್‌ಲ್ಯಾಂಡ್ಸ ಎಂಬ ಹೆಸರಿನದೊಂದು ತಕ್ಕಮಟ್ಟಿಗೆ ದೊಡ್ಡದಾದ ಸುಂದರ ಗ್ರಾಮವಿದೆ. ಅಲ್ಲಿ ನನಗೆ ವ್ಯಾಖ್ಯಾನಕೊಡುವ ಪ್ರಸಂಗ ಬಂದಿತು. ಅಲ್ಲಿಯ ಹೈಸ್ಕೂಲಿನ ದೊಡ್ಡ ದಿವಾಣಖಾನೆಯೊಳಗೆ, ವ್ಯಾಸಪೀಠದ ಮೇಲೆ ಉಪನ್ಯಾಸಪ್ರಾರಂಭಕ್ಕೆ ನಿಂತುಕೊಂಡು, ಎದುರಿಗೆ ಕುಳಿತಿದ್ದ, ಮುದ್ದುಮೊಗದ ನಿರೋಗಿಗಳಾದ ಬಾಲಬಾಲಿಕೆಯರ ಪ್ರಸನ್ನಮುಖಕಮಲಗಳನ್ನು ಕಣ್ಣು ತುಂಬನೋಡಲು, ಅಮೇರಿಕೆಯೊಳಗಿನ ಹುಡುಗಹುಡಿಗೆಯರ ಶಿಕ್ಷಣದ ಸುವ್ಯವಸ್ಥೆಯೂ, ದುರ್ದೈವಿಯಾದ ನಮ್ಮ ದೇಶದೊಳಗಿನ ಲಕ್ಷಾವಧಿ ಬಾಲಬಾಲಿಕೆಯರನ್ನು ಅವಿದ್ಯಾಂಧಕಾರದಲ್ಲಿಟ್ಟು ಜೀವನವೆಂದರೆ ಏನು ಪದಾರ್ಥವಿದೆಂಬದರ ಗಂಧಕೂಡ ಇಲ್ಲದೆ ಜೀವನ್ಮೃತಗಳಂತೆ ಮಾಡಿ

ಬಿಡುವ ತಿಕ್ಷಣದ ದುರವಸ್ಥೆಯೂ ನನ್ನ ಕಣ್ಣೆದುರಿಗೆ ಕಟ್ಟಿದಂತಾಗಿ ದುಃಖಾವೇಗವು ತಡಿಯದೆ ಅಶ್ರುರೂಪದಿಂದ ಹೊರಬಿದ್ದಿತು. ಆಕಾಲಕ್ಕೆ, ಜೀವನಸುಖದ ಆಸ್ವಾದವನ್ನು ಸೇವಿಸಲಿಕ್ಕೆ ಸಮರ್ಥರನ್ನಾಗಿ ಮಾಡುವ ಪ್ರಮುಖಸಾಧನವು ಯೋಗ್ಯಶಿಕ್ಷಣವೇ ಎಂದು ನಾನು ಮನಗಂಡೆನು.

——

## ೫ನೇ ಪ್ರವೇಶ.

## ವಿದ್ಯಾರ್ಥಿಗಳ ಪರಿಶ್ರಮ.

ಇನ್ನು, ಅಮೇರಿಕೆಯೊಳಗಿನ ಬಡ ವಿದ್ಯಾರ್ಥಿಗಳು ಯಾವರೀತಿ ಪರಿಶ್ರಮಪಡ ಬೇಕಾಗುತ್ತದೆಂಬದನ್ನು ವಿಶದವಾಗಿ ವಿವರಿಸುವೆವು. ನಮ್ಮಲ್ಲಿ ಗ್ರೀಷ್ಮ ಋತುವಿನಲ್ಲಿ ದುಡಿಯುವದು ಬಲು ತಾಪದಾಯಕವಾದರೆ ಅದೇ ಸಮಯಕ್ಕೆ ಅಮೇರಿಕೆಯಲ್ಲಿ ವಿದ್ಯಾರ್ಥಿಗಳು ಕೂಲೀಮಾಡಿ ದುಡಿದು ವರ್ಷದ ಖರ್ಚಿನ ಬೆಜಿಮೆ ಮಾಡಿಡುವರು. ಬೇಸಿಗೆಯಲ್ಲಿ ಒಕ್ಕಲಿಗರಿಗೆ ಒಂದು ಕ್ಷಣದ ಫುರಸತ್ತು ಸಹ ಸಿಗದಷ್ಟು ಕೆಲಸದ ಒತ್ತಾಯವಿರುವದು. ಹಂಗಾಮಿನ ದಿವಸಗಳಲ್ಲಿ ಕೂಲಿಕಾರರಿಗೆ ದಿನಾಲು ಒಂಭತ್ತು ರೂಪಾಯಿ ಕೂಲಿ ಸಿಕ್ಕುವದು. ಚಳಿಗಾಲದಲ್ಲಿ ಬರ್ಫಬಿದ್ದು ಗುಡ್ಡಬೆಟ್ಟಗಳೆಲ್ಲ ಹಿಮಾಚ್ಛಾದಿತವಾಗುವದರಿಂದ ಕಟ್ಟಿಗೆಕಾವಲು ಮುಂತಾದ್ದು ಅಡಿವಿಯಿಂದ ಬರುವದೇ ಇಲ್ಲ. ನದಿಗಳು ಸಹ ಎಷ್ಟೋಕಡೆಯಲ್ಲಿ ಹೆಪ್ಪುಗಟ್ಟುವದರಿಂದ ಚಳಿಗಾಲದಲ್ಲಿ ಪಟ್ಟಣಗಳನ್ನು ಬಿಟ್ಟು ಹೊರಗೆ ಹಳ್ಳಿಗಳಲ್ಲಿ ಕೆಲಸವೇ ಇರುವದಿಲ್ಲ. ಬೇಸಿಗೆಯಲ್ಲಿ ಬರ್ಫವು ಕರಗಿ ಮಾರ್ಗಗಳೆಲ್ಲ ಬೈಲಾಗುವವು; ನದಿಗಳು ಹರಿಯಹತ್ತುವವು. ಅದುಕಾರಣ ಆಗ್ಗೆ ನಾಲ್ಕೂ ಕಡೆಗೆ ಕೆಲಸದ ಅಬ್ಬರವು ಒಂದೇಸವನಾಗಿ ಪ್ರಾರಂಭವಾಗುವದು. ಹುಡುಕಿದರೂ, ವೃತ್ತಪತ್ರಗಳಲ್ಲಿ "ಬೇಕು" ಎಂಬ ಅನೇಕ ಜಾಹೀರಾತುಗಳನ್ನು ಕೊಟ್ಟರೂ ಕೂಲಿಯವರು ಸಿಕ್ಕುವದಿಲ್ಲ. ನೌಕರಿಯನ್ನು ಕೊಡಿಸುವ ಕಚೇರಿಗಳಲ್ಲಿ ಒಂದೇಸವನಾಗಿ 'ಟೆಲಿಫೋನು' ನಡೆದಿರುವದು. ಆದುದರಿಂದಲೇ ಗ್ರೀಷ್ಮಋತುವಿನಲ್ಲಿ ಅಮೇರಿಕೆಯೊಳಗೆ ದುಡ್ಡಿನ ಸುರಿಮಳೆಹತ್ತಿರುವದು. ಕರ್ತೃತ್ವವುಳ್ಳವರಿಗೆ ಇಡೀ ವರ್ಷವೆಲ್ಲ ಕೂತು ತಿನ್ನುವಷ್ಟು ಹಣ ಆಗ್ಗೆ ದೊರೆಯುವದು. ವಿದ್ಯಾರ್ಥಿಗಳು ಗ್ರೀಷ್ಮಋತುವು ಪ್ರಾರಂಭವಾಗುವದಕ್ಕೆ ಒಂದೆರಡು ತಿಂಗಳು ಮುಂಚಿತವಾಗಿಯೇ ಕೆಲಸ ದೊರಕಿಸುವ ಉದ್ಯೋಗಕ್ಕೆ ಹತ್ತುವರು. ಜೂನ, ಜುಲೈ, ಅಗಸ್ಟ ಹಾಗೂ ಸಪ್ಟಂಬರದಲ್ಲಿ ವಿದ್ಯಾರ್ಥಿಗಳು ತಮ್ಮ ಇಡೀ ವರ್ಷದ ಶಿಕ್ಷಣವು ಸುಖದಿಂದ ಸಾಲುವಷ್ಟು ದ್ರವ್ಯಸಂಚಯಮಾಡುವರು.

ಆದರೆ ಈ ದ್ರವ್ಯಾರ್ಜನೆಗೆ, ದುಡಿಯುವ ಪರಿಪಾಠವಿರಬೇಕಾಗುತ್ತದೆ. ನನಗೆ ಆ ಕಾಲಕ್ಕೆ ಬಂದ ಅನುಭವವನ್ನು ನಾನು ಇನ್ನೂ ಮರೆತಿಲ್ಲ. ಅಮೇರಿಕೆಯಲ್ಲಿ ಮೊದಲಿಗೆ ನಾನು



ರೈತಾಪಿಯ ಕೆಲಸಮಾಡುವ ಪ್ರಸಂಗಬಂದಾಗ ಸಾಧಾರಣ ಕೂಲಿಕಾರನಿಗಿಂತಲೂ ನನ್ನಿಂದ ಕಡಿಮೆ ಕೆಲಸವಾಗುತ್ತಿತ್ತು. ಹದಿನಾರು ವರ್ಷದ ಹುಡುಗರು ಕೂಡ ನನಗಿಂತ ಹೆಚ್ಚು ಕೆಲಸಮಾಡುವರು. ಒಮ್ಮೆ ಗೋದಿಯ ಗಾಡಿಯನ್ನು ದಾರಿಯಲ್ಲಿ ನಿಲ್ಲಿಸಿ ಅದರೊಳಗಿನ ಗೋದಿಯನ್ನು ಸಲಿಕೆಯಿಂದ ಒಂದು ಕೋಣೆಯಲ್ಲಿ ತುಂಬುವ ಕೆಲಸವು ನನ್ನ ಪಾಲಿಗೆ ಬಂದಿತ್ತು. ಗೋದಿಯನ್ನು ಕೋಣೆಯಲ್ಲಿ ತುಂಬುವದಕ್ಕೆ ಕೋಣೆಯ ಗೋಡೆಗೆ ಒಂದು ಚತುಷ್ಕೋನವಾದ ಛಿದ್ರವಿತ್ತು. ಗಾಡಿಯಲ್ಲಿ ನಿಂತುಕೊಂಡು ಸಲಿಕೆಯಿಂದ ಎಳಿದು ಗೋದಿಯನ್ನು ಆ ಛಿದ್ರದೊಳಗಿಂದ ಒಳಗೆ ಒಗಿಯುವದು ನನ್ನ ಕೆಲಸವಾಗಿತ್ತು. ಈ ಕೆಲಸವನ್ನು ಮೊದಲಿಗೆ ನಾನೆಂದೂ ಮಾಡಿದವನಲ್ಲಾದ್ದರಿಂದ ಗೋದಿಯನ್ನು ಸಲಿಕಿಯಿಂದಾ ಎಳಿದು ಎತ್ತಿ ಬಿಸುಡಲು ಅದರಲ್ಲಿ ಅರ್ಧದಷ್ಟು ಒಳಗೆಬಿದ್ದು ಉಳಿದ ಅರ್ಧವೆಲ್ಲ ಗಾಡಿಯ ಕೆಳಗೆ ದಾರಿಯ ಮೇಲೆ ಬಿದ್ದದ್ದನ್ನು ಹೊಲದ ಯಜಮಾನನು ಕಂಡು ನಕ್ಕು ಸಲಿಕೆಯನ್ನು ಹೇಗೆ ಉಪಯೋಗಿಸಬೇಕೆಂಬದನ್ನು ತೋರಿಸಿದನು. ಅದರಂತೆ ನಾನು ಮತ್ತೆ ಯತ್ನಿಸಲು ಗೋದಿಯೆಲ್ಲ ಕೆಳಗೆ ಬಿದ್ದವು! ನನ್ನ ಕೂಡ ಕೆಲಸಮಾಡುತ್ತಿದ್ದ ಇತರ ಕೂಲಿಯ ಹುಡುಗರು ಇದನ್ನು ಕಂಡು ಖೊಳ್ಳನೆ ನಕ್ಕರು. ಇವರು ನನಗಿಂತ ಚಿಕ್ಕವರಾದಾಗ್ಯೂ ಈ ಕೆಲಸವನ್ನು ನಾನು ಮಾಡುವದಕ್ಕಿಂತ ಚನ್ನಾಗಿ ಮಾಡುವರು. ಈ ನನ್ನ ಸ್ಥಿತಿ ನೋಡಿ ನನಗೆ ನಾಚಿಕೆಯುಂಟಾಯಿತು. ನನ್ನ ಇತರ ವ್ಯವಸಾಯ ಬಂಧುಗಳಿಗಿಂತ ನಾನು ಹೆಚ್ಚು ಘಟ್ಟಿಗನೂ ಬಲವುಳ್ಳವನೂ ಇದ್ದಾಗ್ಯೂ ಚಿಕ್ಕಂದಿನಿಂದ ಕೈಮುಟ್ಟಿ ದುಡಿಯುವ ರೂಢಿಯಿಲ್ಲಾದ್ದರಿಂದ, ಅವರಷ್ಟು ಕೆಲಸ ನನ್ನಿಂದಾಗುತ್ತಿರಲಿಲ್ಲ. ಅಮೇರಿಕೆಯ ಹುಡುಗರಿಗೆ ಸಣ್ಣಂದಿನಿಂದ ಕೆಲಸಮಾಡುವ ಅಭ್ಯಾಸವಿರುವದರಿಂದ ಎಷ್ಟು ಬಿಕ್ಕಟ್ಟಿನ ಕೆಲಸಬಂದರೂ ಅವರು ಹೆದರುವದಿಲ್ಲ. ನಮ್ಮಲ್ಲಿ ಕೂಲಿಕಾರರ ವರ್ಗವೇ ಬೇರೆಯಿರುವದರಿಂದ ಉಚ್ಚವರ್ಣದವರು, ತಮ್ಮ ಹುಡುಗರು ಕೆಲಸಮಾಡುವದೆಂದರೆ ಕೀಳುತನವೆಂದು ಭಾವಿಸುವರು. ವತನದಾರ, ಕಾಮದಾರ, ಸರದಾರರ ಮಕ್ಕಳ ಮಾತಂತೂ ಕೇಳಕೂಡದು. ಮೈಯ್ಯಲ್ಲಿ ಅಂಗಿಹಾಕುವದಕ್ಕೆ ಇವರಿಗೆ ಆಳುಗಳು ಬೇಕು! ಬಹಿರ್ದೆಶೆಗೆ ಹೋಗುವದಾದರೆ, ತಂಬಿಗೆತಕ್ಕೊಂಡು ಇವರ ಸಂಗಡ ಆಳು ಹೋಗಬೇಕು!!

ಇಂಥ ಸಂಸ್ಕಾರಗಳಲ್ಲಿ ಬೆಳೆದ ಹಿಂದೀಯುವಕರು ಅಮೇರಿಕೆಗೆ ಹೋಗಿ ಮಾಡುವದೇನು? ಇಂಥವರು ಮೊದಲಿಗೆ ಕೂಲಿಮಾಡಲಿಕ್ಕೆ ಕಲಿಯಬೇಕು. 'ಅಮೇರಿಕೆಯಲ್ಲಿ ಬೇಕಾದಷ್ಟು ಕಷ್ಟಗಳನ್ನು ಸಹಿಸಲಿಕ್ಕೆ ಸಿದ್ಧರಿರುವೆವೆಂದು' ನನ್ನ ಅನೇಕ ದೇಶಬಂಧುಗಳು ನನಗೆ ಬರೆಯುವದು ನೋಡಿ ನಗೆ ಬರುತ್ತದೆ. ಅಮೇರಿಕೆಯಲ್ಲಿ ಕೈಮುಟ್ಟಿ ಹೇಗೆ ದುಡಿಯಬೇಕೆಂಬದರ ಕಲ್ಪನೆ ಅವರಿಗಿಲ್ಲ. ಅಲ್ಲಿ ಒಪ್ಪತ್ತು ತಿನ್ನಲಿಕ್ಕೆ ದೊರೆತರೂ ಸಾಕು; ಅಷ್ಟರಲ್ಲಿಯೇ ತಾವು ನಿರ್ವಾಹಮಾಡಿಕೊಳುವೆನೆಂದು ಅವರು ತಿಳಿಯುವರು. ಹಿಂದೀ ಜನರು ಹೊಟ್ಟೆಕಟ್ಟುವದರಲ್ಲಿ—, ಹಸಿವೆಯಿಂದ ಸಾಯುವದರಲ್ಲಿ—, ಬಲು ಜಾಣರಿರುವ

Digitized by ROJA MUTHIAH RESEARCH LIBRARY

ಸಂಗತಿಯು ಜಗಪ್ರಸಿದ್ಧವಿದೆ. ಒಂದು ಮುಕ್ಕು ಅವಲಕ್ಕಿಯು ಮೇಲೆ ಕಾಲಕಳೆಯುವದರಲ್ಲಿ ಅವರು ಬಲು ಪ್ರವೀಣರು; ಆದರೆ ಈ ಪ್ರಾವೀಣ್ಯಕ್ಕೆ ಅಮೇರಿಕೆಯಲ್ಲಿ ಅವ್ವಾಳಿತನವೆಂಬ ಹೆಸರುಂಟು. ಅಲ್ಲಿ ಹೊಟ್ಟೆ ತುಂಬಿಕೊಳ್ಳುವದರಲ್ಲಿ ಕುಶಲರಿರುವವರಿಗೇ ಮಾನವಿರುವದು. ಕೆಲಸ ಮಾಡುವವರೇ ಹೊಟ್ಟೆ ತುಂಬಿಕೊಳ್ಳುವರು; ಚಿಕ್ಕಂದಿನಿಂದ ದುಡಿಯುವ ರೂಢಿಯು ಇದ್ದವನೇ ದುಡಿಯಬಲ್ಲನು. ಅಮೇರಿಕೆಯಲ್ಲಿ ದೊಡ್ಡ ದೊಡ್ಡ ಶ್ರೀಮಂತರು ಕೂಡ ತಮ್ಮ ಮಕ್ಕಳನ್ನು ಗಿರಣಿ, ಕಾರಖಾನೆಗಳಲ್ಲಿ ಸಾಧಾರಣ ಕೂಲಿಕಾರರಂತೆ ದುಡಿಯ ಕಳುಹುವರು. ಕೂಲಿಕಾರನಾಗುವದು ಅವರ ಧ್ಯೇಯವಲ್ಲೆಂಬುವದು ನಿಜ; ಆದರೆ ದುಡಿತದ ಅಭ್ಯಾಸವಿರುವದು ಎಲ್ಲರಿಗೂ ಅವಶ್ಯ; ದುಡಿತದಿಂದ ಮನುಷ್ಯನು ಹುರುಪಿನವನೂ, ಚಟವಟಿಕೆಯುಳ್ಳವನೂ, ದರ್ಶನೀಯನೂ, ಘಟ್ಟಿಗನೂ ಆಗುವನು. ನಮ್ಮಲ್ಲಿಯ ಸುಶಿಕ್ಷಿತರು ಕೈಯಿಂದ ದುಡಿಯುವದು ಪಾಪವೆಂದೂ, ತಮ್ಮ ಶಿಕ್ಷಣಕ್ಕೆ ಕುಂದುತರುವದೆಂದೂ ತಿಳಿದು ತಿಂಗಳೊಂದಕ್ಕೆ ಹತ್ತು ರುಪಾಯಿಯ ನೌಕರಿಯ ಸಲುವಾಗಿ ಅಧಿಕಾರಸ್ಥರ ಎದುರಿಗೆ ಲಾಂಗೂಲಚಾಲನ ಮಾಡುವರು; ಆದರೆ ಸ್ವತಂತ್ರವಾಗಿ ದುಡಿದು ತಮ್ಮ ಹೊಟ್ಟೆ ತುಂಬಿಕೊಳ್ಳುವದು ಅವರಿಂದಾಗದು! ಅಮೇರಿಕೆಯಲ್ಲಿ ವಿದ್ಯಾರ್ಥಿಗಳಿಗೆ ಹೊಲದಲ್ಲಿ ಎಲ್ಲ ತರದ ಕೆಲಸಗಳನ್ನು ಮಾಡಬೇಕಾಗುತ್ತದೆ. ಬೇಸಾಯಕ್ಕೆ ಅಲ್ಲಿ ಕುದುರೆಗಳನ್ನು ಉಪಯೋಗಿಸುವದರಿಂದ ಎತ್ತುಗಳನ್ನು ಕೇವಲ ಮಾಂಸಕ್ಕಾಗಿಯೇ ಸಾಕುವರು. ರೆಂಟೆಹೊಡೆಯುವದು, ಬೆಳೆ ಕೊಯ್ಯುವದು, ಕುದುರೆಗಳನ್ನು ಕಾಯುವದು, ಮೊದಲಾದ ಕೆಲಸಗಳನ್ನು ವಿದ್ಯಾರ್ಥಿಗಳು ಮಾಡುವರು. ಎಷ್ಟೋ ಒಕ್ಕಲಿಗರಲ್ಲಿ ಕೂಲಿಕಾರರು ವರ್ಷದ ಹನ್ನೆರಡು ತಿಂಗಳು ದುಡಿಯುವರು; ಆದರೆ ಗ್ರೀಷ್ಮಋತುವಿನಲ್ಲಿ ಹೆಚ್ಚು ಕೂಲಿಕಾರರು ಬೇಕಾಗುವರು. ಯಂತ್ರಗಳನ್ನು ನಡಿಸುವದರಲ್ಲಿ ನಿಪುಣರಾದ ವಿದ್ಯಾರ್ಥಿಗಳಿಗೆ ಹೆಚ್ಚು ಕೂಲಿ ಸಿಕ್ಕುವದು. ಅಮೇರಿಕೆಯಲ್ಲಿ ಹೊಲಕೊಯ್ಯುವದೂ, ಹುಲ್ಲು ಕೊಯ್ಯುವದೂ, ಮುಂತಾದ ಅನೇಕ ಕೆಲಸಗಳೆಲ್ಲ ಯಂತ್ರಸಾಧನೆಯಿಂದ ನಡೆಯುವವು. ಅಲ್ಲಿಯ ಒಕ್ಕಲಿಗರು ಬೆಳೆಯ ಸಲುವಾಗಿ ದೈವವಾದಿಗಳಾಗಿರದೆ ಬೆಳೆ ಹೆಚ್ಚು ಬರುವದಕ್ಕಾಗಿ ತರತರದ ರಾಸಾಯನಿಕ ಪದಾರ್ಥಗಳನ್ನುಪಯೋಗಿಸುವರು. ಪೈರಿಗೆ ಹುಳ ಹತ್ತಿದರೆ 'ಪೈಟಸ ಗ್ರೀನ' ಎಂಬ ಪದಾರ್ಥದಿಂದ ಅದಕ್ಕೆ ನೀರೆರೆಯುವರು; ಅದರಿಂದ ಹುಳಗಳೆಲ್ಲ ಸತ್ತುಹೋಗುವವು. ಚಳಿಗಾಲದಲ್ಲಿ ಇಬ್ಬನಿಯ ಹೆದರಿಕೆಯಿರುವಾಗ ಒಕ್ಕಲಿಗರು ಹೊಲದಲ್ಲಿ ಅಲ್ಲಲ್ಲಿ ಬೆಂಕಿಯನ್ನು ಮಾಡಿ ದಟ್ಟ ಹೊಗೆ ಹೊರಡುವಂತೆ ಮಾಡುವರು. ಈ ಹೊಗೆಯು ಮೇಲಕ್ಕೇರಿ ಚಳಿಯಿಂದ ಒತ್ತಟ್ಟಿಗೆ ಮಿಲಿತವಾಗಿ, ಹೊಲದ ಮೇಲೆ ಗುಡಾರದಂತೆ ನಿಂತು ಪೈರನ್ನು ರಕ್ಷಿಸುವದು. ಗೋವಿನಜೋಳದ ಧಂಟಿಗೆ ಹೆಚ್ಚು ತೆನೆ ಬರಬೇಕೆಂದು ಅಮೇರಿಕೆಯ ಒಕ್ಕಲಿಗರು ಪ್ರಯತ್ನ ಮಾಡಿ ಯಶ ದೊರಕಿಸಿರುವರು. ಪೈರು ಹೆಚ್ಚಿಗೆ ಬರಬೇಕೆಂದು ಅವರು ಅನೇಕ ಶಾಸ್ತ್ರೀಯ ಪ್ರಯೋ



ಗಗಳನ್ನು ಮಾಡಿ ಲಾಭಹೊಂದಿರುವರು. ನಮ್ಮಲ್ಲಿಯ ರೈತರಂತೆ ಅವರು ದೇವರ ಮೇಲೆ ಭಾರಹಾಕಿ ಸುಮ್ಮನೆ ಕೊಡ್ರುವದಿಲ್ಲ. ದೇವರು ನ್ಯಾಯಿಯು; ಹಿಂದೀ ಜನರ ಕೂಡ ಅವನ ದ್ವೇಷವೇನೂ ಇಲ್ಲ; ಅಮೇರಿಕೆಯವರಂತೆ ಆತನು ನಮಗೂ ಕೈಕಾಲು, ಬುದ್ಧಿ ತಿಳುವಳಿಕೆಗಳನ್ನು ಕೊಟ್ಟಿರುವನು; ಆದರೆ ನಾವು ಹಳೇ ರೀತಿನಡಾವಳಿಗಳ ಗುಲಾಮರು. ಪ್ರಗತಿಯು ನಮಗೆ ಸೇರುವದಿಲ್ಲ. ಸಾವಿರಾರು ವರ್ಷಗಳಿಂದ ನಡೆದುಬಂದ ರೆಂಟೆಕುಂಟೆಗಳನ್ನೇ ನಾವು ಈಗಲಾದರೂ ಉಪಯೋಗಿಸುವೆವು. ಹೊಸ ಹೊಸ ಶೋಧಗಳನ್ನು ಮಾಡುವ ಶಕ್ತಿಯೇ ನಮ್ಮಲ್ಲಿಲ್ಲ. ಇದಕ್ಕೆ ವಿಪರೀತವಾಗಿ ಅಮೇರಿಕೆಯವರು ಉದ್ಯೋಗಿಗಳೂ, ಸಾಹಸವುಳ್ಳವರೂ ಪುರುಷಾರ್ಥಿಗಳೂ ಆಗಿರುವರು. ಬಿಕ್ಕಟ್ಟಿನ ಪ್ರಸಂಗ ಬಂದರೆ ಎದೆಗುಂದದೆ ಅದರ ಕೂಡ ಹೋರಾಡುವದರಲ್ಲಿಯೇ ತಮ್ಮ ಭಾಗ್ಯೋದಯವೆಂದು ಅವರು ತಿಳಿಯುವರು. ಒಳ್ಳೊಳ್ಳೆಯ ಎದೆಗುಂದಿಸುವ ಕೆಲಸ ಬಂದರೂ ಅದಕ್ಕೊಂದು ಉಪಾಯವನ್ನು ಅವರು ತೆಗೆದೇ ತೆಗೆಯುವರು. ಆ ಉಪಾಯವನ್ನು ಹುಡುಕಿ ತೆಗೆಯಲಿಕ್ಕೇ ದೇವರು ತಮಗೆ ಬುದ್ಧಿಯನ್ನು ಕೊಟ್ಟಿರುವನೆಂದು ಅವರು ತಿಳಿಯುವರು. ಬುದ್ಧಿಯ ಉಪಯೋಗ ಮಾಡದಿದ್ದವರ ತಲೆಗೆ ಪೆಟ್ಟುತಾಗದೆ ಉಳಿಯದು. ಈ ಸಂಗತಿಯು ಅಮೇರಿಕೆಯವರಿಗೆ ಚನ್ನಾಗಿ ಮನವರಿಕೆಯಾದ್ದರಿಂದ ಅವರು ಹೊಸ ಹೊಸ ಶೋಧಗಳನ್ನು ಮಾಡುವದರಲ್ಲಿ ಮುಳುಗಿರುವರು. ನಮಗೂ ಅಮೇರಿಕೆಯವರಿಗೂ ಇದ್ದ ಭೇದವು ಇದೇ.

ಬೇಸಾಯವಲ್ಲದೆ ವಿದ್ಯಾರ್ಥಿಗಳು ಗಿರಣಿಗಳಲ್ಲಿಯೂ ಕಾರಖಾನೆಗಳಲ್ಲಿಯೂ ಕೂಲಿಯ ಮಾಡುವರು. ಅಮೇರಿಕೆಯಲ್ಲಿ ಕಟ್ಟಿಗೆ ಕೊರೆಯುವ ಅನೇಕ ಗಿರಣಿಗಳಿದ್ದು ಅಲ್ಲಿ ಪ್ರತಿವರ್ಷ ಕೋಟಿಗಟ್ಲೆ ಘೂಟು ಕಟ್ಟಿಗೆ ಕೊರೆಯಲ್ಪಡುತ್ತದೆ. ಇಲ್ಲಿ ಕೆಲಸ ಮಾಡುವ ವಿದ್ಯಾರ್ಥಿಗಳಿಗೆ ತೀರ ಕಡಿಮೆಯೆಂದರೆ ಆರು ರೂಪಾಯಿ ಕೂಲಿ ದಿನಾಲು ಸಿಕ್ಕುವದು. ಬೇಸಿಗೆಯ ಮೂರು ತಿಂಗಳು ವಿದ್ಯಾರ್ಥಿಗಳು ಈ ಗಿರಣಿಗಳಲ್ಲಿ ದುಡಿದು ಸಾಕಷ್ಟು ದ್ರವ್ಯಸಂಚಯ ಮಾಡುವರು. 'ರೆನಿಯರ' ಇವರು ಕಟ್ಟಿಗೆಯ ಗಿರಣಿಯಲ್ಲಿ ನಾನು ದುಡಿಯುವಾಗ ನನಗೆ ದಿನಾಲು ಪಾವಲಿ ಕಡಿಮೆ ಏಳುರೂಪಾಯಿ ಸಿಕ್ಕುತ್ತಿತ್ತು; ಮೂರುವರೆ ತಿಂಗಳು ದುಡಿದು ನನ್ನ ಶಿಕ್ಷಣದ ಖರ್ಚಿಗೆ ಸಾಕಷ್ಟು ದ್ರವ್ಯದೊರಕಿಸಿದೆನು. ಪ್ರತಿತಿಂಗಳಿಗೆ ನನಗೆ ಇಪ್ಪತ್ತೈದು ರೂಪಾಯಿ ಖರ್ಚಿಗೆ ಬೇಕಾಗುತ್ತಿತ್ತು ಎಂದು ಹೇಳಿರುವರು.

ತೋಟಗಳಲ್ಲಿ ದುಡಿಯುವ ವಿದ್ಯಾರ್ಥಿಗಳಿಗೆ ಅವರ ದುಡಿಮೆಗೆ ತಕ್ಕ ಕೂಲಿ ದೊರೆಯುವದು. ಈ ಕೆಲಸವನ್ನು ಅವರು ಗುತ್ತಿಗೆಯಿಂದ ಮಾಡುವರು. ಅಮೇರಿಕೆಯ ಪಶ್ಚಿಮಭಾಗದಲ್ಲಿ ಹಂಣು ಹಂಪಲಗಳ ಪೈರು ವಿಪುಲವಾಗಿ ಬರುವದು. ಸೇಬು, ಬಾದಾಮಿ, ಅಕ್ರೋಡ, ಕಿತ್ತಳೆ ಮೊದಲಾದ ಫಲಗಳು ಹೇರಳವಾಗಿ ಬೆಳೆಯುವವು.

Digitized by ROJA MUTHIAH RESEARCH LIBRARY

ತೋಟದ ಯಜಮಾನನು, ಅಲ್ಲಿ ಕೆಲಸ ಮಾಡುವ ಕೂಲಿಕಾರರಿಗೆ ಹಣ್ಣು ಹಾಕುವದಕ್ಕೆ ಸಣ್ಣ ಸಣ್ಣ ಪೆಟ್ಟಿಗೆಗಳನ್ನು ಕೊಡುವನು. ಒಂದು ಪೆಟ್ಟಿಗೆ ತುಂಬಿ ಹಣ್ಣು ಕೂಡಹಾಕಿದರೆ ಎರಡೂವರೆ ಆಣೆಯಿಂದ ಐದಾಣೆವರೆಗೆ ಕೂಲಿ ಸಿಕ್ಕುವದು. ಈ ರೀತಿ ದುಡಿದು ವಿದ್ಯಾರ್ಥಿಗಳು ದಿನಾಲು ಎಂಟೊಂಬತ್ತು ರೂಪಾಯಿ ದೊರಕಿಸುವರು.

ಅನೇಕ ಹಿಂದೀಜನರು ಅಮೇರಿಕೆಯಲ್ಲಿ ಹಣ್ಣಿನ ಕೆಲಸ ಮಾಡುವರು. ಕ್ಯಾಲಿಫೋರ್ನಿಯಾ, ಆರೆಗಾನ, ವಾಶಿಂಗ್ಟನ್ (ಪ್ಯಾಸಿಫಿಕ್ ಮಹಾಸಾಗರದ ದಂಡೆ) ಈ ಮೂರು ಸಂಸ್ಥಾನಗಳಲ್ಲಿ ಹಣ್ಣು ಬೆಳೆಯುವದು ಹೆಚ್ಚಿಗೆ. ತೋಟಿಗನಿಗೆ ಕೂಲಿಕಾರರ ಅವಶ್ಯಕತೆ ಹೆಚ್ಚಾಗಿರುವದರಿಂದ, ಕೂಲಿಕಾರರ ಆರ್ಜವ ಮಾಡುವ ಪ್ರಸಂಗ ಬರುತ್ತದೆ. ಹಣ್ಣಿನ ಸುಗ್ಗಿಯಲ್ಲಿ ನಾಲ್ಕೂ ಕಡೆಗೆ ಕೂಲಿಕಾರರ ಕೊರತೆ ಬಹಳ. ಶ್ರಮಕ್ಕೆ ತಕ್ಕ ಕೂಲಿಯನ್ನು ದುಡಿಯುವ ಕಾಲವು ಇದೇ.

ಬೇಸಿಗೆಯಲ್ಲಿ 'ಅಲಾಸ್ಕಾ' ಎಂಬಲ್ಲಿಯ ಬಂಗಾರದ ಖಣಿಗಳ ಕೆಲಸ ಪ್ರಾರಂಭವಾಗುತ್ತದೆ. ಅಲ್ಲಿ ದಿನಾಲು ಇಪ್ಪತ್ತೈದು ಮೂವತ್ತು ರೂಪಾಯಿ ಕೂಲಿ ದೊರೆಯುತ್ತದೆ; ಆದರೆ ಈ ಕೆಲಸವು ಬಲು ಬಿಕ್ಕಟ್ಟಿನದಿದ್ದು ಖರ್ಚು ಹೆಚ್ಚಿಗೆ ಬರುವದು. ಅನೇಕ ಕೂಲಿಕಾರರು ಅಲ್ಲಿ ದುಡಿಯುವರು. ಈ ಋತುವಿನಲ್ಲಿ ಕೋಲಂಬಿಯಾ ಸಮುದ್ರದಲ್ಲಿ ಮೀನಹಿಡಿಯುವ ಕೆಲಸವು ಬಲವಾಗಿ ಸಾಗುವದು. ಅಲ್ಲಿ ವಿದ್ಯಾರ್ಥಿಗಳು ದುಡಿದು ದಿನಾಲು ಎಂಟು ಹತ್ತು ರೂಪಾಯಿ ಗಳಿಸುವರು.

ಇಲ್ಲಿ, ಅಮೇರಿಕೆಯೊಳಗಿನ ತೋಟಗಳ ವಿಷಯವಾಗಿ ಮತ್ತೆ ಕೆಲವು ಸಂಗತಿಗಳನ್ನು ಹೇಳಿದರೆ ಅಪ್ರಸ್ತುತವಾಗದು. ನಮ್ಮಲ್ಲಿಯ ಜನರಿಗೆ ವನಸ್ಪತಿ ವಿದ್ಯೆಯ ಜ್ಞಾನವು ಸ್ವಲ್ಪಾದರೂ ಇರುವದಿಲ್ಲ. ಅಮೇರಿಕೆಯ ಎಲ್ಲ ಸಂಸ್ಥಾನಗಳಲ್ಲಿ ಸರಕಾರದವರ ವತಿಯಿಂದ ಪ್ರಯೋಗಸ್ಥಾನಗಳು ( Experiment Stations ) ಸ್ಥಾಪಿಸಲ್ಪಟ್ಟಿದ್ದು ಅಲ್ಲಿ ಕೃಷಿಶಾಸ್ತ್ರಜ್ಞರು ಒಕ್ಕಲತನದ ಹಾಗೂ ತೋಟದ ಪೈರುಗಳ ವಿಷಯವಾಗಿ ಪ್ರಯೋಗಗಳನ್ನೂ ಶೋಧಗಳನ್ನೂ ಮಾಡುವರು. ಯಾವದಾದರೊಂದು ಹೊಲಕ್ಕಾಗಲಿ, ತೋಟಕ್ಕಾಗಲಿ ಯಾವದೇತರದ ಅಪಾಯ ಸಂಭವಿಸಿದರೂ, ಜಂತುಶಾಸ್ತ್ರವಿಶಾರದರಾದ ವಿದ್ವಾಂಸರು ಅಲ್ಲಿ ಕೂಡಿ ಅದರ ಕಾರಣವನ್ನು ಶೋಧಿಸಲು ಯತ್ನಿಸುವರು. ಪ್ರತಿವರ್ಷ ಗ್ರೀಷ್ಮ ಋತುವಿನಲ್ಲಿ ಒಕ್ಕಲಿಗರ ಹಿತಕ್ಕಾಗಿ ವಿದ್ವಾಂಸರಾದ ಅಧ್ಯಾಪಕರು ಸರಕಾರದ ವತಿಯಿಂದ ಚಲೋ ಉಪಯುಕ್ತವಾದ ಉಪನ್ಯಾಸಗಳನ್ನು ಕೊಟ್ಟು ಒಕ್ಕಲತನದ ಹಾಗೂ ತೋಟದ ವಿದ್ಯೆಯ ಮರ್ಮವನ್ನು ತಿಳಿಸಿ ಹೇಳುವರು. ಈ ಉಪನ್ಯಾಸಗಳು ತಿಂಗಳೆರಡು ತಿಂಗಳು ನಡೆಯುವವು. ಇದರಿಂದ ಒಕ್ಕಲಿಗರಿಗೆ ಗಿಡಮರಗಳ ಗುಣದೋಷಗಳೂ ರೂಢಿಗಳೂ ಅವುಗಳಿಗಿರುವ ಶತ್ರುಮಿತ್ರರ ಜ್ಞಾನವೂ ಉಂಟಾಗುವದು. ಕೇಳುವವರಿಗೆ ಆನಂದವೂ ಜ್ಞಾನವೂ ಉಂಟಾಗುವಂತೆ ಉಪನ್ಯಾಸ



ಗಳು ಸುಲಭವಾಗಿಯೂ ಸ್ಪಷ್ಟವಾಗಿಯೂ ಕೊಡಲ್ಪಡುವವು. ನಮ್ಮಲ್ಲಿಯಂತೆ ಅಮೇರಿಕೆಯ ಒಕ್ಕಲಿಗರು ಅಜ್ಞಾನಿಗಳೂ ದುರಾಗ್ರಹಿಗಳೂ ಇರುವದಿಲ್ಲ ಅವರು ತಮ್ಮ ಕಸಬಿನಲ್ಲಿ ಕುಶಲರಾಗಿದ್ದು ಹೊಸ ಶೋಧಗಳನ್ನು ಕೂಡಲೇ ಸ್ವೀಕರಿಸುವರು. ಕೈಕೊಂಡ ಕೆಲಸದ ಸಿದ್ಧ್ಯರ್ಥವಾಗಿ ಅವರು ತಮ್ಮ ಬುದ್ಧಿಯನ್ನು ಒಳಿತಾಗಿ ಉಪಯೋಗಿಸುವರು.

ಕ್ಯಾಲಿಫೋರ್ನಿಯಾದೊಳಗಿನ ಒಂದು ದೊಡ್ಡ ಫಲೋದ್ಯಾನದಲ್ಲಿ ಸೇವು ಹಣ್ಣಿನ ಗಿಡಗಳಿಗೆ ಒಮ್ಮೆ ಹುಳಹತ್ತಿದ್ದರಿಂದ ಹಂಣು ಬಹಳ ನಷ್ಟವಾಗಿ ಎಂಟೊಬತ್ತು ಲಕ್ಷ ಡಾಲರುಗಳ ಹಾನಿಯಾಯಿತು. ತೋಟದ ಯಜಮಾನನು ಈ ವಿಷಯಕ್ಕೆ ಸರಕಾರದವರಿಗೆ ಬರೆದು ಕಳುಹಲು, ಅವರು ಜಂತುಶಾಸ್ತ್ರಜ್ಞರನ್ನು ಅಲ್ಲಿ ಕಳುಹಿಸಿ, ಹಂಣಿಗೆ ಹತ್ತಿದ ಕೀಟಕಗಳನ್ನು ಪರೀಕ್ಷಿಸಿ, ಅವುಗಳ ರೂಢಿಗಳನ್ನೂ ಅವು ಏನು ತಿನ್ನುತ್ತವೆಂಬದನ್ನೂ ಅರಿತುಕೊಂಡು, ಕೆಲವು ತಿಂಗಳು ಶೋಧಮಾಡಿ ಆ ಹುಳಗಳನ್ನು ನಾಶಮಾಡುವಂಥ ಒಂದು ರಸವನ್ನು ಸಿದ್ಧಪಡಿಸಿ ಅದನ್ನು ಉಪಯೋಗಿಸಲು, ಮರುವರ್ಷ ಆ ಗಿಡಗಳಿಗೆ ಅಸಂಖ್ಯ ಫಲಗಳು ತಾಗಿ, ತೋಟಿಗನಿಗೆ ಮೊದಲಿಗಿಂತ ನಾಲ್ಕುಪಟ್ಟು ಹೆಚ್ಚು ಲಾಭವಾಯಿತು.

ಹಿಂದುಸ್ಥಾನದಲ್ಲಿಯೂ ನಾನಾತರದ ಹಣ್ಣುಹಂಪಲಗಳು ಬೆಳೆಯುವವು. ಮಾವಿನ ಫಲವಂತೂ ಅದರಲ್ಲಿ ಹೆಚ್ಚು; ಹೀಗಿದ್ದು ಅದರಿಂದ ಲಾಭವನ್ನು ಹೇಗೆ ಮಾಡಿಕೊಳ್ಳಬೇಕೆಂಬದು ನಮ್ಮ ಜನರಿಗೆ ತಿಳಿಯುವದಿಲ್ಲ. ಉಷ್ಣತೆಯಿಂದ ಫಲಗಳು ಬೇಗ ಕೊಳೆಯದಂತೆ ಹೇಗೆ ರಕ್ಷಿಸಬೇಕೆಂಬುವದನ್ನು ಅವರು ಅರಿಯರು. ಸಾನ್ ಫ್ರಾನ್ಸಿಸ್ಕೊ ಪಟ್ಟಣದಿಂದ ನ್ಯೂಯಾರ್ಕವು ಮೂರೂವರೆ ಸಾವಿರ ಮೈಲು ದೂರವಿದ್ದಾಗ್ಯೂ ಸಾನ್‌ಫ್ರಾನ್ಸಿಸ್ಕೊದಿಂದ ನ್ಯೂಯಾರ್ಕಕ್ಕೆ ಲಕ್ಷಾವಧಿ ರೂಪಾಯಿಗಳ ಹಣ್ಣುಹಂಪಲಗಳು ಕಳುಹಿಸಲ್ಪಡುತ್ತವೆ; ಆದರೂ ದಾರಿಯಲ್ಲಿ ಅವು ಕೆಟ್ಟು ಕೊಳೆತು ಹೋಗುವದಿಲ್ಲ. ಅಮೇರಿಕೆಯ ದಕ್ಷಿಣಸಂಸ್ಥಾನಗಳಲ್ಲಿ ಬೇಸಿಗೆಯ ತಾಪವು ಅಸಹ್ಯವಾಗಿದ್ದು ಉಷ್ಣಮಾಪಕ ಯಂತ್ರದಲ್ಲಿ ಪಾರಜವು ನೂರಹತ್ತು ಅಂಶಗಳವರೆಗೆ ಏರುವದು. ಅಂಥ ಸ್ಥಿತಿಯಲ್ಲಿ ಯೋಗಪೂರ್ವೋಪಾಯಗಳನ್ನು ಮಾಡಿದ ಹೊರ್ತು ಹಂಣು ಹಂಪಲಗಳನ್ನು ಇಷ್ಟು ದೂರ ಕಳುಹಿಸಲಿಕ್ಕೆ ಬರುವದಿಲ್ಲ. ಇದಕ್ಕಾಗಿಯೇ ಅಮೇರಿಕೆಯವರು "ರೇಫರಿಜೇಟರ" ವೆಂಬದೊಂದು ತರದ ಬಂಡಿಯನ್ನು ಮಾಡಿರುವರು. ಈ ಬಂಡಿಯೊಳಗೆ ಬರ್ಫದ್ದೊಂದು ಖಾನೆಯನ್ನು ಮಾಡಿ ಉಳಿದ ಭಾಗದಲ್ಲಿ ಹಣ್ಣಿನ ಪೆಟ್ಟಿಗೆಗಳನ್ನು ಇಡುವರು. ಹವೆಯಾಡುವದಕ್ಕೆ ಛಿದ್ರಗಳ ಯೋಜನೆಯೂ ಇರುವದು. ಬರ್ಫವು ಹಣ್ಣುಗಳನ್ನು ಬಾಹ್ಯಉಷ್ಣತೆಯಿಂದ ಸಂರಕ್ಷಿಸಿ ಅವುಗಳನ್ನು ಕೆಡಗೊಡುವದಿಲ್ಲ. ಈ ಒಂದು ಉಪಾಯದಿಂದ ಅಮೇರಿಕೆಯ ಜನರು ತಮ್ಮ ವ್ಯಾಪಾ

Digitized by ROJA MUTHIAH RESEARCH LIBRARY

ರವನ್ನು ಕೋಟಿಗಟ್ಲೆ ರೂಪಾಯಿಗಳಿಂದ ಬೆಳಿಸಿರುವರು. ಆದುದರಿಂದಲೇ ಅಮೇರಿಕೆಯ ಫಲಾದಿಗಳು ಜಗತ್ತಿನ ಎಲ್ಲ ಪೇಟೆಗಳಲ್ಲಿ ಕ್ರಯಕ್ಕೆ ಸಿಕ್ಕುವವು.

ಇದಲ್ಲದೆ ಅಮೇರಿಕೆಯವರು ಹೊಸ ಹೊಸ ಫಲಗಳನ್ನು ನಿರ್ಮಿಸುವ ಶೋಧದಲ್ಲಿರುವರು. ಫಲಗಳಿಗಿದ್ದ ಸುಂಕಗಳನ್ನು ತೆಗೆಯುವದು, ಹಣ್ಣುಗಳೊಳಗಿನ ದೊಡ್ಡ ಗೊರಟವನ್ನು ಸಣ್ಣದಾಗುವಹಾಗೆ ಮಾಡುವದು, ಹುಳಿ ಇದ್ದ ಹಣ್ಣುಗಳನ್ನು ಸಿಹಿ ಮಾಡುವದು, ಇವೇ ದೊದಲಾದ ಆಲೋಚನೆಗಳಲ್ಲಿ ಅವರು ತೊಡಗಿರುವರು. ಒಮ್ಮೆ ಒಂದು ಫಲೋದ್ಯಾನದಲ್ಲಿ, ಒಂದು ಹೊಸತರದ ಹುಳಗಳಾಗಿ ಲಕ್ಷಾವಧಿ ರೂಪಾಯಿಗಳ ಹಾನಿಯಾಯಿತು. ಈ ಹುಳಗಳನ್ನು ನಾಶಮಾಡುವದಕ್ಕಾಗಿ, ಅನೇಕ ಉಪಾಯಗಳನ್ನು ಮಾಡಿದರೂ ಯಶದೊರೆಯಲಿಲ್ಲ. ಕಡೆಗೆ ಅಮೇರಿಕೆಯ ಸರಕಾರದವರು ಒಳ್ಳೇ ವ್ಯಸನಪಟ್ಟು ಆ ಹುಳಗಳನ್ನು ನಾಶಮಾಡುವ ಉಪಾಯವನ್ನು ಹುಡುಕಿ ತೆಗೆಯುವದಕ್ಕಾಗಿ, ತಮ್ಮಲ್ಲಿಯ ಅನೇಕ ಜಂತುಶಾಸ್ತ್ರಜ್ಞರನ್ನು ಪರದೇಶಕ್ಕೆ ಕಳುಹಿದರು. ಇವರು ಒಳ್ಳೇ ಶ್ರಮಪಟ್ಟು, ಈ ಹುಳಕ್ಕೆ ಘೋರಶತ್ರುವಾದ ಇನ್ನೊಂದು ಹುಳವನ್ನು, ಜಪಾನದಲ್ಲಿ ಕಂಡು ಹಿಡಿದರು. ಈ ಹೊಸಹುಳದ ಸಂತತಿಯನ್ನು, ಅಮೇರಿಕೆಯ ಫಲೋದ್ಯಾನದಲ್ಲಿ ಮೊದಲಿನ ಹುಳದ ಸಮೀಪದಲ್ಲಿರಿಸಲು, ಕ್ರಮಕ್ರಮವಾಗಿ ಜಪಾನೀ ಹುಳುಗಳು ಬೆಳವಣಿಗೆ ಹೊಂದಿ, ಆ ಫಲನಾಶಕ ಹುಳಗಳನ್ನು ಸಮೂಲವಾಗಿ ನಾಶಮಾಡಿದವು. ಇದರ ಮೇಲಿಂದ ಅಮೇರಿಕೆಯವರ ದೃಢನಿಶ್ಚಯವೂ, ಸಾಹಸವೂ, ಚಾತುರ್ಯವೂ, ಒಡೆದು ಕಂಡು ಬರುವಂತಿವೆ. ಒಳ್ಳೇ ಪರಿಶ್ರಮಪಟ್ಟು ಬೀಜವಿಲ್ಲದ ಕಿತ್ತಳೆ ಹಣ್ಣುಗಳನ್ನು ಇವರು ಸಿದ್ಧಪಡಿಸಿರುವರು. ಇವಕ್ಕೆ “ ನೇವಲ ” ಎಂದೆನ್ನುವರು. ತಿನ್ನಲಿಕ್ಕೆ ಇವು ಬಲು ಸವಿಕಟ್ಟಾಗಿರುವವು. ಆರೀಜೋನ ಸಂಸ್ಥಾನದಲ್ಲಿ, ಪ್ರಖರವಾದ ಬಿಸಿಲಿನ ಮೂಲಕ ಮೊದಲು ಅಲ್ಲಿ ಯಾವತರದ ಹಣ್ಣುಗಳೂ ಬೆಳೆಯುತ್ತಿದ್ದಿಲ್ಲ. ಮೇಲಾಗಿ, ಇಲ್ಲಿಯ ನೆಲವೂ ಬಲು ಉಸುಕಿನದಾಗಿತ್ತು. ಹೀಗಿದ್ದರೂ ಅಮೇರಿಕೆಯ ಸರಕಾರದವರು, ಲಕ್ಷಾವಧಿ ರೂಪಾಯಿಗಳನ್ನು ವೆಚ್ಚಮಾಡಿ, “ ರೂಜವ್ಹೆಲ್ಟ ರೀಝುವ್ಹಾರ್ಯರ್ ” ಎಂಬ ಹೆಸರಿನದೊಂದು ಒಡ್ಡುಕಟ್ಟಿ, ಅದರ ಸಹಾಯದಿಂದ ಅಲ್ಲಿಯ ಭೂಮಿಗಳಿಗೆ ನೀರು ಉಣಿಸುವ ಹಾಗೆ ಮಾಡಿದ್ದರಿಂದ, ಆರಿಜೋನದಲ್ಲಿ ದೊಡ್ಡ ಜಾತಿಯ ಕಿತ್ತಳೆ ಹಣ್ಣುಗಳು ವಿಪುಲವಾಗಿ ಬೆಳೆಯಹತ್ತಿವೆ. ಹಿಂದುಸ್ಥಾನದಲ್ಲಿ ನೀರಿನ ಕೊರತೆ ಇಲ್ಲ; ಅನೇಕ ನದನದಿಗಳು, ಹಳ್ಳಕೊಳ್ಳಗಳು, ವಿಪುಲವಾಗಿದ್ದಾಗ್ಯೂ ನಮ್ಮಲ್ಲಿಯ ಜನರು ನೀರಿಗಾಗಿ ಬಲು ಕಷ್ಟಬಡುವರು. ಕಲಾಕೌಶಲ್ಯದ ಜ್ಞಾನವು ಇವರಿಗಿಲ್ಲದ್ದರಿಂದಲೂ, ಸೃಷ್ಟಪದಾರ್ಥಗಳ ಉಪಯೋಗವನ್ನು ಯಥೋಚಿತವಾಗಿ ಮಾಡುವದು ಇವರಿಗೆ ಗೊತ್ತಿಲ್ಲದ್ದರಿಂದಲೂ, ಇವರು ಒಳ್ಳೇ ಕಷ್ಟಕ್ಕೊಳಗಾಗಿರುವರು. ಇದಲ್ಲದೆ ನಮ್ಮ ಜನರಿಗೆ ತಾವಾಗಿಯೇ ಸ್ವತಃ ಸಿದ್ಧವಾಗಿ ಯಾವದೊಂದು ಕೆಲಸವನ್ನು ಮಾಡುವದೇ ಬೇಡ; ಪರಾವಲಂಬಿಗಳಾಗಿರುವದೇ ಇವರಿಗೆ ಮೆಚ್ಚುತ್ತದೆ.



ಹಣ್ಣಿನ ಕೆಲಸವಲ್ಲದೆ, ಅಮೇರಿಕೆಯಲ್ಲಿ ವಿದ್ಯಾರ್ಥಿಗಳು ಮಾಡುವ ಕೆಲಸಗಳು ಇನ್ನೂ ಅನೇಕವಾಗಿರುವವು. ಯಾವದಾದರೊಂದು ಕಲೆಯ ಜ್ಞಾನವಿದ್ದ ಪಿದ್ಯಾರ್ಥಿಗೆ, ಅಮೇರಿಕೆಯಲ್ಲಿ ಧನಸಂಪಾದಿಸುವದು ಸುಲಭವದೆ. ಉದಾಹರಣಾರ್ಥವಾಗಿ ವಸ್ತ್ರಗಳನ್ನು ಹೊಲಿಯುವದು, ಗಡಿಯಾರಗಳನ್ನು ದುರಸ್ತು ಮಾಡುವದು, ಜೋಡು ಹೊಲಿಯುವದು, ಬಡಗಿತನ ಮಾಡುವದು, ಲೆಖ್ಖಪತ್ರಗಳನ್ನಿಡುವದು, ಇವೇ ಮೊದಲಾದ ಅನೇಕ ವ್ಯವಸಾಯಗಳನ್ನು ವಿದ್ಯಾರ್ಥಿಗಳು ಕಲಿಯುವರು. ಈ ಕೆಲಸವನ್ನು ಮೂರು ನಾಲ್ಕು ತಾಸು ಮಾಡಿ, ವಿದ್ಯಾರ್ಥಿಗಳು ತಮ್ಮ ವೆಚ್ಚದ ಪೂರ್ತೆ ಹಣ ದೊರಕಿಸುವರು. ನಮ್ಮ ದೇಶದಲ್ಲಿ, ಎರಡು ಜನರು ಭೆಟ್ಟಿಯಾದ ಕೂಡಲೆ “ ನಿಮ್ಮ ಜಾತಿಯಾವದು ” ಎಂಬ ಪ್ರಶ್ನೆ ಮೊದಲು ಕಟ್ಟಿಟ್ಟದ್ದೇ; ಇದಕ್ಕೆ ಬದಲಾಗಿ ಅಮೇರಿಕೆಯಲ್ಲಿ “ ತಮ್ಮ ವ್ಯವಸಾಯವಾವುದು ” ಎಂಬ ಪಶ್ನೆ ಕೇಳಲ್ಪಡುತ್ತದೆ. ಅಲ್ಲಿಯ ಜನರೆಲ್ಲರೂ ಒಂದಿಲೊಂದು ತರದ ಹಸ್ತಕೌಶಲ್ಯವನ್ನು ಕಲಿತು, ಸ್ವತಂತ್ರವಾಗಿ ತಮ್ಮ ಉದರ ನಿರ್ವಾಹವನ್ನು ನಡಿಸುವರಲ್ಲದೆ, ಸುಸಂಸ್ಕೃತರಾಗುವದಕ್ಕಾಗಿ ವಾಙ್ಮಯದ ಅಭ್ಯಾಸವನ್ನು ಮಾಡುವರು. ನೌಕರಿಮಾಡುವದಕ್ಕಾಗಿ ನಾವು ಶಾಲೆಯಲ್ಲಿ ಶಿಕ್ಷಣ ಪಡೆಯತಕ್ಕದ್ದಲ್ಲ. ಓದುಬರಹವು ಪ್ರತಿಯೊಬ್ಬನಿಗೆ ಬರಲೇಬೇಕು; ಆದರೆ ಓದುಬರಹ ಬಂದಷ್ಟಕ್ಕೆ ಮಾತ್ರ ಶಿಕ್ಷಣ ಮುಗಿಯಲಿಲ್ಲ. ಶಿಕ್ಷಣದ ನಿಜವಾದ ಮರ್ಮವನ್ನು ನಾವು ಅರಿಯದ್ದರಿಂದಲೇ ನಮ್ಮ ಅವನತಿಯಾಗಿದೆ.

---

## ೬ನೇ ಪ್ರವೇಶ.

## ವಿದ್ಯಾರ್ಥಿಗಳ ಪರ್ಯಟನ.

ಅಮೇರಿಕೆಯೊಳಗಿನ ವಿದ್ಯಾರ್ಥಿಗಳ ವಿಷಯವಾಗಿ, ಇನ್ನೂ ಕೆಲವು ಆಶ್ಚರ್ಯಕರವಾದ ಸಂಗತಿಗಳನ್ನು ಪ್ರಸ್ತುತ ಪ್ರಕರಣದಲ್ಲಿ ವಿವರಿಸುವೆವು. ಹೈಸ್ಕೂಲ ಇಲ್ಲವೆ ಕಾಲೇಜದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಬಳಿಕ, ಬೇಸಿಗೆಯಲ್ಲಿ ಪ್ರತಿವರ್ಷ ಸಾವಿರಾರು ವಿದ್ಯಾರ್ಥಿಗಳು, ಅಮೇರಿಕೆಯಿಂದ ಯುರೋಪಕ್ಕೆ ಪ್ರವಾಸಕ್ಕೆ ಹೊರಡುವರು. ಇವರ ಹತ್ತರ ದ್ರವ್ಯವು ತೀರ ಸ್ವಲ್ಪವಿರುವದರಿಂದ ನ್ಯೂಯಾರ್ಕದಿಂದ ಮ್ಯಾಂಚೆಸ್ಟರಕ್ಕೆ ಹೋಗುವ ಉಗಿಹಡಗದ ಮೇಲೆ, ಇವರು ನವಕರಿ ದೊರಕಿಸುವರು. ಸಂಗಡ ಬಾಯಿಸಿಕಲ್ ಸಹ ತೆಗೆದುಕೊಳ್ಳುವರು. ಇಂಗ್ಲಂಡದೊಳಗಿನ ರಾಜಮಾರ್ಗಗಳು ಸುಂದರವಾಗಿರುವದರಿಂದ, ಅಲ್ಲಿ ಬಾಯ್ಸಿಕಲ್ಲಿನ ಉಪಯೋಗವು ಚನ್ನಾಗಿ ಆಗಿ, ಪ್ರವಾಸದಿಂದ ಅವರಿಗೆ ಒಳ್ಳೇ ಸುಖವಾಗುವದು. ಇಂಗ್ಲಂಡ, ಸ್ಕಾಟಲಂಡಗಳಲ್ಲಿ ಸಂಚರಿಸಿ, ಯುರೋಪದ ಇತರ ಭಾಗಗಳಲ್ಲಿಯೂ ಬಾಯ್ಸಿಕಲ್ ಸಹಾಯದಿಂದ ಭ್ರಮಣ ಮಾಡುವರು; ಅಮೇರಿಕೆಯ ಮಾನದಿಂದ, ಯುರೋಪದಲ್ಲಿ ಖರ್ಚು

Digitized by ROJA MUTHIAH RESEARCH LIBRARY

ತೀರ ಕಡಿಮೆಯಾದುದರಿಂದ, ಅಲ್ಪದ್ರವ್ಯದಲ್ಲಿ ಪ್ರವಾಸ ಮಾಡುವದು ವಿದ್ಯಾರ್ಥಿಗಳಿಗೆ ಸುಲಭವಾಗಿ ನೆರವೇರುತ್ತದೆ. ಈ ರೀತಿ ಮೂರು ನಾಲ್ಕು ತಿಂಗಳು ಯುರೋಪದಲ್ಲಿ ಸಂಚರಿಸಿ, ಮರಳಿ ಸ್ವದೇಶಕ್ಕೆ ಬಂದು, ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಲ್ಲಿ ಪ್ರವೇಶಿಸಿ, ವಿದ್ಯಾಭ್ಯಾಸವನ್ನು ಮುಂದೆ ಸಾಗಿಸುವರು. ಈ ರೀತಿ ನಾನಾ ತರದ ಅನುಭವವನ್ನು ದೊರಕಿಸಿ, ಅಮೇರಿಕೆಯ ವಿದ್ಯಾರ್ಥಿಗಳು ಕೇವಲ ಪುಸ್ತಕದೊಳಗಿನ ಶಿಕ್ಷಣ ಹೊಂದದೆ, ಸಂಸಾರದಲ್ಲಿ ಅವಶ್ಯಕವಾಗಿರುವ ಎಲ್ಲ ತರದ ವ್ಯಾವಹಾರಿಕ ಶಿಕ್ಷಣವನ್ನು ದೊರಕಿಸುವರು.

ಇದಕ್ಕೆ ವಿಪರಿತವಾಗಿ, ನಮ್ಮಲ್ಲಿಯ ವಿದ್ಯಾರ್ಥಿಗಳಿಗೆ ನಮ್ಮ ದೇಶದ ಪರಿಸ್ಥಿತಿಯ ಜ್ಞಾನವು ಇರುವದೇ ಇಲ್ಲ. ಇವರು ಕೇವಲ ಓದುಗುಳಿಯಾಗಿರುವರು; ಬಾಹ್ಯ ಜಗತ್ತಿನ ಅನುಭವವೇ ಇವರಿಗಿರುವದಿಲ್ಲ.

ಅಮೇರಿಕೆಯೊಳಗಿನ ಅನೇಕ ವಿದ್ಯಾರ್ಥಿಗಳು ಹೈಸ್ಕೂಲಿನೊಳಗಿನ ಪರೀಕ್ಷೆ ಪಾಸಾದ ಬಳಿಕ ಪೃಥ್ವೀಪ್ರದಕ್ಷಿಣೆಗಾಗಿ ಹೊರಬಿದ್ದು, ಒಂದು ವರ್ಷದವರೆಗೆ ಮಹತ್ವದ ಜ್ಞಾನಾನುಭವಗಳನ್ನು ದೊರಕಿಸಿ, ತಿರುಗಿ ಕಾಲೇಜಿನಲ್ಲಿ ಪ್ರವೇಶಿಸುವರು; ಉಭಯ ದೇಶಗಳೊಳಗಿನ ವಿದ್ಯಾರ್ಥಿಗಳೊಳಗಿನ ಈ ಮಹದಂತರವು ವಿಚಾರಿಸತಕ್ಕದ್ದಾಗಿದೆ.

ನ್ಯೂಯಾರ್ಕದಿಂದ ಮ್ಯಾಂಚೆಸ್ಟರ, ಇಲ್ಲವೆ ಲಿವ್ಹರ್ಪೂಲದ ವರೆಗೆ ಉಗಿಹಡಗದ ಮೇಲೆ ವಿದ್ಯಾರ್ಥಿಗಳು, ಯಾವ ತರದ ಕೆಲಸ ಮಾಡಬೇಕಾಗುತ್ತದೆಂಬದನ್ನು ಇಲ್ಲಿ ಹೇಳಿದರೆ, ಅಪ್ರಾಸಂಗಿಕವಾಗದು. ಅಮೇರಿಕೆಯಿಂದ ಇಂಗ್ಲಂಡಕ್ಕೆ ಹೋಗುವಾಗ್ಯೆ, ನನಗೂ ಹಡಗದ ಮೇಲೆ ದುಡಿಯಬೇಕಾಯಿತು. ಎತ್ತುಗಳಿಗೆ ಮೇವು ಹಾಕುವದೇ ನನ್ನ ಕೆಲಸವಾಗಿತ್ತು. ಪ್ರತಿತಿಂಗಳಿಗೆ ಅಮೇರಿಕೆಯಿಂದ ಇಂಗ್ಲಂಡಕ್ಕೆ ಅಸಂಖ್ಯ ಎತ್ತುಗಳನ್ನು ಕಳುಹಿಸುವರು. ಇವುಗಳನ್ನು ಕಾಯಲಿಕ್ಕೆ ಮನುಷ್ಯರು ಬೇಕು. ಬೆಳಿಗ್ಗೆ ಒಳ್ಳೇ ನಸುಕಿನಲ್ಲಿ ಅಂದರೆ, ಮೂರುವರೆ ಗಂಟೆಗೆ ಎದ್ದು, ನಾನೂ ನನ್ನ ಇತರ ಜೊತೆಗಾರರೂ, ಮೊದಲು ಎತ್ತುಗಳಿಗೆ ನೀರು ಕುಡಿಸಿ, ಅವುಗಳಿಗೆ ಹುಲ್ಲು ಹಾಕುವೆವು; ಹತ್ತುಗಂಟೆಯ ಸಮಯಕ್ಕೆ ನಾವಿಕರೆಲ್ಲರೂ ಹುಲ್ಲು ಹೊರೆಗಳನ್ನು ಕೆಳಗಿನಿಂದ ಮೇಲೆ ತಂದು ಎತ್ತುಗಳಿಗೆ ಗೋವಿನ ಜೋಳವನ್ನು ಹಾಕುವರು. ಮಧ್ಯಾಹ್ನದ ಮೂರು ಗಂಟೆಯ ಸಮಯಕ್ಕೆ ಎತ್ತಿನ ಕಾಲೊಳಗಿನ ಕಸಹೊಡೆದು, ಸ್ವಚ್ಛಪಡಿಸಿ, ಎತ್ತುಗಳಿಗೆ ತೌಡು ಇಡುವೆವು. ಇದರಂತೆ ದಿನಾಲು ನನಗೆ ಏಳೆಂಟು ತಾಸು ಕೆಲಸ ಮಾಡಬೇಕಾಗುತ್ತಿತ್ತು. ಇದರ ಬದಲಾಗಿ, ಹಡಗದ ಯಜಮಾನನು ನನ್ನ ಬಾಡಿಗೆಯನ್ನು ಮಾಫು ಮಾಡಿದ್ದಲ್ಲದೆ, ಊಟಕ್ಕೂ ಪುಕ್ಕಟೆಯಾಗಿ ಹಾಕುತ್ತಿದ್ದನು. ಇದೇ ರೀತಿ ಅಮೇರಿಕೆಯ ವಿದ್ಯಾರ್ಥಿಗಳು ದುಡಿದು ಅಟ್ಲಾಂಟಿಕ ಮಹಾಸಾಗರವನ್ನು ಪಾರುಗಾಣುವರು.

---



## ೭ನೇ ಪ್ರವೇಶ.

## ಸ್ವಾವಲಂಬಿಗಳಾದ ವಿದ್ಯಾರ್ಥಿಗಳು.

ಅಮೇರಿಕೆಯ ಜನರು, ಕೂಲಿಕಾರರು ಕೀಳೆಂದು ಎಣಿಸದೆ, ಯಜಮಾನನನ್ನೂ ಕೂಲಿಯುವನನ್ನೂ ಸರಿಯಾಗಿಯೇ ಲೆಕ್ಕಿಸುವರೆಂದು ಈ ಮೊದಲೇ ಹೇಳಿರುತ್ತೇವಷ್ಟೇ. ನಾನು ದುಡಿಯುವ ಹೊಲದಲ್ಲಿ, ಯಜಮಾನನೂ ಕೂಲಿಕಾರರಾದ ನಾವೂ, ಒಂದೇ ಓಳಿಯಲ್ಲಿ ಖುರ್ಚಿಗಳ ಮೇಲೆ ಕುಳಿತು ಊಟ ಮಾಡುತ್ತಿದ್ದೆವು. ನಮ್ಮಲ್ಲಿ ಯಾವ ಭೇದಭಾವವೂ ಎಣಿಸಲ್ಪಡುತ್ತಿರಲಿಲ್ಲ. ಈ ಕಾರಣದ ಮೂಲಕವಾಗಿ, ಪ್ರತಿಯೊಬ್ಬನಿಗೆ ಕೂಲಿ ಮಾಡುವದಕ್ಕಾಗಲಿ ಇತರ ಕೆಲಸ ಮಾಡುವದಕ್ಕಾಗಲಿ, ಅಮೇರಿಕೆಯಲ್ಲಿ ಹುರುಪು ಬರುತ್ತದೆ. ಸ್ವಾವಲಂಬಿಯಾಗಿ ವಿದ್ಯೆಕಲಿಯುವವರಿಗೆ, ಆ ದೇಶದಲ್ಲಿ ಮರ್ಯಾದೆ ಬಹಳ ಸಿಗುವದಲ್ಲದೆ, ಹೋದ ಹೋದಲ್ಲೆಲ್ಲ ಅವರನ್ನು ಗೌರವಿಸುವರು. ಇಂಥ ವಿದ್ಯಾರ್ಥಿಗಳು, ಬಹಳ ಒಳ್ಳೆಯವರೆಂದು ವಿಶ್ವವಿದ್ಯಾಲಯಗಳೊಳಗಿನ ಅಧ್ಯಾಪಕರು ತಿಳುಕೊಂಡು, ಶಕ್ತ್ಯನುಸಾರವಾಗಿ ಅವರಿಗೆ ಉತ್ತೇಜನವನ್ನೂ ಸಹಾಯವನ್ನೂ ಕೊಡುವರು. ಕೆಲವು ಕೋಟ್ಯಧೀಶರ ಹುಡುಗರು, ತಮ್ಮ ತಾಯಿತಂದೆಗಳಿಂದ ವೆಚ್ಚಕ್ಕೆ ಏನೊಂದು ತೆಗೆದುಕೊಳ್ಳದೆ, ಸ್ವಂತ ಬಾಹುಬಲದಿಂದ ಧನ ದೊರಕಿಸಿ ವಿದ್ಯಾಭ್ಯಾಸ ಮಾಡುವರು. ಇಂಥವರಿಗೆ ಎಲ್ಲ ಕಡೆಗೂ ಬಹುಮಾನ ದೊರಕುವದು. ಗಿರಣಿಯವರೂ ಖಣಿಗಳ ಯಜಮಾನರೂ, ಎಲ್ಲಕ್ಕೂ ಮೊದಲು ಸ್ವಾವಲಂಬಿಗಳಾದ ವಿದ್ಯಾರ್ಥಿಗಳಿಗೆ ಕೆಲಸ ಕೊಡುವರು. ವಿಶ್ವವಿದ್ಯಾಲಯಗಳೊಳಗಿನ ವಿದ್ಯಾರ್ಥಿಗಳೂ, ಪರಸ್ಪರರಿಗೆ ಸಹಾಯ ಮಾಡುವದಲ್ಲದೆ, ಬಡವಿದ್ಯಾರ್ಥಿಗಳ ಕೂಡ ಒಳ್ಳೇ ಪ್ರೀತಿಯಿಂದ ನಡಕೊಳ್ಳುವರು.

ಅಮೇರಿಕೆಯಲ್ಲಿ ಹಿಂದೀ ವಿದ್ಯಾರ್ಥಿಗಳು ತೀರ ಕಡಿಮೆಯಾಗಿದ್ದರೂ ಅವರಿಗೆ ದುಡಿಯುವದೂ ಕೂಲಿಮಾಡುವದೂ ಗೊತ್ತಿಲ್ಲಾದ್ದರಿಂದ, ಅವರಿಗೆ ಅನೇಕ ಕಷ್ಟಗಳನ್ನು ಸಹಿಸಬೇಕಾಗುತ್ತದೆ. ಈ ರೀತಿ ಇಬ್ಬರು ವಿದ್ಯಾರ್ಥಿಗಳು, ನ್ಯೂಯಾರ್ಕದಲ್ಲಿ ಹೊಟ್ಟೆಗಿಲ್ಲದೆ ಮರಣಪಟ್ಟರು. ಹಿಂದುಸ್ಥಾನದಿಂದ ಇವರು ಹೊಸದಾಗಿಯೇ ಬಂದಿದ್ದು ಆಗ್ಗೆ ಚಳಿಗಾಲವಿತ್ತು; ದುಡಿಯುವದು ಇವರ ಕೈಯಿಂದಾಗಲೊಲ್ಲದು. ಬಳಿಯಲ್ಲಿದ್ದ ಹಣವೆಲ್ಲ ತೀರಿ ಹೋದಬಳಿಕ ನೌಕರಿಯನ್ನು ದೊರಕಿಸುವ ಯತ್ನಮಾಡದೆ, ಕೋಣೆಯಲ್ಲಿ ಬಾಗಿಲ ಹಾಕಿಕೊಂಡು ಇವರು ಆತ್ಮಹತ್ಯ ಮಾಡಿಕೊಂಡರು. ಹಿಂದುಸ್ಥಾನದಲ್ಲಿ ಅನೇಕ ಜನರು ಭಿಕ್ಷಾವೃತ್ತಿಯಿಂದ ಉಪಜೀವಿಸುವರು. ಆದರೆ ಅಮೇರಿಕೆಯಲ್ಲಿ ಭಿಕ್ಷೆಬೇಡುವದು, ಕಾಯದೆಯ ದೃಷ್ಟಿಯಿಂದ ಗುನ್ಹೆಯಾಗುವದು. ಬಿಕ್ಕೆ ಬೇಡುವವರನ್ನು ಅಲ್ಲಿ ಸೆರೆಮನೆಗೆ ಕಳುಹಿಸುವರು. ನಾನು ಆರೀಗಾನ ವಿಶ್ವವಿದ್ಯಾಲಯದಲ್ಲಿ ಕಲಿ



Digitized by ROJA MUTHIAH RESEARCH LIBRARY

ಯುವಾಗ ದಿನಗೂಲಿಯು ಬಹಳ ಕಡಿಮೆ ಇತ್ತು. ಟರ್ಮು ಮುಗಿದ ಕೂಡಲೆ, ನೌಕರಿಯ ಶೋಧವನ್ನು ನಡಿಸಿದೆನು. ಕಾಲೇಜದ ಪ್ರೆಸಿಡೆಂಟರ ಪತ್ರವನ್ನು ದೊರಕಿಸಿ, ಒಳ್ಳೇ ಕಷ್ಟದಿಂದ ಯೂಜಿನ ಗ್ರಾಮದಿಂದ ಸ್ವಲ್ಪ ಅಂತರದ ಮೇಲಿದ್ದ "ವೆಂಡಲಿಗ್" ಎಂಬ ಹೆಸರಿನದೊಂದು ಕಸಬೆಯಲ್ಲಿ "ಬೂಥಶೈಲೆ" ಕಂಪನಿಯ ಗಿರಣಿಯಲ್ಲಿ, ನೌಕರಿ ದೊರಕಿಸಿದೆನು. ಪಾವಲಿ ಕಡಿಮೆ ಆರು ರೂಪಾಯಿ ಕೂಲಿ ನನಗೆ ದಿನಾಲು ಸಿಗುತ್ತಿತ್ತು. ನಾನು ಹಿಂದುಸ್ಥಾನದವನೆಂದು ಅಲ್ಲಿಯ ಕೂಲಿಕಾರರಿಗೆ ಮೊದಲು ತಿಳಿಯಲಿಲ್ಲ. ನಾನು ಫ್ರಾನ್ಸದವನೆಂದು ಅವರು ತಿಳಿದಿದ್ದರು. ಒಂದು ದಿನ ಒಬ್ಬ ಮುದುಕ ಕೂಲಿಕಾರನು ನನ್ನ ಕಡೆಗೆ ಬಂದು, ತನ್ನ ಚರ್ಚಿನಲ್ಲಿ ನಾನೊಂದು ಉಪನ್ಯಾಸವನ್ನು ಕೊಡಬೇಕೆಂದು ಹೇಳಿಕೊಂಡ ಮೇರೆಗೆ "ಭಾರತ ವರ್ಷದ ಸಾಂಪ್ರತದ ಸ್ಥಿತಿ" ಎಂಬ ವಿಷಯದ ಮೇಲೆ ವ್ಯಾಖ್ಯಾನ ಕೊಡಲೊಪ್ಪಿದೆನು. ನಿಯಮಿಸಿದ ಕಾಲಕ್ಕೆ ದೇವಾಲಯದಲ್ಲಿ ಹೋಗಿ, ಅಲ್ಲಿ ನೆರೆದ ಅಸಂಖ್ಯ ಜನರೆದುರಿಗೆ ಹಿಂದುಸ್ಥಾನದ ಸಾಂಪ್ರತದ ಸ್ಥಿತಿಯನ್ನು ಕುರಿತು ವಿವರಿಸಲು, ಎಲ್ಲರೂ ಸಂತುಷ್ಟರಾಗಿ ನನಗೆ ಸಹಾನುಭೂತಿಯನ್ನು ತೋರಿಸಿದರು. ವ್ಯಾಖ್ಯಾನಕೊಟ್ಟು ಮನೆಗೆ ತಿರುಗಿ ಬರಲು, ಕೋಣೆಯ ಬಾಗಿಲು ತೆರೆದಿಟ್ಟದ್ದು ಕಂಡು ಬಂತು. ಆ ಕಾಲಕ್ಕೆ ಅದರ ವಿಷಯಕ್ಕೆ ನನಗೇನೂ ಅನಿಸಲಿಲ್ಲ. ಗಡಿಬಿಡಿಯಿಂದ ಹೋಗುವಾಗ ಮರೆತು, ಬಾಗಿಲು ಹಾಕುವದನ್ನು ಬಿಟ್ಟು ಹೋಗಿರಬಹುದೆಂದು ತಿಳುಕೊಂಡೆನು. ಮೇಲಾಗಿ ಕಳವಾಗಿ ಹೋಗುವಂಥ ಯಾವ ಪದಾರ್ಥವೂ ನನ್ನಲ್ಲಿದ್ದಿಲ್ಲ. ಆದುದರಿಂದ ಆ ರಾತ್ರಿ ನಾನು ಸ್ವಸ್ಥವಾಗಿ ಮಲಗಿಕೊಂಡು ಬೆಳಿಗ್ಗೆ ನಸುಕಿನಲ್ಲಿ ಎದ್ದು ಅಡಿಗೆ ಮಾಡುವ ಉದ್ಯೋಗಕ್ಕೆ ಹತ್ತಲು ಒಲೆ ಬೇಗ ಹೊತ್ತಲೊಲ್ಲದು, ಹೊಗೆಯೇ ಹೋಗಲೊಲ್ಲದು; ಇದರ ಕಾರಣವೇನೂ ತಿಳಿಯದಂತಾದ್ದರಿಂದ ನಾನು ಒಳ್ಳೇ ಗೊಂದಲದಲ್ಲಿ ಬಿದ್ದು ಊಟದ ವಿಚಾರವನ್ನು ಬಿಟ್ಟು, ಹಾಗೆಯೇ ಉಪವಾಸ, ಗಿರಣಿಯಲ್ಲಿ ಕೆಲಸ ಮಾಡುವದಕ್ಕೆ ಹೊರಟು ಹೋದೆನು. ಅಲ್ಲಿ ಏಳರಿಂದ ಹನ್ನೆರಡು ಘಂಟೆಯವರೆಗೆ ದುಡಿದು, ಮನೆಗೆ ತಿರುಗಿ ಬಂದು ಒಲೆಯನ್ನು ಜಾಗ್ರತೆಯಾಗಿ ನಿರೀಕ್ಷಿಸಲು ಹೊಗೆ ಹೋಗುವ ಬಂಬಿನಲ್ಲಿ ಯಾರೋ ಅರಿವೆಯ ಚೂರುಗಳನ್ನು ಒತ್ತಿ ತುರುಕಿದ್ದು ಕಂಡು ಬಂತು. ಆ ಚೂರುಗಳನ್ನೆಲ್ಲ ತೆಗೆದೊಗೆದು, ರೊಟ್ಟಿಯನ್ನು ಬೇಯಿಸಿ ತಿಂದು ಈ ರೀತಿ ನನ್ನ ಕುಚೇಷ್ಟೆ ಮಾಡಿದ್ದಕ್ಕೆ ನಾನು ಸಿಟ್ಟಿಗೆದ್ದು, ಅದು ಯಾರ ಕೆಲಸವಾಗಿರಬಹುದೆಂದು ಆಲೋಚಿಸ ತೊಡಗಿದೆನು. ಆಗ್ಗೆ, ವ್ಯಾಖ್ಯಾನದ ಮುನ್ನಾ ದಿವಸ ನನ್ನ ಕೋಣೆಯಲ್ಲಿ ಬಂದಿದ್ದ, ಒಬ್ಬ ಕೂಲಿಕಾರನ ವಿಷಯಕ್ಕೆ ನನಗೆ ಸಂಶಯ ಬಂತು. ಮಧ್ಯಾಹ್ನದ ಒಂದು ಘಂಟೆಯ ಸಮಯಕ್ಕೆ, ತಿರುಗಿ ಕೆಲಸಕ್ಕೆ ಹೋದಾಗ್ಗೆ ಆ ಕೂಲಿಕಾರನನ್ನು ಕುರಿತು "ನೀನು ಇಂಥ ನಿಂದ್ಯ ಕೆಲಸವನ್ನು ಮಾಡತಕ್ಕದ್ದಿದ್ದಿಲ್ಲ" ವೆಂದು ಸೌಮ್ಯ ಸ್ವರದಿಂದ ನುಡಿದೆನು.

"ಯಾವ ಕೆಲಸ"ವೆಂದು ಆತನು ಕೇಳಲು



ಅದಕ್ಕೆ ನಾನು "ಇನ್ನು ನೀನು ಬಚ್ಚಿಟ್ಟು ಪ್ರಯೋಜನವೇನು? ಹೊಗೆ ಹೋಗುವ ಬಂಬಿನಲ್ಲಿ ಅರಿವೆಯ ಚೂರುಗಳನ್ನು ತುರುಕಿಟ್ಟವನು ನೀನಲ್ಲವೇ" ಎಂದು ನುಡಿದೆನು.

"ಅಲ್ಲ, ನಾನು ಆ ಕೆಲಸವನ್ನು ಮಾಡಿಲ್ಲ"ವೆಂದು ಆತನು ಸಿಟ್ಟಿನಿಂದ ಉತ್ತರ ಕೊಡಲು "ಒಳ್ಳೇದು ಏನೂ ಅಡ್ಡಿ ಇಲ್ಲ"ವೆಂದು ನುಡಿದು ನಾನು ಸ್ವಸ್ಥವಾಗಿ ನನ್ನ ಕೆಲಸಕ್ಕೆ ತಾಗಿದೆನು. ಇದರಿಂದ ಆ ಕೂಲಿಕಾರನು ಮುನಿದುಕೊಂಡು ತನ್ನ ಸ್ನೇಹಿತನೊಬ್ಬನನ್ನು ನಾನಿದ್ದಲ್ಲಿಗೆ ಕಳುಹಿಸಿ ಜಡತರ ಹೆದರಿಕೆ ತೋರಿಸಿದ್ದನು. ಎಷ್ಟೋ ಸೊಕ್ಕಿನ ಕೂಲಿಕಾರರಿಗೆ ನಾನು ಚನ್ನಾಗಿ ಕೈತೋರಿಸಿದ್ದರಿಂದ ಇಂಥ ಬೆದರಿಕೆಗೆ ಸೊಪ್ಪು ಹಾಕದೆ ಆ ಸ್ನೇಹಿತನನ್ನು ಕುರಿತು "ನನ್ನ ಗೊಡವೆಗೆ ಬಂದರೆ ಸಾಯುವವರೆಗೆ ನೆನಪಿರುವಂತೆ ಏಟು ಕೊಡುವೆನೆಂದು ಆ ನಿನ್ನ ಪುಕ್ಕನಿಗೆ ಹೋಗಿ ಹೇಳು" ಎಂದು ಹೇಳಿ ಕಳುಹಲು ಆ ಹೇಡಿಯು ನನ್ನ ವಿರುದ್ಧವಾಗಿ ಒಳಸಂಚು ನಡಿಸಿದನು. ನಾನೊಬ್ಬ ಅನಾಥ ಹಿಂದವಾಸಿ ಎಂಬುವದು ಅವರಿಗೆ ಗೊತ್ತಾದ್ದರಿಂದ ನಾನು ಹೆದರಿ ಅವರಿಗೆ ಶರಣು ಹೋಗುವೆನೆಂದು ಆ ಸಂಚಿನವರು ತಿಳಕೊಂಡಿದ್ದರು. ಆದರೆ ಚಿಕ್ಕಂದಿನಿಂದ ನಾನು ಕುಸ್ತಿಯಾಡಿದವನಾದ್ದರಿಂದ ನನಗಿಂತಲೂ ಇಮ್ಮಡಿಯಾದ ಪ್ರತಿಸ್ಪರ್ಧಿಯನ್ನು ಲೆಕ್ಕಿಸಲಿಕ್ಕಿಲ್ಲವೆಂದು ನನಗೆ ನಂಬಿಗೆ ಇತ್ತು. ಹೀಗಿದ್ದು ಆ ಕೂಲಿಕಾರನು ತನ್ನ ಸ್ನೇಹಿತರೊಡನೆ ಆಪ್ತಾಲೋಚನೆ ಮಾಡಿ ನನಗೆ ಲತ್ತೆಹಾಕುವ ಯೋಚನೆಮಾಡಿದನು. ಅವರೆಲ್ಲರೂ ಒಂದೇ ಊರಿನವರು; ಪ್ಯಾಸಿಫಿಕ ಮಹಾಸಾಗರದ ದಂಡೆಯ ಮೇಲಿನ ಪ್ರದೇಶದ ವಾತಾವರಣವು ಹಿಂದೀ ಜನರ ವಿರುದ್ಧವಾಗಿ ಕ್ಷುಬ್ಧವಾಗಿತ್ತು; ಅದರ ಪರಿಣಾಮವು ಈ ಜನರ ಮೇಲೂ ಆಗಿತ್ತು. ನಾನು ಹಿಂದುಸ್ಥಾನದವನೆಂಬುವದು ಅವರಿಗೆ ಗೊತ್ತಾಗುವವರೆಗೆ ನನ್ನ ಕೂಡ ಅವರು ಮಿತ್ರತ್ವದಿಂದ ನಡೆಯುತ್ತಿದ್ದರು; ಆದರೆ ನಾನು ಹಿಂದುಸ್ಥಾನದವನೆಂಬುವದು ಅವರಿಗೆ ತಿಳಿದ ಕೂಡಲೆ ಅವರು ನನ್ನನ್ನು ತಿರಸ್ಕರಿಸಹತ್ತಿದ್ದಲ್ಲದೆ, ನನ್ನನ್ನು ಹೊಡೆದೋಡಿಸಬೇಕೆಂದು ನಿಶ್ಚಯಿಸಿದರು.

ಒಂದುದಿನ ಗಿರಣಿಯಲ್ಲಿ ಮಧ್ಯಾಹ್ನದ ಊಟದ ಸೂಟಿಯು ಸಿಗಲು, ಕೂಲಿಕಾರರೆಲ್ಲ ಊಟಕ್ಕೆ ಹೊರಟು ಹೋದರು. ಆಗ್ಗೆ ನಾನು ಹ್ಯಾಮಿಲ್ಟನ್ ಎಂಬ ನನ್ನ ಮಿತ್ರನನ್ನು ಕರಕೊಂಡು ನನ್ನ ಬಿಡಾರಕ್ಕೆ ಹೋದೆನು. ಈತನು ಹದಿನೇಳು ವರ್ಷದ ಧೃಷ್ಟಪುಷ್ಟ ಯುವಕನಿದ್ದು ನನ್ನಲ್ಲಿ ಆತನಿಗೆ ಪರಮ ವಿಶ್ವಾಸವಿತ್ತು. ಒಂದುವೇಳೆ ಕೈಗೆ ಕೈ ಹತ್ತಿದರೆ, ನಾನು ಉಪಯೋಗಿಸುತ್ತಿದ್ದ ಕನ್ನಡಕಗಳಿಗೂ ಅವುಗಳಿಂದ ನನಗೂ ಅಪಾಯವಾಗಬಾರದೆಂದು ಅವುಗಳನ್ನು ತೆಗೆದು ಹ್ಯಾಮಿಲ್ಟನ್ನನ ಕಡೆಗೆ ಕೊಡಬೇಕೆಂದು ಮಾಡಿದ್ದೆನು. ಆದರೆ ಆ ದಿನ ಆ ಕೂಲಿಕಾರರು ನನ್ನ ಗೊಡವೆಗೆ ಬರಲಿಲ್ಲ. ಸಾಯಂಕಾಲದ ೬ ಘಂಟೆಯಾಗಿ ಗಿರಣಿಯು ಬಿಟ್ಟ ಬಳಿಕ ನಾನು ನನ್ನ ಟಪಾಲು ತರುವದಕ್ಕಾಗಿ

Digitized by ROJA MUTHIAH RESEARCH LIBRARY

ಪೋಷ್ಟ ಆಫೀಸಿಗೆ ಹೋದಾಗ ಸಂಚಿನೊಳಗಿನ ಒಬ್ಬ ಕೂಲಿಕಾರನು “ಈಹೊತ್ತು ನಾವು ಬರುವೆವು; ಸಿದ್ಧನಾಗಿರು” ಎಂದು ಬಜಾಯಿಸಲು, “ಒಳ್ಳೇದು, ಅವಶ್ಯ ಬರ್ರಿ” ಎಂದು ಹೇಳಿದೆನು.

ತಿರುಗಿ ಬರುವಾಗ ಮಿಸ್ಟರ ಜೇಕಬ್ ಎಂಬ ನನ್ನ ಒಬ್ಬ ಮುದುಕ ಕೂಲಿಕಾರ ಸ್ನೇಹಿತನ ಮನೆಗೆ ಹೋದೆನು; ಆದರೆ ಆತನು ಮನೆಯಲ್ಲಿಲ್ಲಾದ್ದರಿಂದ ಬಂದ ಕೂಡಲೆ ಆತನನ್ನು ನನ್ನಲ್ಲಿಗೆ ಕಳುಹಿಸಬೇಕಾಗಿ ಮನೆಯ ಯಜಮಾನತಿಗೆ ಹೇಳಿ, ನನ್ನ ಕೋಣೆಗೆ ಬಂದು ರೊಟ್ಟಿಯನ್ನು ಬೇಯಿಸುವಷ್ಟರಲ್ಲಿಯೇ ಜೆಕಬ್ಬನು ಬಂದನು. ಆತನಿಗೆ ಯೋಗ್ಯ ಸತ್ಕಾರ ಮಾಡಿ ಕುಳ್ಳಿರಿಸಿ, ನಾನು ರೊಟ್ಟಿಯನ್ನು ಆತನ ಕೂಡ ಮಾತಾಡುತ್ತ ತಿನ್ನುತ್ತಿರಲು, ನನ್ನ ಪ್ರತಿಪಕ್ಷದ ಕೂಲಿಕಾರರು ಅಲ್ಲಿಗೆ ಬಂದರು. ಜೇಕಬ್ಬನನ್ನು ನೋಡಿ, ಅವರು ಹೊರಗೇ ನಿಂತುಕೊಂಡು ತಮ್ಮಲ್ಲಿಯ ಒಬ್ಬನನ್ನು ಒಳಗೆ ಕಳುಹಿಸಿ, ಹೊರಗೆ ಬರಲಿಕ್ಕೆ ನನಗೆ ಹೇಳಿ ಕಳುಹಿದರು. “ಒಳಗೆ ಬನ್ನಿರೆಂದು ಅವರಿಗೆ ತಿಳುಹು” ಎಂದು ನಾನು ಧೈರ್ಯದಿಂದ ಹೇಳಿ ಕಳುಹಲು ಆ ಧೂರ್ತರೆಲ್ಲರು ಒಳಗೆ ಬಂದು ಕುಳಿತರು. ಆ ಪಂಗಡದವರ ನಾಯಕನು ಒಬ್ಬ ಜರ್ಮನ್ನನಿದ್ದನು. ಆತನು ನನ್ನೊಂದಿಗೆ ಪ್ರೇಮದಿಂದ ಸಂಭಾಷಣಕ್ಕೆ ಪ್ರಾರಂಭಿಸಿ, ಜಗಳದ ಮೂಲಕಾರಣವನ್ನು ವಿಚಾರಿಸಲು ಇದ್ದ ಸಂಗತಿಯನ್ನೆಲ್ಲ ನಾನು ಆತನಿಗೆ ಇದ್ದಕ್ಕಿದ್ದ ಹಾಗೆ ಹೇಳಿಬಿಟ್ಟೆನು. ಇದರಿಂದ ಆತನ ಸಮಾಧಾನವಾಗಿ ಆತನು ನಮ್ಮಲ್ಲಿ ಒಡಂಬಡಿಕೆಯನ್ನುಂಟುಮಾಡಿ ಪರಿವಾರಸಹಿತ ಹೊರಟು ಹೋದನು.

ನಂತರ ಆ ಜೇಕಬ್ ಇವರು ನನ್ನನ್ನು ಕುರಿತು “ನೀವು ನಿಶ್ಚಿಂತೆಯಿಂದ ಇರ್ರಿ. ಸಂಯುಕ್ತ ಸಂಸ್ಥಾನದಲ್ಲಿ ಅತ್ಯಾಚಾರ ಮಾಡುವವನಿಗೆ ಶಿಕ್ಷೆ ಮಾಡದೆ ಬಿಡುವದಿಲ್ಲ. ಅಮೇರಿಕನ್ ಜನರಂತೆಯೇ ಪರದೇಶದವರನ್ನೂ ಕೂಡ ಈ ಕಾಯಿದೆಯು ಸಂರಕ್ಷಿಸುತ್ತದೆ” ಎಂದು ಹೇಳಿ ಹೊರಟು ಹೋದರು. ಪ್ರತಿಪಕ್ಷದ ಪಂಗಡದವರು ತಮ್ಮ ಪಾಳಯಕ್ಕೆ ಹೋದ ಬಳಿಕ ಅಲ್ಲಿಯ ಬೇರೆ ಜನರು “ನೀವು ಬಹಳ ನೀಚರೂ ಪುಕ್ಕರೂ ಇರುವಿರಿ; ಒಬ್ಬನ ವಿರುದ್ಧವಾಗಿ ಇಷ್ಟು ಜನರು ಹೋಗಲಿಕ್ಕೆ ನಿಮಗೆ ನಾಚಿಕೆ ಬರಲಿಲ್ಲವೋ? ಹೊಡೆದಾಡುವದಿದ್ದರೆ ನಿಮ್ಮಲ್ಲಿಯ ಒಬ್ಬನನ್ನು ಕಳುಹಿಸಬೇಕಾಗಿತ್ತು.” ಎಂದು ಹೀಯಾಳಿಸಿ ನುಡಿಯಲು, ಅವರು ನಾಚಿಕೊಂಡು ನನ್ನ ಸೇಡು ತೀರಿಸಿಕೊಳ್ಳುವದಕ್ಕಾಗಿ ಆ ದಿನ ರಾತ್ರಿ ಎರಡು ಗಂಟೆಯ ಸಮಯಕ್ಕೆ ನನ್ನ ಕೋಣೆಯ ಮೇಲೆ ಕಲ್ಲು ಒಗೆದರು. ಇದೇ ಸಮಯಕ್ಕೆ ನಾವೆಲ್ಲರೂ ದುಡಿಯುತ್ತಿದ್ದ ಕಂಪನಿಯ ಯಜಮಾನನು ಯೂಜಿನದಿಂದ ಅಲ್ಲಿಗೆ ಬಂದಿದ್ದನು. ಈ ಜಗಳದ ಎಲ್ಲ ಸಂಗತಿಯು ಅವನಿಗೆ ತಿಳಿಯಲು, ಆತನು ಗಿರಣಿಯ ಜಮಾದಾರನಿಗೆ ಆಜ್ಞಾಪಿಸಿ ಆ ಎಲ್ಲ ದುಷ್ಟ ಜನರನ್ನು ತೆಗೆದು ಹಾಕಿದನು. ಊರಜನರು ನನಗೋಸ್ಕರವಾಗಿ ಒಂದು ಸಭೆ ಕೂಡಿಸಿ, ಅಲ್ಲಿ ಆ ಎಲ್ಲ ದುಷ್ಟ ಕೂಲಿಕಾರರ ಕೃತಿಯನ್ನು ನಿಷೇಧಿಸಿದರು.



**ಸಾರಾಂಶವೇನಂದರೆ:**—ಸ್ವಾವಲಂಬಿಗಳಾದ ವಿದ್ಯಾರ್ಥಿಗಳಿಗೆ ಅಮೇರಿಕೆಯವರು ಚನ್ನಾಗಿ ಸಹಾಯ ಮಾಡುವದಲ್ಲದೆ ಅವರ ವಿಷಯವಾಗಿ ನಿಜವಾದ ಸಹಾನುಭೂತಿಯನ್ನೂ ತೋರಿಸುವರು. ಸಮಾಜದೊಳಗಿನ ಜನರು ಇಂಥ ವಿದ್ಯಾರ್ಥಿಗಳನ್ನು ಬಹಳವಾಗಿ ಪ್ರೀತಿಸುವದಲ್ಲದೆ ತಕ್ಕಮಟ್ಟಿಗೆ ಅವರಿಗೆ ಉತ್ತೇಜನ ಕೊಡುವರು.

---

## ಅನೆಯು ಪ್ರವೇಶ.

### ಚೀನ ಜಪಾನದೇಶಗಳ ವಿದ್ಯಾರ್ಥಿಗಳು.

ಹಿಂದೀ ವಿದ್ಯಾರ್ಥಿಗಳಲ್ಲದೆ ಇತರ ದೇಶಗಳ ಬಡವಿದ್ಯಾರ್ಥಿಗಳೂ ಅಮೇರಿಕೆಗೆ ಬಂದು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಕಲಿಯುವರು. ಬಹುತರವಾಗಿ ಚೀನ ಹಾಗೂ ಜಪಾನದ ವಿದ್ಯಾರ್ಥಿಗಳು ಎಲ್ಲ ವಿದ್ಯಾಲಯಗಳಲ್ಲಿ ಕಂಡುಬರುವರು; ಇವರೆಲ್ಲರು ಸ್ವಾವಲಂಬಿಗಳಾಗಿ ವಿದ್ಯಾಭ್ಯಾಸ ಮಾಡುವರು. ಚೀನ ಸರಕಾರದವರು ತಮ್ಮ ವಿದ್ಯಾರ್ಥಿಗಳನ್ನು ಅಮೇರಿಕೆಗೆ ಕಳುಹುವರು. ಆದರೆ ಸರಕಾರ ಪೋಷಿತರಾದ ಇಂಥ ವಿದ್ಯಾರ್ಥಿಗಳ ಸಂಖ್ಯೆ ತೀರ ಕಡಿಮೆ. ಜಪಾನೀ ವಿದ್ಯಾರ್ಥಿಗಳು ಬಹಳ ಹೆಚ್ಚಿರುವರು. ಪ್ಯಾಸಿಫಿಕ್ ಮಹಾಸಾಗರದ ದಂಡೆಯಲ್ಲಿ ಜಪಾನೀ ಜನರ ವಸತಿಯು ಬಹಳವಿದೆ. ಇವರು ಪರಸ್ಪರರಿಗೆ ಸಹಾಯಮಾಡುವರು. ತಮ್ಮ ಉದ್ದೇಶವನ್ನು ಕೊನೆಗಾಣಿಸುವದಕ್ಕೋಸ್ಕರ ಜಪಾನೀ ವಿದ್ಯಾರ್ಥಿಗಳು ಬೇಕಾದ ಕೆಲಸವನ್ನಾದರೂ ಮಾಡಲಿಕ್ಕೆ ಸಿದ್ಧರಿರುವರು. ದುಡಿತಕ್ಕೆ ಅವರು ಕಿಂಚಿತ್ತಾದರೂ ಹಿಂಜರಿಯುವದಿಲ್ಲ. ಖಾನಾವಳಿಗಳಲ್ಲಿಯೂ ಅಂಗಡಿಗಳಲ್ಲಿಯೂ ಬಹುತರವಾಗಿ ಜಪಾನದ ಹುಡುಗರೇ ಕೆಲಸ ಮಾಡುವರು. ದೇಶಕಾಲಾನುಸಾರವಾಗಿ ನಡೆಯುವದು ಅವರಲ್ಲಿಯ ಮುಖ್ಯಗುಣವಾಗಿದೆ. ಮನುಷ್ಯನು ರೂಢಿಯ ಗುಲಾಮನಾಗಿರದಿರುವದೇ ಸಂಸಾರದೊಳಗೆ ಯಶದೊರಕಿಸುವ ಗುರುಮಂತ್ರವಾಗಿದೆ. ತಮ್ಮ ಉದ್ದೇಶದ ಸಿಧ್ಯರ್ಥವಾಗಿ ಎಲ್ಲ ತರದ ಸ್ವಾರ್ಥತ್ಯಾಗ ಮಾಡಲಿಕ್ಕೆ ಪ್ರತಿಯೊಬ್ಬನೂ ಸಿದ್ಧನಾಗಿರಬೇಕು. ಆದರೆ ಅಂತಃಶಕ್ತಿಯು ನಿರ್ಬಲವಾಗುವಂಥ ಯಾವ ಕೃತ್ಯವನ್ನೂ ಆತನು ಮಾಡಬಾರದು. ಅಮೇರಿಕೆಗೆ ಹೋಗಿ ಅಲ್ಲಿ ವಿಶೇಷ ಕಷ್ಟಗಳನ್ನು ನಮ್ಮ ಜನರು ಅನುಭವಿಸುವ ಕಾರಣವು ಅವರು ದೇಶಕಾಲಾನುಸಾರವಾಗಿ ನಡೆಯುವದರಲ್ಲಿ ಹಿಂದುಳಿಯುವದೇ ಆಗಿರುತ್ತದೆ. ಚೀನ ಹಾಗೂ ಜಪಾನೀ ವಿದ್ಯಾರ್ಥಿಗಳಂತೆ ನಮ್ಮ ಜನರಾದರೂ ದುಡಿತದ ಮಹತ್ವವನ್ನರಿತುಕೊಂಡು ವೃಥಾಭಿಮಾನವನ್ನು ಬಿಟ್ಟು ದೇಶಸೇವಾ ತತ್ಪರರಾಗುವದು ಒಳ್ಳೇ ಇಷ್ಟವಾದದ್ದೂ ಅತ್ಯಂತ ಮಹತ್ವದ್ದೂ ಆಗಿರುತ್ತದೆ. ಯುರೋಪದೊಳಗಿನ ಬಹುತರ ಎಲ್ಲ ದೇಶಗಳೊಳಗಿನ ವಿದ್ಯಾರ್ಥಿಗಳು ಅಮೇರಿಕೆಯ ವಿಶ್ವವಿದ್ಯಾಲಯಗಳಲ್ಲಿ ಕಲಿಯುತ್ತಿರುವರು. ಅಮೇರಿಕೆಯೆಂದರೆ ಯುರೋಪದೊಳಗಿನ ಎಲ್ಲ ವರ್ಗಗಳ ಮಿಶ್ರಣದಿಂದಲೇ ಉಂಟಾಗಿರುತ್ತದೆ. ಅಲ್ಲಿ ಪ್ರತಿಯೊಂದು

Digitized by ROJA MUTHIAH RESEARCH LIBRARY
A-1759
T, 7.7 N

ಜಾತಿಯ ಜನರು ಕಂಡುಬರುವದು ನಿಜ ವಿದ್ದಾಗ್ಯೂ ವಿದ್ಯೆಯ ಸಲುವಾಗಿಯೇ ತಮ್ಮ ಮನೆಮಾರುಗಳನ್ನು ಬಿಟ್ಟು ಬಂದ ಅನೇಕ ವಿದ್ಯಾರ್ಥಿಗಳು ಅಮೇರಿಕೆಯ ವಿಶ್ವವಿದ್ಯಾಲಯಗಳಲ್ಲಿ ದೃಷ್ಟಿಗೆ ಬೀಳುವರು. ತಮ್ಮ ತಮ್ಮ ದೇಶದ ಕಲ್ಯಾಣಕ್ಕಾಗಿ ಅವರು ಶ್ರಮಬಟ್ಟು ಕೂಲಿಕುಂಬಳಿ ಮಾಡಿ ವಿದ್ಯಾಧ್ಯಯನ ಮಾಡುವರು.

---

## ೯ನೆಯ ಪ್ರವೇಶ.

## ಸ್ವಾವಲಂಬನದ ಲಾಭಗಳು.

ಪ್ರಸ್ತುತ ಪ್ರಕರಣದಲ್ಲಿ ಸ್ವಾವಲಂಬನದ ತತ್ವವನ್ನಂಗೀಕರಿಸುವದರಿಂದ ಮನುಷ್ಯನ ಮೇಲಾಗುವ ಪರಿಣಾಮವನ್ನು ಕುರಿತು ವಿಚಾರಿಸುವಾ. ಈ ವೊದಲು ಇದರ ವಿಷಯಕ್ಕೆ ಅಲ್ಪವಾಗಿ ವಿವೇಚಿಸಿರುವೆವು; ಆದರೆ ಇಲ್ಲಿ ವಿಸ್ತಾರವಾಗಿ ವಿವೇಚಿಸುವದು ಇಷ್ಟವದೆ. ಅಮೇರಿಕೆಯೊಳಗಿನ ಸ್ವಾವಲಂಬಿಗಳಾದ ವಿದ್ಯಾರ್ಥಿಗಳು ಹೇಗೆ ವರ್ತಿಸುತ್ತಾರೆಂಬುವದು ನಮ್ಮ ವಾಚಕರಿಗೆ ಗೊತ್ತಾಗಿದೆ. ಸ್ವಾವಲಂಬನದ ಮಾರ್ಗಗಳಾವವೆಂಬುವದನ್ನು ಅವರು ಅರಿತಿರುವರು. ಅಂದ ಬಳಿಕ ಸ್ವಾವಲಂಬನದ ತತ್ವದ ಲಾಭಗಳನ್ನು ತಿಳಿದುಕೊಳ್ಳುವದು ಕಠಿಣವಿಲ್ಲ.

**ಮೊದಲನೇ ಲಾಭ:**—ಅಮೇರಿಕೆಯವರ ಮೇಲೆ ಈ ತತ್ವದ ಪರಿಣಾಮವು ಅತಿಶಯವಾಗಿ ಆದ್ದರಿಂದ ಎಷ್ಟೋ ಬಿಕ್ಕಟ್ಟಿನ ಪ್ರಸಂಗಬಂದಾಗ್ಯೂ ಅವರು ಸ್ವಲ್ಪಾದರೂ ಎದೆಗುಂದುವದಿಲ್ಲ; ತಮ್ಮ ಹಕ್ಕುಗಳನ್ನು ಕಾಯ್ದುಕೊಳ್ಳಲಿಕ್ಕೆ ಪ್ರತಿಯೊಬ್ಬ ಬಾಲಬಾಲಿಕೆಯೂ ಮಿತಿಮೀರಿ ಯತ್ನಿಸುವರು. ಯಾರಿಂದಾದರೂ ಅವರಿಗೆ ಅನ್ಯಾಯವಾದರೆ, ತಮ್ಮ ಸತ್ವವನ್ನು ಕಾಯ್ದುಕೊಳ್ಳಲಿಕ್ಕೆ ಅವರು ಹೆದರಿಕೆ ಇಲ್ಲದೆ ಯತ್ನಿಸುವರು. ಹೆದರಿಕೆಯು ಅವರಿಗೆ ಗೊತ್ತೇ ಇಲ್ಲ. ಸಶಕ್ತರೂ ನಿರೋಗಿಗಳೂ ಆಗಿರುವದಕ್ಕಾಗಿ ಅವರು ದಿನಾಲು ವ್ಯಾಯಾಮ ಮಾಡುವರು. ಮುಂಗೈಯಲ್ಲಿ ಕಸುವು ಇದ್ದ ಹೊರತು ಮನುಷ್ಯನಿಗೆ ತನ್ನ ಅಧಿಕಾರದ ಹಾಗೂ ಹಕ್ಕುಗಳ ರಕ್ಷಣೆಮಾಡಲಿಕ್ಕೆ ಬರುವದಿಲ್ಲೆಂಬದನ್ನು ಅವರು ಬಲ್ಲರು. ಈ ಸಂಗತಿಯನ್ನು ನಾನು ಅಮೇರಿಕೆಗೆ ಹೋದ ಬಳಿಕ ಚನ್ನಾಗಿ ಮನಗಂಡೆನು. ತಮ್ಮ ಅಧಿಕಾರವೇನು? ಅದನ್ನು ರಕ್ಷಿಸುವ ಬಗೆ ಹೇಗೆ? ಎಂಬದು ನಮ್ಮ ಜನರಿಗೆ ಗೊತ್ತೇ ಇಲ್ಲ. ಎಲ್ಲರ ಕಡೆಯಿಂದಲೂ ಒದಿಸಿಕೊಂಡು ದಮ್ಮಯ್ಯಾ ಹೇಳುವ ಮನುಷ್ಯನೇ ಸಜ್ಜನನೆಂದು ನಮ್ಮವರು ತಿಳಿಯುವರು. ಹಕ್ಕುಗಳಿಗಾಗಿ ಬಡದಾಡುವವನು ತುಂಟನೆಂದು ನಮ್ಮವರು ಹೇಳುವರು. ನನ್ನ ತಾಯಿತಂದೆಗಳಾದರೂ ಚಿಕ್ಕಂದಿನಲ್ಲಿ ನನಗೆ ಹೀಗೇ ಕಲಿಸಿದ್ದರು. ಆದರೆ ಅಮೇರಿಕೆಗೆ ಹೋದ ಬಳಿಕ ನನಗೆ ಇದಕ್ಕೆ ವಿರುದ್ಧವಾಗಿ ಅನುಭವ ಬಂತು. ಪೆಟ್ಟುತಿಂದು ಸುಮ್ಮನೆ ಕೂಡ್ರುವವನು ಹೇಡಿಯೆಂದೂ ಇಂಥವನ ಜೀವನವು ವ್ಯರ್ಥವೆಂದೂ ಅಮೇರಿಕೆಯವರು ತಿಳಿಯುತ್ತಿದ್ದದ್ದು

Digitized by ROJA MUTHIAH RESEARCH LIBRARY



ನನಗೆ ಗೊತ್ತಾಯಿತು. ವೊದಲು ವೊದಲು ಜಡತಕ್ಕೆ ಜಡತಕೊಡಲಿಕ್ಕೆ ನಾನು ಹೆದರುತ್ತಿದ್ದೆನು. ಆದರೆ ಇಂಥವನಿಗೆ ಅಮೇರಿಕೆಯಲ್ಲಿ ಹೇಡಿಯೆಂದು ತಿಳಿಯುತ್ತಾರೆಂಬುವದು ನನಗೆ ಗೊತ್ತಾದ ಬಳಿಕ ಪ್ರಸಂಗ ಬಂದಾಗ ಒಂದೆರಡು ಸಾರೆ ನನ್ನ ಮೈಮೇಲೆ ಬಂದವರಿಗೆ ಒಳಿತಾಗಿ ಥಳಿಸಿದ್ದರಿಂದ ಅವರು ನನ್ನನ್ನು ವಿಶೇಷವಾಗಿ ಮನ್ನಿಸಹತ್ತಿದರು. ಪಾಶ್ಚಾತ್ಯ ದೇಶಗಳಲ್ಲಿ ಸ್ವತ್ವರಕ್ಷಣ ಮಾಡಿಕೊಳ್ಳುವವರಿಗೇ ಮರ್ಯಾದೆಯದೆ. ಅವರೇ ಮನುಷ್ಯರೆಂದು ತಿಳಕೊಳ್ಳುವರು. ಅಮೇರಿಕೆಯಿಂದ ತಿರುಗಿ ಮ್ಯಾಂಚೆಸ್ತರಕ್ಕೆ ಹೋಗುವಾಗ್ಗೆ ಹಡಗದಲ್ಲಿ ನನಗೂ ಒಬ್ಬ ಸಿದ್ದೀ ಮನುಷ್ಯನಿಗೂ ಕಾಳಗವೆಸಗಿತು. ಆ ಸಿದ್ದಿಯು ಕೂಲಿಕಾರರ ಜಮೇದಾರನಿದ್ದು ನಾವೆಲ್ಲರೂ ಆತನ ಕೈಕೆಳಗೆ ಕೆಲಸ ಮಾಡುತ್ತಿದ್ದೆವು. ಒಂದು ದಿನ ಬೆಳಗಿನ ಹತ್ತು ಗಂಟೆಗೆ ನಾವಿಕರೆಲ್ಲರೂ ಕೆಳಗಿದ್ದ ಹುಲ್ಲಿನ ಪೆಂಡಿಗಳನ್ನು ಹೊರಗೆ ತೆಗೆಯುತ್ತಿದ್ದರು. ಆ ಸಿದ್ದಿಯು ಕೆಳಗಿದ್ದನು; ನಾವೆಲ್ಲರೂ ಡೆಕ್ಕನ ಮೇಲೆ (ಹಡಗದ ಮೇಲಂತಸ್ತಿನಲ್ಲಿ) ಹುಲ್ಲುಪೆಂಡಿಗಳನ್ನು ಕಾಯುತ್ತಿದ್ದೆವು. ಉಳಿದ ಕೂಲಿಕಾರರನ್ನು ಬಿಟ್ಟು ನಾನು ಒಂದು ಬದಿಗೆ ನಿಂತದ್ದನ್ನು ಕಂಡು ಆ ಸಿದ್ದಿಯು "ನಡೆ ಅವರ ಹತ್ತರ ಹೋಗಿ ನಿಲ್ಲು" ಎಂದು ಜಬರಿಸಿದನು.

"ನಿನ್ನ ಕೆಲಸವನ್ನು ನೀನು ಮಾಡು—" ಎಂದು ನಾನು ಗಟ್ಟಿಸಿ ಹೇಳಲು ಆತನು ಸಿಟ್ಟಿನಿಂದ ಕೈಮುಷ್ಟಿಯನ್ನು ಮಾಡಿ "ಇದು ನಿನಗೆ ಗೊತ್ತದೆಯಲ್ಲವೇ?" ಎಂದು ಗರ್ಜಿಸಲು ನಾನು ನನ್ನ ಮುಷ್ಟಿಯನ್ನು ತೋರಿಸಿ "ಇದೇನು ಕಡಿಮೆಯದಲ್ಲ!" ಎಂದು ಪ್ರತ್ಯುತ್ತರ ಕೊಟ್ಟೆನು.

"ಒಳ್ಳೇದು ಮೇಲೆ ಬಂದ ಬಳಿಕ ತೋರಿಸುವೆನು" ಎಂದು ಆತನು ತನ್ನ ಅಚ್ಚಕರ್‍ರಗಿನ ಕಣ್ಣುಗಳನ್ನು ಕೆಕ್ಕರಿಸಿ ನುಡಿಯಲು "ಬಹುತ್ ಅಚ್ಛಾ! ಏನೂ ಅಡ್ಡಿಯಿಲ್ಲ" ಎಂದು ಹೇಳಿ ನಾನು ನನ್ನ ಕೆಲಸಕ್ಕೆ ಹತ್ತಿದೆನು.

ಆ ಸಿದ್ದಿಯು ಕಟಕರವನಿದ್ದು ಬಲು ಗಟ್ಟಿಗನಾಗಿದ್ದನು. ಕೆಲಸ ತೀರಿಸಿಕೊಂಡು ಮೇಲೆ ಬಂದು ನನ್ನನ್ನು ಕುರಿತು "ನನ್ನ ಕೂಡ ಹೋರಾಡುವಿಯಾ;" ಎಂದು ಕೇಳಿದನು.

"ಹೆಚ್ಚಿಗೆ ಮಾತಾಡಿದರೆ ತೆಗೆದು ಕೊಡುವೆನು. ನಾನೇನೂ ನಿನಗೆ ಹೆದರುವವನಲ್ಲ." ಎಂದು ನಾನು ಉತ್ತರ ಕೊಟ್ಟೆನು. ಅದನ್ನು ಕೇಳಿ ಆತನು ಮೈಮೇಲೆ ಬರಲು ನನ್ನ ಜೊತೆಗಾರರಾದ ಅಮೇರಿಕೆಯ ಕೂಲಿಕಾರರು "ಒಂದೇ ಹೆಜ್ಜೆ, ಮುಂದೆ ಬಂದರೆ ಜೋಕೆ! ನಾವೆಲ್ಲರೂ ಕೂಡಿ ನಿನ್ನನ್ನು ಹರಿದು ತಿಂದು ಬಿಡುವೆವು." ಎಂದು ಗದ್ದರಿಸಲು ಆತನು ತಲೆಕೆಳಗೆ ಮಾಡಿಕೊಂಡು ಸುಮ್ಮಗೆ ತನ್ನ ಹಾದೀ ಹಿಡಿದು ಹೋದನು. ಅಂದಿನಿಂದ ಆತನು ನನ್ನ ಕೂಡ ಒಳ್ಳೇ ರೀತಿಯಿಂದ ನಡೆಯಹತ್ತಿದನು. ಆ ಪ್ರಸಂಗದಲ್ಲಿ ನಾನು ಹೆದರಿ ಹಿಂಜರಿದಿದ್ದರೆ ಆತನಿಂದ ನಾನು ಹೊಡೆತ ತಿನ್ನಬೇಕಾಗು

ತ್ರಿತ್ತಲ್ಲದೆ ಅಮೇರಿಕೆಯ ಕೂಲಿಕಾರರೂ ನನ್ನನ್ನು ಹೀಯಾಳಿಸುತ್ತಿದ್ದರು. ಆದುದರಿಂದ ಸ್ವತ್ವರಕ್ಷಣೆಯ ಮಹತ್ವವನ್ನು ಮನುಷ್ಯನು ಚನ್ನಾಗಿ ಅರಿತುಕೊಂಡಿರಬೇಕು. ಈ ತತ್ವವನ್ನು ಪಾಲಿಸುವಾಗ ತಮಗಿಂತ ಗಟ್ಟಿಗನಾದ ಮನುಷ್ಯನ ಕೂಡ ಹೋರಾಡುವ ಪ್ರಸಂಗ ಬಂದಾಗ್ಯೂ ರವಷ್ಟಾದರೂ ಹೆದರಬಾರದು. ಸ್ವಾಭಿಮಾನವು ಮನುಷ್ಯರಿಗೆ ಭೂಷಣವಿದ್ದು ಅದರ ಅಭಾವವಿದ್ದರೆ ಮನುಷ್ಯತ್ವವೇ ನಷ್ಟವಾಗಿ ಪ್ರತಿಯೊಬ್ಬರು ಅಂಥವನನ್ನು ಕಾಲಕಸ ಮಾಡಿಬಿಡುವರು. ಆದುದರಿಂದಲೇ ಎಂಥ ಪ್ರಸಂಗಬಂದರೂ ಎದೆಗೊಟ್ಟು ನಿಲ್ಲುವಂತೆ ಹುಡುಗರಿಗೆ ಚಿಕ್ಕಂದಿನಿಂದ ಸಂಸ್ಕಾರವಾಗಬೇಕು. ಇದರಿಂದ ಅವರಿಗೆ ಸ್ವತ್ವರಕ್ಷಣ ಹಾಗೂ ಶರೀರರಕ್ಷಣೆ ಇವುಗಳ ಮಹತ್ವವು ಅವರಿಗೆ ತಾನಾಗಿಯೇ ತಿಳಿಯುವದು. ಚಿಕ್ಕಂದಿನಿಂದ ಪರಾವಲಂಬಿಗಳಾಗಿರುವವರ ಶರೀರವು ಗಟ್ಟಿಮುಟ್ಟಿಯಾಗುವದಿಲ್ಲ; ಅವರ ಆತ್ಮಿಕ ಬಲವು ಬೆಳೆಯುವದಿಲ್ಲ. ಅವರು ಪುಕ್ಕರಾಗುವರು. ಆದುದರಿಂದ ಮನುಷ್ಯತ್ವವು ಬರುವದಕ್ಕಾಗಿ ಹುಡುಗರಿಗೆ ಚಿಕ್ಕಂದಿನಿಂದ ಸ್ವಾಲವಲಂಬನದ ಶಿಕ್ಷಣ ಕೊಡುವದು ಅವಶ್ಯವದೆ.

**ಎರಡನೇ ಲಾಭವು:—** ನೆಪೋಲಿಯನ್‘ಬೋನಾಪಾರ್ಟನು ಇತಲಿದೇಶದ ಮೇಲೆ ದಂಡೆತ್ತಿ ಸ್ವಿಝರ್ಲಂಡದ ಮಾರ್ಗವಾಗಿ ಹೋಗುವಾಗ ದಾರಿಯಲ್ಲಿ ಆಲ್ಪ್ಸ ಪರ್ವತವು ವಿಘ್ನವನ್ನುಂಟು ಮಾಡಿರುವದಾಗಿ ಸರದಾರರು ಹೇಳಲು “ ಆಲ್ಪ್ಸ ಪರ್ವತವಿರಲಿ ಏನೇ ಇರಲಿ, ನಾನು ಇಟಲಿಗೆ ಅವಶ್ಯವಾಗಿ ಹೋಗಬೇಕು ! ” ಎಂದು ನುಡಿದನು. ಆತನ ಆತ್ಮ ವಿಶ್ವಾಸವು ಪ್ರಚಂಡವಾಗಿತ್ತು. ಎಂಥ ಬಿಕ್ಕಟ್ಟಿನ ಕೆಲಸವಿದ್ದರೂ ಅವನು ತೊಂದರೆಗಳನ್ನು ಲೆಕ್ಕಿಸದೆ ಅವುಗಳನ್ನು ಕೊನೆಗಾಣಿಸುತ್ತಿದ್ದನು. ಜಗತ್ತಿನ ಇತಿಹಾಸದಲ್ಲಿ ಇಂಥ ಉದಾಹರಣೆಗಳು ಅನೇಕ ವಿರುವವು. ಜೀವಿತಸಾಫಲ್ಯ ಹೊಂದಿದವರೆಲ್ಲರೂ ಆತ್ಮವಿಶ್ವಾಸವುಳ್ಳವರೇ ಆಗಿದ್ದರು. ಸ್ವಾವಲಂಬನದಿಂದ ನಡೆಯುವವರಲ್ಲಿಯೇ ಈ ಗುಣವು ಬರುವದು. ನಮ್ಮ ಜೀವಿತವು ಒಂದು ತರದ ಯುದ್ಧವಿದೆ. ಪ್ರಾರಂಭದಿಂದಲೂ ಯುದ್ಧದ ಶಿಕ್ಷಣವನ್ನು ಹೊಂದಿದವನೇ ಈ ಜೀವನ ಸಂಗ್ರಾಮದಲ್ಲಿ ಯಶಸ್ಸುದೊರಕಿಸುವನು. ಚಿಕ್ಕಂದಿನಿಂದ ಇದರ ಅಭ್ಯಾಸವನ್ನು ಮಾಡುವದರಿಂದ ಮನುಷ್ಯನಲ್ಲಿ ಆತ್ಮವಿಶ್ವಾಸವು ಬಲಹೊಂದುತ್ತದೆ; ತನ್ನ ಯೋಗ್ಯತೆಯೂ ಅಯೋಗ್ಯತೆಯೂ ಮನವರಿಕೆಯಾಗುವದಲ್ಲದೆ ಬಿಕ್ಕಟ್ಟಿನ ಪ್ರಸಂಗಗಳಿಗೆ ಹೇಗೆ ಎದುರಾಗಬೇಕೆಂಬವದು ಸಹ ಚನ್ನಾಗಿ ತಿಳಿಯುವದು.

ಇದಕ್ಕೆ ವಿಪರೀತವಾಗಿ ಜೀವಿತವೆಂದರೆ ಅದೊಂದು ಸಂಗ್ರಾಮವೆಂದು ಅರಿತುಕೊಂಡು ಅದರ ಅಭ್ಯಾಸವನ್ನು ಮಾಡದಿದ್ದವರು ಸಣ್ಣ ಪುಟ್ಟ ಪ್ರಸಂಗ ಬಂದಾಗ್ಯೂ ಹೆದರಿ ಹಿಂಜರಿಯುವರು. ಅವರು ತಮ್ಮ ಕೆಲಸಗಳನ್ನು ಆರ್ಜವ, ಕಪಟ ಮೊದಲಾದ ವಾಮಮಾರ್ಗಗಳಿಂದ ನೆರವೇರಿಸಿಕೊಳ್ಳುವರು. ಇಂಥ ಜನರು ಯಾವದೊಂದು ದೇಶದ

Digitized by ROJA MUTHIAH RESEARCH LIBRARY



ಲ್ಲಾಗಲಿ ಸಮಾಜದಲ್ಲಾಗಲಿ ಹೆಚ್ಚಾದರೆ ಅದರ ಅವನತಿಯು ಕಟ್ಟಿಟ್ಟದ್ದೇ ! ಆದುದರಿಂದ ಅಮೇರಿಕೆಯವರಂತೆ ನಾವು ನಮ್ಮ ಮಕ್ಕಳಿಗೆ ಸ್ವಾವಲಂಬನದ ಶಿಕ್ಷಣವನ್ನು ಚಿಕ್ಕಂದಿನಲ್ಲಿಯೇ ಕೊಟ್ಟಲ್ಲಿ ಮುಂದೆ ಅವರು ಯಾವ ಕೆಲಸಕ್ಕೂ ಹಿಂಜರಿಯಲಿಕ್ಕಿಲ್ಲ. ಸಮಾಜೋನ್ನತಿಗೆ ಈ ಗುಣವು ಅತ್ಯಾವಶ್ಯಕವೆಂಬುವದು ನಿಃಸಂಶಯವು.

**ಮೂರನೇ ಲಾಭ:—** ಸ್ವಾವಲಂಬನದಿಂದ ಮನುಷ್ಯನು ಕರ್ಮವೀರನಾಗುವದು ಮೂರನೇ ಲಾಭವು. ಇಂಗ್ಲಿಷರು ಮೊದಲು ಹಿಂದುಸ್ಥಾನದ ಸಂಗಡ ವ್ಯಾಪಾರವನ್ನು ಪ್ರಾರಂಭಿಸಿ ಈ ಗುಣದಿಂದಲೇ ಅಪರಿಮಿತ ಲಾಭವನ್ನು ಹೊಂದಿದರು. ದೊಡ್ಡ ದೊಡ್ಡ ಸಂಘಗಳನ್ನು ಸ್ಥಾಪಿಸಿ ಅವುಗಳನ್ನು ಯಶಸ್ಕರವಾಗಿ ನಡೆಸುವದು ಈ ಗುಣವಿಲ್ಲದೆ ಆಗದು. ಪರಾವಲಂಬಿಗಳಿಗೆ ಮುಂದಿನ ಧೋರಣ ತಿಳಿಯುವದಿಲ್ಲ. ಅವರ ದೃಷ್ಟಿಯು ಸಂಕುಚಿತವಾಗಿರುತ್ತದೆ. ಆಯುಷ್ಯದಲ್ಲಿ ಅವರಿಗೆ ಯಾವ ಮಹತ್ವಾಕಾಂಕ್ಷೆಯೂ ಇರುವದಿಲ್ಲ. ಸಿಕ್ಕಷ್ಟರಲ್ಲಿಯೇ ತಮ್ಮ ನಿರ್ವಾಹವನ್ನು ಸಾಗಿಸಿ— ತಮ್ಮನ್ನು ಧನ್ಯರೆಂದು ಅವರು ಭಾವಿಸುವರು. ತಮ್ಮ ಊರು ಬಿಟ್ಟು ಹತ್ತಿಪ್ಪತ್ತು ಮೈಲು ದೂರ ಹೋಗುವದೆಂದರೆ ಇವರಿಗೆ ಪರದೇಶಗಮನ ಮಾಡಿದಂತಾಗುವದು. ಐವತ್ತು ವರ್ಷಗಳ ಹಿಂದೆ ಅಮೇರಿಕೆಯ ವ್ಯಾಪಾರವು ಹೆಚ್ಚಿದ್ದಿಲ್ಲ. ಆದರೆ ಅಲ್ಲಿಯ ಜನರು ಸ್ವಾವಲಂಬಿಗಳೂ, ಮಹತ್ವಾಕಾಂಕ್ಷಿಗಳೂ, ಸಾಹಸಿಗಳೂ ಆದ್ದರಿಂದ ಇಡೀ ಜಗತ್ತಿನಲ್ಲೆಲ್ಲ ಅವರ ವ್ಯಾಪಾರವು ಹಬ್ಬಿದೆ. ಅಲ್ಲಿಯ ಧನಿಕರು ಸ್ವಂತ ಧೈರ್ಯದಿಂದ ಧನದೊರಕಿಸಿ ವ್ಯಾಪಾರ ಉದ್ಯೋಗಗಳನ್ನು ಮಾಡಿ ಹೆಸರಾಗಿರುವರು. ಅಂಡ್ರ್ಯೂ ಕಾರ್ನೇಜಿಯ ಜನ್ಮವು ಬಡತನದಲ್ಲಿ ಆಯಿತು. ಆದರೂ ಆತನು ಎದೆಗುಂದದೆ, ದುಡಿತವನ್ನವಲಂಬಿಸಿ ಬರಬರುತ್ತಾ ಕೋಟ್ಯಧೀಶನಾದನು. ಆತನ ಚರಿತ್ರವು ಸ್ವಾವಲಂಬನೆಯ ಮೂರ್ತಿಮತ್ತಾದ ಉದಾಹರಣೆಯಾಗಿದೆ.

**ನಾಲ್ಕನೇ ಲಾಭವು:—** ದೇವರು ಮನುಷ್ಯನಿಗೆ ತರತರದ ಅಂತಃಶಕ್ತಿಗಳನ್ನು ಕೊಟ್ಟಿರುವನು. ಸ್ವಾತಂತ್ರ್ಯ ಹಾಗೂ ಸ್ವಾವಲಂಬನಗಳಿಂದ ಈ ಶಕ್ತಿಗಳು ವಿಕಸಿತವಾಗುತ್ತವೆ. ಎರಡನೆಯವರ ಮೇಲೆ ಅವಲಂಬಿಸಿರುವ ಜನರಿಗೆ ತಮ್ಮ ಈ ಅಂತಃಶಕ್ತಿಗಳನ್ನು ಉಪಯೋಗಿಸುವ ಪ್ರಸಂಗ ಬರುವದಿಲ್ಲಾದ್ದರಿಂದ ಅವು ಯೋಗ್ಯ ಬೆಳವಣಿಗೆ ಹೊಂದುವದಿಲ್ಲ. ನಿಸರ್ಗದತ್ತ ಗುಣಗಳ ಬೆಳವಣಿಗೆಯು ಅಮೇರಿಕೆಯಲ್ಲಿ ಅಪ್ರತಿಹತವಾಗಿ ಸಾಗುವದರಿಂದ ಅಲ್ಲಿ ಹೊಸ ಹೊಸ ಶೋಧಗಳು ದಿನಾಲು ಹುಟ್ಟುತ್ತವೆ. ಅದರಿಂದ ಈ ಪಾತಾಳವಾಸಿಗಳು ಧನಧಾನ್ಯ ಸಂಪನ್ನರಾಗಿರುವರು.

ವಾಚಕರಿಗೆ ಅಮೇರಿಕೆಯ ಉನ್ನತಿಯ ಕಾರಣವು ತಿಳಿಯಬೇಕೆಂಬುವದರ ಸಲುವಾಗಿ ಅವರಲ್ಲಿಯ ಕೆಲವು ಸದ್ಗುಣಗಳನ್ನು ನಾವು ಇದುವರೆಗೆ ವಿವೇಚಿಸಿದೆವು. ದುಡಿ

ತದ ಮಹತ್ವವನ್ನು ಅವರು ಚನ್ನಾಗಿ ಅರಿತುಕೊಂಡು ಮನುಷ್ಯನಿಗೆ ಆತನ ಯೋಗ್ಯತೆಯ ಮೇರೆಗೆ ಅಧಿಕಾರವನ್ನು ಕೊಡಲಿಕ್ಕೆ ಸಿದ್ಧರಿರುವರು. ಆದುದರಿಂದಲೇ ಕಟ್ಟಿಗೆ ಕೊರೆಯುವ ಬಡ ತಾಯಿತಂದೆಗಳ ಮಗನಾದ ಅಬ್ರಹ್ಯಾಮ ಲಿಂಕನ್ನನೂ ಕಟ್ಟಿಗೆಯು ಹೊರೆ ಮಾರುವ ಬಡ ಗ್ರ್ಯಾಂಟನೂ ತಮ್ಮ ಕರ್ತೃತ್ವದಿಂದ ಅಮೇರಿಕೆಯ ಪ್ರೆಸಿಡೆಂಟನ ಅಧಿಕಾರವನ್ನು ಹೊಂದಿದರು. ಗಾರಫೀಲ್ಡನು ಹುಟ್ಟ ಬಡವನಾದಾಗ್ಯೂ ಸ್ವಾವಲಂಬನದ ಮಾರ್ಗವನ್ನು ಸ್ವೀಕರಿಸಿ ಪ್ರೆಸಿಡೆಂಟನಾದನು.

ಪ್ರತಿಯೊಂದು ಶಕ್ತಿಯ ವಿಕಾಸಹೊಂದಲಿಕ್ಕೆ ಅಮೇರಿಕೆಯಂಥ ಅನುಕೂಲ ಸ್ಥಳದಲ್ಲಿ ಇಂಥ ಸಂಗತಿಗಳು ಸಂಭವನೀಯವಾಗಿವೆ. ಅಮೇರಿಕನ್ನರು ಸ್ವಾವಲಂಬಿಗಳಾಗಿರುವ ವರೆಗೆ ಅವರ ದೇಶವು ಉನ್ನತಿಯನ್ನು ಹೊಂದುತ್ತಲೇ ಇರುವದು. ದೇವರು ನ್ಯಾಯಿಯು, ಯಾರ ಪಕ್ಷಪಾತವೂ ಅವನಿಗಿಲ್ಲ. ಎಲ್ಲರನ್ನು ಅವನು ಸರಿಯಾಗಿ ಪ್ರೀತಿಸುವನು. ಅವನಾಜ್ಞೆಯನ್ನು ಪಾಲಿಸುವವರು ಯಾವಾಗಲೂ ಉನ್ನತಿಯನ್ನೇ ಹೊಂದುವರು; ಆಜ್ಞೆಮೀರಿ ನಡೆಯುವವರು ದಾರಿದ್ರ್ಯ, ರೋಗ, ಬರ ಮುಂತಾದ ವಿಪತ್ತುಗಳಿಗೆ ಗುರಿಯಾಗುವರು.

ಕನ್ನಡಿಗರೇ! ಬನ್ನಿ, ಅಮೇರಿಕೆಯ ಬಡವಿದ್ಯಾರ್ಥಿಗಳಿಂದ ನಾವೇನಾದರೂ ಕಲಿತುಕೊಳ್ಳುವಾ! ದುಡಿತವು ಎಂಥದೇ ಇರಲಿ; ಅದನ್ನು ಪ್ರಾಮಾಣಿಕತನದಿಂದ ಮಾಡುವದರಲ್ಲಿ ಕೀಳತನವಿಲ್ಲ. ಸಮಾಜದಲ್ಲಿ ಇತರ ಸಭ್ಯಗೃಹಸ್ಥರಿಗೆ ಇರುವ ಅಧಿಕಾರಗಳು ಕೂಲಿಕಾರನಿಗೂ ಇರುವವು. ದುಡಿತದಿಂದ ನಾವು ಹೀನರಾಗದೆ ನಮ್ಮ ಅವಯವಗಳು ಪರಿಪುಷ್ಟವಾಗುವವು. ಕೂಲಿಕಾರನೇ ಸಮಾಜದ ಮುಖ್ಯ ಘಟಕಾವಯವವು! ಆದುದರಿಂದ ಕೂಲಿಕಾರರನ್ನು ಹೀನರೆಂದೆಣಿಸದೆ ಅವರಿಗೆ ಯೋಗ್ಯ ಸನ್ಮಾನ ಮಾಡಿ ಅವರ ಶಿಕ್ಷಣದ ವ್ಯವಸ್ಥೆಯನ್ನು ಮಾಡುವೆವೆಂದು ಈಹೊತ್ತಿನಿಂದ ನಿಶ್ಚಯಿಸುವಾ.

ಕೊನೆಯಲ್ಲಿ, ಪರಮಾತ್ಮನು ನಮ್ಮ ವಿದ್ಯಾರ್ಥಿಗಳಿಗೆ ಆತ್ಮಿಕ ಬಲವನ್ನು ಕೊಡಲೆಂದೂ ಅದರಿಂದ ಅವರು ಸ್ವಾವಲಂಬನದ ಪಾಠವನ್ನು ಕಲಿತು ಶ್ರಮದ ಮಹತ್ವವನ್ನರಿತುಕೊಂಡು ದೇಶದ ಉದ್ಯೋಗವ್ಯವಸಾಯಗಳನ್ನು ಬೆಳಿಸಲೆಂದೂ ನಮ್ಮ ದೇಶದಲ್ಲಿ ಪ್ರಚಲಿತವಾಗಿರುವ ಅನಿಷ್ಟ ರೂಢಿಗಳನ್ನು ನಿರ್ಮೂಲಿಸಲೆಂದೂ ಜಗದೀಶನನ್ನು ಏಕೋಭಾವದಿಂದ ಪ್ರಾರ್ಥಿಸಿ ವಿರಾಮ ಹೊಂದುವೆವು.

---

Digitized by ROJA MUTHIAH RESEARCH LIBRARY

ದಿನಾಂಕ ಸೂಚಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಸರಸ್ವತಿ ಭಂಡಾರ

ವಿ. ಸೂ: ೧೫ ದಿನಗಳಿಗಿಂತ ಹೆಚ್ಚುಕಾಲ ಯಾರು ಪುಸ್ತಕವನ್ನಿಟ್ಟುಕೊಳ್ಳಲಾಗದು.

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
|---|---|

1759

ಲೇಖಕ: ಕುಲಕರ್ಣಿ (ಶ್ರೀನಿವಾಸ ಪಾಂಡುರಂಗ).
ಶಿರೋನಾಮೆ: ಅಮೇರಿಕೆಯೊಳಗಿನ ಬಡ ವಿದ್ಯಾರ್ಥಿಗಳು.

ವ. ಸಂ: T, 7.7 N

ಕ್ರ. ಸಂ: ~~1756.~~ 1759

ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY